ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 25 ಗುರುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 70 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಎಸ್‌ಎನ್‌ಎಲ್ ಮೈಸೂರು ವಲಯದಿಂದ ಡಿಎನ್‌ಬಿ ಯೋಜನೆ

ಹಳ್ಳಿಗಳಿಗೆ ಉಚಿತ ಇಂಟರ್‌ನೆಟ್ ಸಂಪರ್ಕ, ಸ್ವಯಂ ಉದ್ಯೋಗ ಅಭಿಯಾನ




ಮೈಸೂರು, ಜೂ.24(ಎಂಕೆ)– ಗ್ರಾಮೀಣ ಭಾಗದ ಸಬಲೀಕರಣಕ್ಕಾಗಿ ಬಿಎಸ್‌ಎನ್‌ಎಲ್ ಮೈಸೂರು ವಲಯವು 'ಡಿಜಿಟಲ್ ಭಾರತ್ ನಿಧಿ (ಡಿಎನ್‌ಬಿ) ಯೋಜನೆಯಡಿ ಹಳ್ಳಿಗಳಲ್ಲಿ ಉಚಿತ ಎಫ್‌ಟಿಟಿಎಚ್ ಇಂಟರ್ನೆಟ್ ಅಳವಡಿಕೆ ಹಾಗೂ ಗ್ರಾಮೀಣ ಸ್ವಯಂ ಉದ್ಯೋಗ ಅಭಿಯಾನ ಹಮ್ಮಿಕೊಂಡಿದೆ.

ಭಾರತನೆಟ್ ಯೋಜನೆಯಡಿ ವೈಫೈ ರೌಟರ್ ಮತ್ತು ಆಪ್ಟಿಕಲ್ ಫೈಬರ್ ಕೇಬಲ್ ಅನ್ನು ಸಂಪೂರ್ಣ ಉಚಿತವಾಗಿ ನೀಡಲಾಗುವುದು. ಯಾವುದೇ ಇನ್‌ಸ್ಟಾಲೇಷನ್ ಶುಲ್ಕ ಇಲ್ಲದೆ ಗ್ರಾಹಕರು ಕೇವಲ ಮಾಸಿಕ ಚಂದಾದಾರಿಕೆ ಪಾವತಿಸಬೇಕಿರುತ್ತದೆ.

ಗ್ರಾಮೀಣ ಗ್ರಾಹಕರಿಗಾಗಿ ಕೇವಲ 259 ರೂ. ಮಾಸಿಕ ಪ್ಲಾನ್ ಪರಿಚಯಿಸಲಾಗಿದ್ದು, ಇದರಲ್ಲಿ 25 ಎಂಬಿಪಿಎಸ್ ವೇಗದ 700 ಜಿಬಿ ಡೇಟಾ, ಅನಿಯಮಿತ ಕರೆಗಳು ಹಾಗೂ ಪ್ರಸಾರ ಭಾರತಿ ಟಿವಿ, ವೇವ್ಸ್ ಆಪ್, ಬಿಎಸ್‌ಎನ್‌ಎಲ್ ಐಎಫ್‌ಟಿವಿ ಚಾನೆಲ್‌ಗಳ ಸೌಲಭ್ಯವಿರಲಿದೆ.

ಸ್ವಯಂ ಉದ್ಯೋಗಾವಕಾಶ: ಗ್ರಾಮೀಣ ಯುವಕರು ಬಿಎಸ್‌ಎನ್‌ಎಲ್‌ನೊಂದಿಗೆ ಕೈಜೋಡಿಸಿ 'ಭಾರತ್‌ನೆಟ್ ಉದ್ಯಮಿ' (ಬಿಎನ್‌ಯು) ಆಗಿ ನೋಂದಾಯಿಸಿಕೊಳ್ಳಬಹುದು ಮತ್ತು ಹಳ್ಳಿಗಳಿಗೆ ಇಂಟರ್ನೆಟ್ ಸೇವೆ ಒದಗಿಸುವ ಮೂಲಕ ಆದಾಯ ಗಳಿಸಬಹುದಾಗಿದೆ. ಈ ಉಚಿತ ಇಂಟರ್ನೆಟ್ ಸಂಪರ್ಕ ಪಡೆಯಲು ಅಥವಾ ಉದ್ಯಮಿಯಾಗಿ ನೋಂದಾಯಿಸಿಕೊಳ್ಳಲು ಸಾರ್ವಜನಿಕರು ಹತ್ತಿರದ ಬಿಎಸ್‌ಎನ್‌ಎಲ್ ಗ್ರಾಹಕ ಸೇವಾ ಕೇಂದ್ರವನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 0821–2364545 ಮೊ.ನಂ. 9449031004 ಇಮೇಲ್: agmcfamys@gmail.com ಸಂಪರ್ಕಿಸುವಂತೆ ಬಿಎಸ್‌ಎನ್‌ಎಲ್ ಮೈಸೂರು ವ್ಯವಹಾರ ವಲಯದ ಮಹಾ ಪ್ರಬಂಧಕ ರಾಜೇಂದ್ರಕುಮಾರ್ ಸಿಂಗ್ ತಿಳಿಸಿದ್ದಾರೆ.

ಪ್ರೊ.ರಾಮದಾಸ್ ಸ್ಮರಣಾರ್ಥ ಸಂವಾದ, ಪ್ರಶಸ್ತಿ ಪ್ರದಾನ


ಪ್ರೊ.ರಾಮಸ್ವಾಮಿ

ಮೈಸೂರು, ಜೂ.24(ಎಂಕೆ)–ದೇಸಿ ರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಜೂ.28ರ ಬೆಳಗ್ಗೆ 10.30ಕ್ಕೆ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ವಿಚಾರವಾದಿ, ಪ್ರಗತಿಪರ ಚಿಂತಕ ಪ್ರೊ.ಕೆ. ರಾಮದಾಸ್ ಸ್ಮರಣಾರ್ಥ ಸಂವಾದ, ಪುಸ್ತಕ ಬಿಡುಗಡೆ, ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಸಮಾರಂಭ ಉದ್ಘಾಟಿಸಲಿದ್ದು, ಪ್ರೊ.ಕಾಳಚನ್ನೇಗೌಡ, ಕೆ.ವೆಂ.ವಾಜು, ಮೀನಾ ಮೈಸೂರು, ನಾ.ದಿವಾಕರ್, ಟಿ.ಗುರುರಾಜ್, ಪ್ರೊ.ಎ.ಎಂ.ಶಿವಸ್ವಾಮಿ, ನಂದಾ ಹಳೆಮನೆ, ಧನಂಜಯ ಯಲಿಯೂರು ಸಂವಾದದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಇದೇ ವೇಳೆ 'ಹಿಂದೂ ಸಮಾಜ ಮತ್ತು ಮೌಢ್ಯ' ಹಾಗೂ 'ಗಾಂಧಿ ಮತ್ತು ಅಂಬೇಡ್ಕರ್ ಮುಖಾಮುಖಿ' ಎಂಬ ಪುಸ್ತಕಗಳನ್ನು ಪ್ರೊ.ಚ.ಸರ್ವಮಂಗಳ ಬಿಡುಗಡೆ ಮಾಡಲಿದ್ದಾರೆ. ಹಾಗೆಯೇ ಲೇಖನ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾಗಿರುವವರಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು. ಪ್ರೊ.ಕಾಳೇಗೌಡ ನಾಗವಾರ, ನಾ.ದಿವಾಕರ್, ಧನಂಜಯ ಯಲಿಯೂರು ಉಪಸ್ಥಿತರಿದ್ದರು.

ನಾಲ್ವಡಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಬನ್ನೂರು ರಾಜುಗೆ ಕಸಾಪ ಅಭಿನಂದನೆ


ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಕಸಾಪ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು,ಜೂ.24–ಬಾಲ್ಯದಿಂದಲೂ ಸಾಹಿತ್ಯವನ್ನೇ ಧ್ಯಾನಿಸುತ್ತಾ ಅಕ್ಷರಶಃ ಅಕ್ಷರಗಳನ್ನೇ ಬದುಕು ಮಾಡಿಕೊಂಡಿರುವ ಸಾಹಿತಿ ಬನ್ನೂರು ಕೆ.ರಾಜು ಅವರಿಗೆ ಕಳೆದ ಸುಮಾರು ನಾಲ್ಕು ದಶಕಗಳಿಂದಲೂ ಬರವಣಿಗೆಯೇ ಜೀವನ.

ಹಾಗಾಗಿ ಇವರ ಸಾಹಿತ್ಯ ಕೃಷಿ ಕೂಡ ತುಂಬಾ ದೊಡ್ಡದಿದೆ. ವಿವಿಧ ಪ್ರಾಕಾರಗಳಲ್ಲಿ ನೂರೈವತ್ತಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಬರೆದಿರುವ ಇವರು ಸುಮಾರು ಆರು ಸಾವಿರ ಉಪಯುಕ್ತ ಬಿಡಿ ಲೇಖನಗಳನ್ನು ನಾಡಿಗೆ ನೀಡಿದ್ದಾರೆ. ಇದನ್ನು ಪರಿಗಣಿಸಿ ಸರ್ಕಾರದ ಕನ್ನಡ–ಸಂಸ್ಕೃತಿ ಇಲಾಖೆ ಪ್ರಸ್ತುತ ಸಾಲಿನ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಯನ್ನು ಬನ್ನೂರು ರಾಜು ಅವರಿಗೆ ರಾಜ್ಯಮಟ್ಟದಲ್ಲಿ ನೀಡಿ ಗೌರವಿಸಿದೆ.

ಈ ಸುಸಂದರ್ಭದಲ್ಲಿ ಸಾಹಿತಿಗಳ ಮಾತೃ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಗೆ ಭಾಜನರಾಗಿರುವ ಬನ್ನೂರು ಕೆ.ರಾಜು ಅವರನ್ನು ವಿಶೇಷವಾಗಿ ಅಭಿನಂದಿಸಿತು. ರಾಜು ಅವರ ಸ್ವಗೃಹದಲ್ಲಿ ಬಹಳ ಸಾರ್ಥಕವಾಗಿ ಅಷ್ಟೇ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರು ಪ್ರಶಸ್ತಿ ಪುರಸ್ಕೃತ ರಾಜು ಅವರಿಗೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಸನ್ಮಾನಿಸಿದರು. ಈ ವೇಳೆ ಸಂಸ್ಕೃತಿ ಚಿಂತಕ ರಘುರಾಂ ವಾಜಪೇಯಿ, ಸವಿಗನ್ನಡ ಪತ್ರಿಕೆ ಸಂಪಾದಕ ರಂಗನಾಥ್ ಮೈಸೂರು, ಪತ್ರಕರ್ತ ಅನಂತು, ಅಮೋಘವರ್ಷ ಎಸ್.ನಾಗರಾಜು, ಮೈಸೂರು ಯೋಗೀಶ್ ಟ್ರಸ್ಟ್ ಸಂಸ್ಥಾಪಕ ಯೋಗ ಪ್ರಕಾಶ್, ಸತೀಶ್ ಇನ್ನಿತರರು ಭಾಗವಹಿಸಿದ್ದರು.


ಶ್ರೀ ರಾಮಮಂದಿರ ದೇಣಿಗೆ ಅಕ್ರಮ: ಮಾಹಿತಿ ಬಹಿರಂಗಕ್ಕೆ ಹೊಯ್ಸಳ ಆಗ್ರಹ

ಮೈಸೂರು : ಅಯೋಧ್ಯೆಯ ಶ್ರೀರಾಮ ಮಂದಿರವನ್ನು ಬಿಜೆಪಿಯು ವರ್ಷಗಳ ಕಾಲ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿದೆ. ಅವರ ಹೆಸರಿನಲ್ಲಿ ಮತ ಪಡೆದ ಬಿಜೆಪಿ ಮಂದಿರದ ದೇಣಿಗೆ ಹಣದ ಅಕ್ರಮ ಆರೋಪದ ಬಗ್ಗೆ ದೇಶದ ಜನರಿಗೆ ಸ್ಪಷ್ಟ ಉತ್ತರ ನೀಡಬೇಕು ಎಂದು ಕೆಆರ್.ಯೂತ್ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ ಹೇಳಿದರು.

ಈ ಕುರಿತು ಪ್ರಕಟಣೆ ನೀಡಿರುವ ಅವರು ಶ್ರೀರಾಮಮಂದಿರವು ಯಾವುದೇ ಒಂದು ಪಕ್ಷದ ಸ್ವತ್ತಲ್ಲ, ಅದು ಕೋಟ್ಯಾಂತರ ಭಾರತೀಯರ ನಂಬಿಕೆಯ ಪ್ರತೀಕ. ಭಕ್ತರು ಸಮರ್ಪಿಸಿದ ಹಣದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿ ಬರುತ್ತಿರುವಾಗ, ಬಿಜೆಪಿ ಮತ್ತು ಸಂಬಂಧಿತ ಆಡಳಿತ ಸಂಸ್ಥೆಗಳು ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಭಕ್ತರ ಭಾವನೆಗಳನ್ನು ರಾಜಕೀಯವಾಗಿ ಬಳಸಿಕೊಳ್ಳುವವರು, ಅದೇ ಭಕ್ತರ ಹಣದ ಸುರಕ್ಷತೆ, ಪಾರದರ್ಶಕತೆಗೆ ಉತ್ತರದ್ವಾಯಿತ ಹೊರಬೇಕು. ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಲಾಭ ಪಡೆದವರು ಈಗ ಭಕ್ತರ ಹಣದ ಲೆಕ್ಕವನ್ನು ದೇಶದ ಜನರ ಮುಂದೆ ಇಡಬೇಕು ಎಂದು ಆಗ್ರಹಿಸಿದ್ದಾರೆ. ಈ ಪ್ರಕರಣದ ಸತ್ಯಾಂಶ ಬಹಿರಂಗಪಡಿಸಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕು. ಧರ್ಮ ಮತ್ತು ದೇವರ ಹೆಸರಿನಲ್ಲಿ ಭ್ರಷ್ಟಾಚಾರ ಅಥವಾ ಅಕ್ರಮವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದಿದ್ದಾರೆ.

ನಿಧನ


ರಾಚಯ್ಯ



ಮೈಸೂರು, ಜೂ. 24–ಮೈಸೂರಿನ ಗಾಂಧಿನಗರದ ನಿವಾಸಿ ರಾಚಯ್ಯ (65) ಕೆ.ಆರ್.ಆಸ್ಪತ್ರೆಯಲ್ಲಿ ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಸಣ್ಣಮ್ಮ, ಮಕ್ಕಳಾದ ರಾಮಣ್ಣ, ಲಕ್ಷ್ಮಣ. ಶಿವರಾಜ್ ಮತ್ತು ವೀಣಾ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿಡ ನೆಡುವುದಕ್ಕಿಂತ ಸಹಜ ಕಾಡು ಸಂರಕ್ಷಣೆ ಅನಿವಾರ್ಯ

ವಿಶ್ವ ಪರಿಸರ ದಿನಾಚರಣೆಯಲ್ಲಿ ವನ್ಯಜೀವಿ ತಜ್ಞ ಕೃಪಾಕರ ಅಭಿಮತ


ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ನಡೆದ 'ವಿಶ್ವ ಪರಿಸರ ದಿನಾಚರಣೆ'ಯಲ್ಲಿ ಮೇಸ್ತ್ರಿ ಮಾದಯ್ಯ ಅವರಿಗೆ 'ಪರಿಸರ ಪ್ರಜ್ಞಾ–2026' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಮೈಸೂರು,ಜೂ.24(ಎಂಟಿವೈ)– ಪರಿಸರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗಿಡ ನೆಡುವುದಕ್ಕಿಂತ ಸಹಜವಾಗಿ ನಿರ್ಮಾಣವಾಗಿರುವ ಕಾಡನ್ನು ಸಂರಕ್ಷಿಸಿಕೊಳ್ಳುವ ಅನಿವಾರ್ಯತೆ ಇದೆ ಎಂದು ವನ್ಯಜೀವಿ ತಜ್ಞ ಕೃಪಾಕರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಬೋಧಿವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ಸಹಯೋಗದಲ್ಲಿ ಬುಧವಾರ ನಡೆದ 'ವಿಶ್ವ ಪರಿಸರ ದಿನಾಚರಣೆ'ಯಲ್ಲಿ ಮೇಸ್ತ್ರಿ ಮಾದಯ್ಯ ಅವರಿಗೆ 'ಪರಿಸರ ಪ್ರಜ್ಞಾ–2026' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಚೀನಾದಲ್ಲಿ ಈ ಹಿಂದೆ ಇದ್ದ ಬೃಹತ್ ಹುಲ್ಲುಗಾವಲು ಪ್ರದೇಶವನ್ನು ಅನುಪಯುಕ್ತವೆಂದು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲಾಯಿತು. ಇದರಿಂದ ಚೀನಾದಲ್ಲಿ ಮರುಭೂಮಿ ವಿಸ್ತಾರವಾಯಿತು. ಗಿಡ ನೆಡುವ ತೀರ್ಮಾನ ವಿರೋಧಿಸಿದ ವಿಜ್ಞಾನಿಯನ್ನು 8 ವರ್ಷ ಜೈಲಿಗೆ ಹಾಕಿದರು. ಬಳಿಕ ಪರಿಸ್ಥಿತಿ ವಿಕೋಪಕ್ಕೆ ತಲುಪಿದಾಗ ಕ್ಷಮೆ ಕೇಳಿ, ಪರಿಹಾರ ಕಾರ್ಯದ ಬಗ್ಗೆ ಸಲಹೆ ಕೇಳುತ್ತಿದ್ದಾರೆ ಎಂದರು.

ಇದಕ್ಕೂ ಮುನ್ನ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಜಾಗತಿಕ ತಾಪಮಾನ, ಹವಾಮಾನ ವೈಪರೀತ್ಯದಿಂದ ಸಕಾಲದಲ್ಲಿ ಮಳೆಗಾಲ ಆರಂಭವಾಗಿಲ್ಲ. ಇದಕ್ಕೆಲ್ಲಾ ನಾವೇ ಕಾರಣ. ಹಿಂದೆ ತಂಪಾದ ಗಾಳಿ, ಶುದ್ಧ ನೀರು ಸಿಗುವ ಕಡೆ ಮನೆ ಕಟ್ಟುತ್ತಿದ್ದರು. ಈಗ ಎಲ್ಲರೂ ನಗರಗಳ ಕಡೆ ಮುಖ ಮಾಡಿದ್ದಾರೆ. ಇದರಿಂದ ಸಮಸ್ಯೆಗಳು ಹೆಚ್ಚಾಗಿವೆ. ಪ್ಲಾಸ್ಟಿಕ್ ನಿರ್ಮೂಲನೆ ಬಗ್ಗೆ ಹೇಳುತ್ತೇವೆ. ಆದರೆ ಪಿಜಿ ಓದಿದವರು ಚಾಕಲೇಟ್ ತಿಂದು ಕವರ್ ಎಸೆಯುತ್ತಾರೆ. ನೆಲ, ಜಲ, ಭಾಷೆ ಪ್ರೀತಿಸುವವರು ಪರಿಸರವನ್ನು ಪ್ರೀತಿಸುತ್ತಾರೆ. ಪ್ರಕೃತಿ ಬಿಟ್ಟು ಬದುಕಲು ಸಾಧ್ಯವಿಲ್ಲ. ಪರಿಸರ ಪ್ರಜ್ಞೆಯೊಂದಿಗೆ ಎಲ್ಲರೂ ಒಟ್ಟಿಗೆ ಕೆಲಸ ಮಾಡಿದಾಗ ಮಾತ್ರ ಗುರಿ ಸಾಧಿಸಬಹುದು ಎಂದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಕೆರೆ–ಕಟ್ಟೆಗಳನ್ನು ರಕ್ಷಿಸುತ್ತಿಲ್ಲ. ನಗರ ಪ್ರದೇಶದಲ್ಲಿ ಮರಗಳ ಕಟಾವು ಮಾಡುವುದನ್ನು ವಿರೋಧಿಸುತ್ತಿಲ್ಲ. ಕೆರೆಗಳಿಗೆ ನಿರಂತರವಾಗಿ ಕಲುಷಿತ ನೀರು ಸೇರುತ್ತಿದೆ. ಜಲ ಮಾಲಿನ್ಯ ಹೆಚ್ಚಾಗುತ್ತಿದೆ. ಕುಡಿಯುತ್ತಿರುವ ನೀರು ಯೋಗ್ಯವಾಗಿಲ್ಲ. ಈಗಲಾದರೂ ಎಚ್ಚೆತ್ತುಕೊಂಡು ಪರಿಸರ ಸಂರಕ್ಷಿಸಬೇಕು ಎಂದು ತಿಳಿಸಿದರು.

ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಚಂದ್ರಮೌಳಿ ಮಾತನಾಡಿ, ಮಹಾನಗರಗಳಲ್ಲಿ ಆಕ್ಸಿಜನ್ ಸಿಲಿಂಡರ್ ಹಾಕಿಕೊಂಡು ಓಡಾಡುವ ದುಸ್ಥಿತಿ ನಿರ್ಮಾಣವಾಗುವ ಕಾಲ ದೂರವಿಲ್ಲ. ಆದ್ದರಿಂದ ಪ್ರಕೃತಿ ಕಾಪಾಡಬೇಕು. ಅದರೊಟ್ಟಿಗೆ ಸಹಬಾಳ್ವೆ ಮಾಡಬೇಕು ಎಂದರು.

ಬೋಧಿವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ಅಧ್ಯಕ್ಷ ಎಂ.ಎಸ್.ಚಂದ್ರ ಮಾತನಾಡಿ, ಜಾಗತಿಕ ತಾಪಮಾನದ ಪರಿಣಾಮ ಎದುರಿಸುತ್ತಿದ್ದೇವೆ. ಬೇಸಿಗೆ ಕಾಲದಲ್ಲಿ ಮೈಸೂರಿನಲ್ಲಿ ಇರಲು ಆಗದಂತಾಗಿದೆ. ತಾಪಮಾನ ಇನ್ನೂ 2 ಡಿಗ್ರಿ ಹೆಚ್ಚಾದರೆ ಸಹಜವಾಗಿ ಬದುಕುವುದು ಕಷ್ಟವಾಗುತ್ತದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಮನುಷ್ಯರು ವರ್ಷದಲ್ಲಿ 10 ಗಿಡಗಳನ್ನಾದರೂ ನೆಟ್ಟು ಬೆಳೆಸುವ ಪ್ರತಿಜ್ಞೆ ಕೈಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಡಾ.ನಂಜಯ್ಯ ಹೊಂಗನೂರು ಮಾತನಾಡಿ, ನಾವು ಪ್ರಾಕೃತಿಕ ಪರಿಸರ ಕಳೆದುಕೊಳ್ಳುತ್ತಿದ್ದೇವೆ. ಮರ ಕಟಾವು ಮಾಡಿ ನಗರ ಪ್ರದೇಶ ವಿಸ್ತರಿಸುತ್ತ ಮಹಡಿ ಮೇಲೆ ಸಸಿಗಳನ್ನು ಬೆಳೆಸುತ್ತಿದ್ದೇವೆ. ಪರಿಸರದ ಅನನ್ಯತೆ ಕಳೆದುಕೊಳ್ಳುತ್ತಿದ್ದೇವೆ. ಪ್ರತಿ ತಿಂಗಳು ಎರಡು ದಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಮಾಡುತ್ತೇವೆ. ನೆಟ್ಟ ಗಿಡಗಳನ್ನು ನೀರು ಹಾಕಿ ಕಾಪಾಡುತ್ತೇವೆ ಎಂದು ಹೇಳಿದರು.


> "ಸಸಿ ನೆಡುವುದರಿಂದ ಸಹಜವಾದ ಪರಿಸರ ಕಟ್ಟಲು ಸಾಧ್ಯವಿಲ್ಲ. ಇರುವುದನ್ನು ಉಳಿಸಿಕೊಂಡು ಹೋಗಬೇಕು. ಸಸಿ ನೆಡುವುದು ಉತ್ಸಾಹ, ಭಾವನಾತ್ಮಕವಾಗಿ ಮಾಡುವ ಕೆಲಸಗಳು ಹೆಚ್ಚಿನ ಸಮಯ ತಲೆ ಕೆಳಗಾಗಬಹುದು.
> –ಕೃಪಾಕರ, ವನ್ಯಜೀವಿ ತಜ್ಞ

ಮೇಸ್ತ್ರಿ ಮಾದಯ್ಯಗೆ ಪ್ರಶಸ್ತಿ ಪ್ರದಾನ: ಪರಿಸರ ಪ್ರೇಮಿ ಮೇಸ್ತ್ರಿ ಮಾದಯ್ಯ ಅವರಿಗೆ 2026ನೇ ಸಾಲಿನ 'ಪರಿಸರ ಪ್ರಜ್ಞಾ' ಪ್ರಶಸ್ತಿಯನ್ನು ವನ್ಯಜೀವಿ ತಜ್ಞ ಕೃಪಾಕರ ಪ್ರದಾನ ಮಾಡಿದರು. 10 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಪರಿಸರವಾದಿಗಳ ಗುಂಪಿಗೆ ಸೇರದ ಮೇಸ್ತ್ರಿ ಮಾದಯ್ಯ ಅವರನ್ನು ಗುರುತಿಸಿ ಸನ್ಮಾನಿಸಿದ್ದು, ಇಡೀ ಸಮಾಜಕ್ಕೆ ಸಲ್ಲಿಸುವ ಗೌರವ ಎಂದು ಕೃಪಾಕರ ಅಭಿಪ್ರಾಯಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಉದ್ಯಾನದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಸಿ ನೆಟ್ಟರು. ಸಂಸ್ಥೆಯ ಪ್ರವೇಶ ದ್ವಾರದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಡಾ.ಎಚ್.ಪಿ.ಮಂಜು ಅತಿಥಿಗಳನ್ನು ಸ್ವಾಗತಿಸಿದರು. ಗಾಯಕ ಅಮ್ಮ ರಾಮಚಂದ್ರ ಪರಿಸರ ಗೀತೆ ಹಾಡಿದರು. ಸಂಶೋಧನಾ ವಿದ್ಯಾರ್ಥಿನಿ ಅನಿತಾ ನಿರೂಪಿಸಿದರು.

ಮಾದಕ ವಸ್ತುಗಳ ಬಳಕೆ ವಿರುದ್ಧ ಇಂದು ಜಾಗೃತಿ ಜಾಥಾ

ಮೈಸೂರು: ಮೈಸೂರು ಜಿಲ್ಲಾ ಕೆಮಿಸ್ಟ್, ಡ್ರಗ್ಗಿಸ್ಟ್ ವೆಲ್‌ಫೇರ್ ಅಸೋಸಿಯೇಷನ್, ರಾಜ್ಯ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್‌ನಿಂದ ಜೂ.25ರಂದು ಬೆಳಗ್ಗೆ 9 ಗಂಟೆಗೆ ಮಾದಕ ವಸ್ತುಗಳ ಬಳಕೆ ವಿರುದ್ಧ ಜಾಗೃತಿ ಜಾಥಾ ಹಮ್ಮಿಕೊಂಡಿದೆ ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಟಿ.ಎಂ. ಪ್ರಮೋದ್‌ಕುಮಾರ್, ಪಿ.ಎ.ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಸಲೀಮುಲ್ಲಾ ಖಾನ್, ಫಾರೂಕಿಯಾ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ನಿಸಾರ್ ಅಹಮದ್, ಉಪ ಔಷಧ ನಿಯಂತ್ರಕ ಡಾ.ಎಂ.ಖಾಲಿದ್ ಅಹಮದ್‌ಖಾನ್, ಎಡಿಸಿ ಮೈಸೂರು ವೃತ್ತ–2 ವಸೀಮ್ ಉರ್ ರೆಹಮಾನ್, ಎಡಿಸಿ ಮೈಸೂರು ವೃತ್ತ–1 ಆಶಾಲತಾ ಭಾಗವಹಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ.

ವ್ಯಸನ ವಿಮುಕ್ತ ಕೇಂದ್ರಗಳ ನೋಂದಣಿ ಕಡ್ಡಾಯ


ಮೈಸೂರು ಜಿಪಂ ಸಭಾಂಗಣದಲ್ಲಿ ಡಿಸಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆ ನಡೆಸಿದರು.

ನಿಯಮ ಮೀರಿದರೆ ಕಾನೂನು ಕ್ರಮ: ಜಿಲ್ಲಾಧಿಕಾರಿ ಎಚ್ಚರಿಕೆ

ಮೈಸೂರು, ಜೂ.24(ಎಂಕೆ)–ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವ್ಯಸನ ವಿಮುಕ್ತ ಕೇಂದ್ರಗಳು (De-addiction Centers) ಕಡ್ಡಾಯವಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ(KPMA) ಅಡಿಯಲ್ಲಿ ನೋಂದಣಿಯಾಗಬೇಕು. ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಎಚ್ಚರಿಸಿದ್ದಾರೆ.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿರುವ ಪ್ರತಿಯೊಂದು ವ್ಯಸನ ವಿಮುಕ್ತಿ ಕೇಂದ್ರವು ಕೆಪಿಎಂಎ ಅಡಿಯಲ್ಲಿ ನೋಂದಣಿಯಾಗಿರುವುದು ಕಡ್ಡಾಯ. ಈ ನಿಯಮವನ್ನು ಉಲ್ಲಂಘಿಸಿ ನೋಂದಣಿ ಮಾಡಿಕೊಳ್ಳದೆ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳನ್ನು ತಕ್ಷಣವೇ ಗುರುತಿಸಿ, ಅಂತಹ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಸೂಚನೆ ನೀಡಿದರು.

ವೈದ್ಯರ ಚೀಟಿ ಅವಶ್ಯ: ಹಾಗೆಯೇ ವೈದ್ಯರ ಚೀಟಿ ಇಲ್ಲದೆ ಔಷಧಿಗಳನ್ನು ಮಾರಾಟ ಮಾಡುವ ಮೆಡಿಕಲ್ ಶಾಪ್‌ಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು. ಮಾದಕ ವ್ಯಸನಗಳಿಗೆ ಕಾರಣವಾಗುವಂತಹ ಔಷಧಿಗಳ ಅನಧಿಕೃತ ಮಾರಾಟ ತಡೆಯಲು ಆರೋಗ್ಯ ಇಲಾಖೆ ಮತ್ತು ಔಷಧ ನಿಯಂತ್ರಣ ಇಲಾಖೆಗಳು ಜಂಟಿ ಕಾರ್ಯಾಚರಣೆ ನಡೆಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಜೂ.26ರಂದು ಮಾದಕ ವಸ್ತುಗಳ ನಿರ್ಮೂಲನ ದಿನಾಚರಣೆ ಆಚರಿಸಲಾಗುತ್ತಿದೆ. ಜಿಲ್ಲೆಯ ತಾಲೂಕು ಕಾರಾಗೃಹಗಳಲ್ಲಿ ಡ್ರಗ್ಸ್ ಮುಕ್ತ ಮಾಡಲು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು. ಸಭೆಯಲ್ಲಿ ಎಎಸ್‌ಪಿ ಮಲ್ಲಿಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ ಕುಮಾರಸ್ವಾಮಿ ಮತ್ತಿತರರಿದ್ದರು.

ಜೂ.28, 'ಸ್ವಯಂ ರಕ್ಷಣೆಗಾಗಿ ಕರಾಟೆ' ಪ್ರದರ್ಶನ



ಮೈಸೂರು, ಜೂ.24(ಎಂಕೆ)– ಮೈಸೂರಿನ ಚಾಮುಂಡಿ ವಿಹಾರ ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ಜೂ.28ರಂದು ವಿಶ್ವ ಕರಾಟೆ ದಿನ ಆಚರಿಸಲಿದ್ದು, 'ಸ್ವಯಂ ರಕ್ಷಣೆಗಾಗಿ ಕರಾಟೆ' ಶೀರ್ಷಿಕೆಯಡಿ ಕರಾಟೆ ಪ್ರದರ್ಶನ ಆಯೋಜಿಸಲಾಗಿದೆ ಎಂದು ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಎನ್.ಶಂಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕರಾಟೆ ಪ್ರದರ್ಶನದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ 4 ರಿಂದ 70 ವರ್ಷದೊಳಗಿನ ನೂರಾರು ಕರಾಟೆ ಪಟುಗಳು ಭಾಗವಹಿಸಲಿದ್ದಾರೆ. ಇದಕ್ಕೂ ಮೊದಲು ಶ್ರೀ ಕೋಟಿ ಆಂಜನೇಯಸ್ವಾಮಿ ದೇವಸ್ಥಾನದಿಂದ ಜಾಥಾ ನಡೆಯಲಿದೆ ಎಂದರು.

ವಿಶ್ವ ಕರಾಟೆ ದಿನಾಚರಣೆಯನ್ನು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ ಉದ್ಘಾಟಿಸಲಿದ್ದು, ಶಾಸಕ ದರ್ಶನ್ ಧ್ರುವನಾರಾಯಣ್, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ನಂ.98803 61209 ಸಂಪರ್ಕಿಸಬಹುದಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೆಫರಿ ಭಾರತಿ ಆನಂದ್, ಸೋಸಲೆ ಸಿದ್ದರಾಜು, ಎಂ.ಬಿ. ಚಿದಾನಂದ್, ಸತೀಶ್, ನಾಗರಾಜು, ಆಕಾಶ್ ಅರಸ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಸಖಿ ಫೌಂಡೇಷನ್, ಸೂರ್ಯ ಚಾರಿಟಬಲ್ ಟ್ರಸ್ಟ್ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗಾಗಿ ದಿವಂಗತ ಸಾವಿತ್ರಿ ರಘುನಾಥ್ ಸ್ಮರಣಾರ್ಥ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಯಾವುದೇ ಶಾಲೆಯವರಾದರೂ ಆಗಿರಬಹುದು. ಆದರೆ ತಂದೆ, ತಾಯಿ, ಪೋಷಕರು ರಾಮಕೃಷ್ಣನಗರದ ನಿವಾಸಿಗಳಾಗಿರಬೇಕು. ವಿದ್ಯಾರ್ಥಿಗಳು ತಮ್ಮ ಮಾಹಿತಿಯನ್ನು ಜುಲೈ 10ರೊಳಗೆ ಗೂಗಲ್ ಫಾರಂನಲ್ಲಿ ತುಂಬುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಮೊ. 9964790442, 9964790441 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.06.2026 ಗುರುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 'ದೈಹಿಕ ದೀಕ್ಷೆ' ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಕೆ.ವಾಗೀಶ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ ಸಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 Running commentary of ICC Women's T20 World cup cricket match between India and Bangladesh being played at Old Trafford Cricket Ground, Manchester.

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನುನೋವು ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ. ಬೆಳಗ್ಗೆ 9.30ರಿಂದ.
- **ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ:** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 8ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.
- **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ** : ಭಗಂದರ (ಫಿಸ್ತೂಲ), ಚರ್ಮದ ಕಾಯಿಲೆ, ಮೂಗು ಸೋರುವಿಕೆ, ಕಟ್ಟಿದ ಮೂಗು, ಸೀನುವುದು, ಗಂಟಲು ನೋವು, ತಲೆ ನೋವು ಸಮಸ್ಯೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಸಾತ್ವಿಕಿ ಫೌಂಡೇಶನ್** : ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಲ್ಲಿ ರಂಗಭೂಮಿಯ ಆಸಕ್ತಿ, ಕಲಾತ್ಮಕ ಚಿಂತನೆ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಬೆಳೆಸುವ ಉದ್ದೇಶದಿಂದ 'ಸಾತ್ವಿಕಿ ರಂಗಯಾತ್ರೆ–2026' ಕಾರ್ಯಕ್ರಮ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಡಾ. ಎಂ.ಡಿ. ಗೋಪಿನಾಥ್, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸದ್ವಿದ್ಯಾ ಸಂಸ್ಥೆಯ ಮುಖ್ಯೋಪಾಧ್ಯಾಯರಾದ ರಾಮಚಂದ್ರ ಭಟ್ ಮತ್ತು ಮಮತಾ ಹಾಗೂ ಸಾತ್ವಿಕಿ ಫೌಂಡೇಶನ್ ಅಧ್ಯಕ್ಷರಾದ ಸರಸ್ವತಿ, ರಾಷ್ಟ್ರಕವಿ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮತ್ತು ವಾಲ್ಮೀಕಿ ರಾಮಾಯಣದ ಕಿಷ್ಕಿಂದ ಕಾಂಡದ ಭಾಗಗಳ ಮೇಲೆ ರೂಪುಗೊಂಡಿರುವ 'ಕಿಷ್ಕಿಂದ ಕಲಹ' ನಾಟಕ ಪ್ರದರ್ಶನ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.
- **ಪ್ರೊ. ಕೆ. ಸದಾಶಿವ ಅಭಿನಂದನಾ ಸಮಿತಿ:** ಸದಾ ನಮನ ಅಕ್ಷರ ಸೂರ್ಯನಿಗೆ ಗೌರವ ಸಮರ್ಪಣೆ, ಪ್ರೊ.ಕೆ.ಸದಾಶಿವ ಅವರ ಅಭಿನಂದನಾ ಸಮಾರಂಭ ಮತ್ತು ಅಭಿನಂದನಾ ಗ್ರಂಥ ಬಿಡುಗಡೆ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಸಾಹಿತಿ ಡಾ.ಎಲ್.ಹನುಮಂತಯ್ಯ, ಪ್ರೊ.ಕಾವಲಮ್ಮ, ಉಪಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಪ್ರೊ.ಎಂ.ವಿ.ಶ್ರೀನಿವಾಸ್, ಪ್ರೊ.ಷಡಕ್ಷರಯ್ಯ, ಪ್ರೊ.ಆನಂದ್, ಪ್ರೊ.ಸಿ.ಟಿ.ಶಿವಶರಣ, ಪ್ರೊ.ಉಷಾದೇವಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿವಿ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ–ಸಂಶೋಧನಾ ಕೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನಾ ಮತ್ತು ವಿಸ್ತೃತ ಕೇಂದ್ರ:** ಡಾ.ಅಂಬೇಡ್ಕರ್ ಮತ್ತು ಸಮಕಾಲೀನ ಭಾರತ: ಪುನರ್ವಿಮರ್ಶೆ–ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ.ರಂಗೇಗೌಡ, ಸಮಾರೋಪ ಭಾಷಣ: ಹಿರಿಯ ಪ್ರಾಧ್ಯಾಪಕ ಪ್ರೊ.ಸೋಮಶೇಖರ್, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಸಂಜೆ 4ಕ್ಕೆ.
- **ಸಕ್ಷಮ ಮೈಸೂರು ಘಟಕ:** ಸಂತ ಸೂರದಾಸ ಜಯಂತಿ ಹಾಗೂ ಪರಿಸರ ದಿನಾಚರಣೆ, ಉಪಸ್ಥಿತರು: ನೃತ್ಯಗಿರಿ ನಿರ್ದೇಶಕಿ ಡಾ.ಕೃಪಾ ಫಡ್ಕೆ, ಪ್ರಿನ್ಸಿಪಾಲ್ ಡಾ.ಪಿ.ವಿ.ನಾಗರಾಜ್, ಡಾ.ಎ.ಎಸ್. ಚಂದ್ರಶೇಖರ್, ಅಧ್ಯಕ್ಷತೆ: ಸಕ್ಷಮ ಜಿಲ್ಲಾಧ್ಯಕ್ಷ ಬಿ.ಎನ್.ಜಯರಾಂ, ಸ್ಥಳ: ಗಾನಭಾರತಿ, ಕುವೆಂಪುನಗರ, ಸಂಜೆ 5.30ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ** : ವಿಶ್ವ ಪರಿಸರ ದಿನಾಚರಣೆಯ ಮಾಸಾಚರಣೆ ಹಾಗೂ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರಧಾನ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪುರಸ್ಕೃತರು : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯ್ಸ್, ಅಧ್ಯಕ್ಷತೆ : ಹಿರಿಯ ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ, ಮುಖ್ಯ ಅತಿಥಿಗಳು : ರಾಜು ಕಾರ್ಯ, ಅಭಾವೀಲಿಂ ಮಹಾಸಭಾ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಮಲ್ಲಿಕಾ ಮಹದೇವಸ್ವಾಮಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಪರಂಪರೆ, ಭಾರತೀಯ ಆರ್ಷೇಯ ಮೌಲ್ಯಗಳ ಪ್ರಚಾರಕ್ಕಾಗಿ ಮೀಸಲಾಗಿರುವ ಸಂಸ್ಥೆ** : ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಅವರಿಂದ ತುರ್ತು ಪರಿಸ್ಥಿತಿ @ 51 ವಿಶೇಷ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.




ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 25 ಗುರುವಾರ 2026



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 70 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಾಮೈದ; ಬಿಜೆಪಿ ಮಾಜಿ ಸಂಸದ ದೇವೇಂದ್ರಪ್ಪನವರ ಪುತ್ರ ಅಬಕಾರಿ ಹೆಚ್ಚುವರಿ ಆಯುಕ್ತ ಡಾ.ಮಂಜುನಾಥರ

ಮೈಸೂರು "ಅತ್ಯಾಪ್ತೆ" ಮನೆ ಮೇಲೆ ಇಡಿ ದಾಳಿ

- ಬೆಂಗಳೂರು, ಗೋವಾ ಮೂಲದ ಇಡಿ ತಂಡದಿಂದ ಪರಿಶೀಲನೆ
- ಮುಂಜಾನೆಯಿಂದ ರಾತ್ರಿ ಬಹುಹೊತ್ತಿನವರೆಗೂ ದಟ್ಟಗಳ್ಳಿಯ ಮನೆಯಲ್ಲಿ ತೀವ್ರ ಶೋಧ
- ಅತ್ಯಾಪ್ತ ಮಹಿಳೆಯ ಬ್ಯಾಂಕ್‌ಗೆ ಕರೆದೊಯ್ದು ಅವರ ಖಾತೆ ಪರಿಶೀಲನೆ

ಮೈಸೂರು, ಜೂ.24 (ಬಿಎಲ್‌ಯು)– ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಾಮೈದ ಹಾಗೂ ಬಿಜೆಪಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ, ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ವೈ.ಮಂಜುನಾಥ್ ಅವರ ಮೈಸೂರಿನ ಅತ್ಯಾಪ್ತ ಸ್ನೇಹಿತೆ ಮನೆ ಮೇಲೆ ಇಂದು ಇಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳು ದಾಳಿ ನಡೆಸಿದರು.

ಮೈಸೂರಿನ ದಟ್ಟಗಳ್ಳಿ 5 ನೇ ಕ್ರಾಸ್ ವಾಸಿ ಯಮುನಾ ಅವರು ಅಬಕಾರಿ ಇಲಾಖೆಯ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ, ಇತ್ತೀಚಿಗೆ ಸ್ವಯಂ ನಿವೃತ್ತಿ ಪಡೆದು ದಟ್ಟಗಳ್ಳಿಯಲ್ಲಿ ನೆಲೆಸಿದ್ದಾರೆ. ಆದಾಯ ಮೀರಿ ಅಪಾರ ಮೌಲ್ಯದ ಆಸ್ತಿ–ಪಾಸ್ತಿ ಸಂಪಾದನೆ, ಅಕ್ರಮ ಹಣ ವರ್ಗಾವಣೆ, ಬೇನಾಮಿ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್, ವಿದೇಶಿ ವಹಿವಾಟು ಸೇರಿದಂತೆ ಇನ್ನಿತರೆ ಅಕ್ರಮ ವಹಿವಾಟು ಮೇರೆಗೆ ಗೋವಾ ಹಾಗೂ ಬೆಂಗಳೂರಿನ ಇಡಿ ಅಧಿಕಾರಿಗಳು ಡಾ. ಮಂಜುನಾಥ್ ಅವರಿಗೆ ಸಂಬಂಧಿಸಿದ ಬೆಳಗಾವಿ, ಬೆಂಗಳೂರು, ಮೈಸೂರು, ಹರಪ್ಪನಹಳ್ಳಿ ತಾಲೂಕಿನ ಅವರ ಗ್ರಾಮ, ಅರಸೀಕೆರೆ ನಿವಾಸ ಸೇರಿ ವಿವಿಧ ಕಡೆ ಮನೆ, ಕಚೇರಿ, ಅತ್ಯಾಪ್ತರ ಮನೆಗಳ ಮೇಲೆ ದಾಳಿ ಮಾಡಿದ್ದಾರೆ. ಡಾ.ಮಂಜುನಾಥ್ ಅವರು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಸಹೋದರಿ ಮಹಾದೇವಿ ಅವರ ಪತಿ. ಅಷ್ಟೇ ಅಲ್ಲ ಬಳ್ಳಾರಿ ಮಾಜಿ ಸಂಸದ ವೈ.ದೇವೇಂದ್ರಪ್ಪ ಅವರ ಪುತ್ರ. ರಾಜಕೀಯ ಕುಟುಂಬದ ಹಿನ್ನೆಲೆ ಇರುವ ಕಾರಣ ಇಡಿ ದಾಳಿ ಮಹತ್ವ ಪಡೆದಿದೆ.

ಡಾ.ಮಂಜುನಾಥ್ ಅವರು ಮೈಸೂರಿನ ಅಬಕಾರಿ ಡಿಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಅಬಕಾರಿ ಇನ್ಸ್‌ಪೆಕ್ಟರ್ ಆಗಿ ಯಮುನಾ ಇಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದರು. ಆ ವೇಳೆ ಇಬ್ಬರ ನಡುವೆ ಸ್ನೇಹವಿತ್ತು.

ಈ ವೇಳೆ ಅವರು ಬೇನಾಮಿಯಾಗಿ ಯಮುನಾ ಅವರ ಹೆಸರಿನಲ್ಲಿ ಆಸ್ತಿ–ಪಾಸ್ತಿ ಮಾಡಿದ್ದಾರೆ ಎಂಬ ಆಪಾದನೆ ಮೇರೆಗೆ ಇಡಿ ಅಧಿಕಾರಿಗಳು ಇಂದು ದಾಳಿ ಮಾಡಿದರು. ಎರಡು ಇನ್ನೋವಾ ಕಾರಿನಲ್ಲಿ ಆರು ಮಂದಿ ಇಡಿ ಅಧಿಕಾರಿಗಳ ತಂಡ ಇಂದು ಬೆಳಗ್ಗೆ 5.30 ಗಂಟೆಗೆ ಯಮುನಾ ಅವರ ಮನೆ ಮೇಲೆ ದಾಳಿ ಮಾಡಿದರು. ತಾವು ಜಾರಿ ನಿರ್ದೇಶಾಲಯದ (ಇಡಿ) ■6ನೇ ಪುಟಕ್ಕೆ





ಮೈಸೂರಿನ ದಟ್ಟಗಳ್ಳಿಯಲ್ಲಿರುವ ಯಮುನಾ ಅವರ ಐಷಾರಾಮಿ ಮನೆ. (ಬಲಚಿತ್ರ), ಬ್ಯಾಂಕ್ ಖಾತೆ ಪರಿಶೀಲನೆಗಾಗಿ ಯಮುನಾ ಅವರನ್ನು ಕರೆದೊಯ್ಯುತ್ತಿರುವ ಇಡಿ ಅಧಿಕಾರಿಗಳನ್ನು (ಎಡಚಿತ್ರ) ಕಾಣಬಹುದು.



ಅಬಕಾರಿ ಹೆಚ್ಚುವರಿ ಆಯುಕ್ತ ಡಾ. ವೈ. ಮಂಜುನಾಥ್

ಮುಖಕ್ಕೆ ವೇಲ್ ಸುತ್ತಿಕೊಂಡಿದ್ದ ಅತ್ಯಾಪ್ತೆ

ಇಡಿ ಅಧಿಕಾರಿಗಳು ಬ್ಯಾಂಕ್‌ಗೆ ಕರೆದೊಯ್ಯುವ ವೇಳೆ ಮನೆಯಿಂದ ಹೊರಗೆ ಬಂದ ಯಮುನಾ ಅವರು ಮಾಧ್ಯಮ ಗಳಿಗೆ ಮುಖ ಕಾಣಿಸಬಾರದೆಂದು ವೇಲ್ ಸುತ್ತಿಕೊಂಡಿದ್ದರು. ತಾವು ಯಾರೆಂಬ ಪರಿಚಯ ಬಹಿರಂಗ ಆಗಬಾರದೆಂಬ ದೃಷ್ಟಿಯಿಂದ ಯಮುನಾ ಅವರು ಹೀಗೆ ಮುಖಕ್ಕೆ ವೇಲ್ ಸುತ್ತಿಕೊಂಡಿದ್ದರು. ಮಾಧ್ಯಮಗಳ ಕ್ಯಾಮರಾ ನೋಡುತ್ತಿದ್ದಂತೆ ಆಘಾತಕ್ಕೊಳಗಾಗಿ, ತಲೆ ತಗ್ಗಿಸಿದರು. ಇಡಿ ಅಧಿಕಾರಿಗಳ ಜೊತೆ ಮನೆಯಿಂದ ಕಾರ್‌ನತ್ತ ವೇಗವಾಗಿ ಹೆಜ್ಜೆ ಹಾಕಿದರು. ಕ್ಷಣ ಮಾತ್ರವೂ ಎಲ್ಲೂ ನಿಲ್ಲದೆ ಧಾವಂತದಿಂದ ಕಾರಿನೊಳಗೆ ಹೋಗಿ ಕುಳಿತರು.

ಕೇರಳ– ಕರ್ನಾಟಕದ ಗಡಿ ಬಾವಲಿಯಲ್ಲಿ ಭರ್ಜರಿ ಮದ್ಯ ಮಾರಾಟ

ಕರ್ನಾಟಕ– ಕೇರಳ ಗಡಿ ಭಾಗ ಬಾವಲಿಯಲ್ಲಿ ಡಾ.ಮಂಜುನಾಥ್ ಬೇನಾಮಿ ಹೆಸರಿನಲ್ಲಿ ಬಾರ್ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇರಳದಲ್ಲಿ ಮದ್ಯ ಮಾರಾಟ ನಿಷೇಧ ಇರುವ ಹಿನ್ನೆಲೆಯಲ್ಲಿ ಗಡಿ ಭಾಗದ ಜನರು ಮದ್ಯ ಖರೀದಿಗೆ ಬಾವಲಿಗೆ ಬರುತ್ತಾರೆ. ಇಲ್ಲಿರುವ ಮಂಜುನಾಥ್ ಅವರ ಬಾರ್ ಭರ್ಜರಿಯಾಗಿ ನಡೆಯುತ್ತಿದೆ.


ರಾಜಕೀಯ ಕುಟುಂಬದ ಪ್ರಭಾವ ಹಾಗೂ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಸ್ಥಾನ ಹೊಂದಿರುವ ಡಾ.ಮಂಜುನಾಥ್ ಅವರು ಎಲ್ಲಾ ಕಾನೂನು ಕಟ್ಟಲೆಗಳನ್ನು ಮೀರಿದ್ದಾರೆ.

ಬಾವಲಿಯ ಡಾ.ಮಂಜುನಾಥ್ ಅವರ ಬೇನಾಮಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿದೆ. ಮೈಸೂರಿನ 100 ಅಂಗಡಿಗಳಲ್ಲಿ ಮಾರಾಟವಾಗುವ ಮದ್ಯ ಅದೊಂದೇ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಮಾರಾಟವಾಗುತ್ತಿದೆ ಎನ್ನಲಾಗಿದೆ.

ಮೈಸೂರಲ್ಲಿ ಜೈಲು ಪಾಲಾಗಿದ್ದ ಡಾ.ಮಂಜುನಾಥ್

ಬಿಡುಗಡೆಯಾದಾಗ ಅದ್ದೂರಿ ಮೆರವಣಿಗೆ; ಸಂಭ್ರಮಾಚರಣೆ!

ಇಡಿ ದಾಳಿಗೊಳಗಾಗಿರುವ ಡಾ.ಮಂಜುನಾಥ್ ಅವರು ಮೈಸೂರು ಅಬಕಾರಿ ಡಿಸಿ ಆಗಿದ್ದ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ಆ ವಿಚಾರವೂ ಈಗ ಚರ್ಚೆಯ ಮುನ್ನೆಲೆಗೆ ಬಂದಿದೆ. ಮೈಸೂರಿನವರೇ ಆದ ಹಾಲಿ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಚಂದ್ರಶೇಖರ್ ಅವರು ಡಾ.ಮಂಜುನಾಥ್ ಅವರ ಲಂಚಾವತಾರ ಹಾಗೂ ಅಕ್ರಮ ವ್ಯವಹಾರದ ಬಗ್ಗೆ ಅಂದು ಲೋಕಾಯುಕ್ತಕ್ಕೆ ದೂರು ನೀಡಿದ್ದ ಸಂಗತಿಯನ್ನು ವಿವರಿಸಿದ್ದಾರೆ. ಮೈಸೂರಿನ ಜನತಾ ಬಜಾರ್ ಮದ್ಯ ಮಳಿಗೆಯ ಪರವಾನಗಿ ನವೀಕರಣಕ್ಕಾಗಿ ಮಂಜುನಾಥ್ ಬಳಿ ಹೋಗಿದ್ದೆ. ಲೈಸೆನ್ಸ್ ನವೀಕರಣಕ್ಕೆ ಅವರು 20 ಲಕ್ಷ ರೂಪಾಯಿ ಬೇಡಿಕೆ ಇಟ್ಟಿದ್ದರು. ಇದು ಸಹಕಾರ ಸಂಘಕ್ಕೆ ಒಳಪಟ್ಟ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ ಲಂಚ ಏಕೆ ಕೊಡಬೇಕು ಎಂದು ಪ್ರಶ್ನೆ ಮಾಡಿದ್ದೆ. ಆದರೆ, ಇದ್ಯಾವುದನ್ನು ಕಿವಿಗೆ ಹಾಕಿಕೊಳ್ಳದ ಡಾ.ಮಂಜುನಾಥ್ 20 ಲಕ್ಷ ಬೇಕೇ ಬೇಕು ಎಂದು ■6ನೇ ಪುಟಕ್ಕೆ



ಡಾ.ಚಂದ್ರಶೇಖರ್

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇರಳಂ ರೆಸಾರ್ಟ್‌ನಲ್ಲಿ ರೆಸ್ಟ್


ರಾಜ್ಯ ರಾಜಕಾರಣದಲ್ಲಿ ನಾನಾ ಲೆಕ್ಕಾಚಾರ

ಬೆಂಗಳೂರು, ಜೂ.24(ಕೆಎಂಶಿ)– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟ ವಿಸ್ತರಣೆಗೆ ಕಾಂಗ್ರೆಸ್ ವರಿಷ್ಠರು ತಾತ್ಕಾಲಿಕ ಬ್ರೇಕ್ ಹಾಕುತ್ತಿದ್ದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇರಳಂ ರಾಜ್ಯಕ್ಕೆ ವಿಶ್ರಾಂತಿಗೆ ತೆರಳಿದ್ದಾರೆ.



ಸಿದ್ದರಾಮಯ್ಯ

ಕೇರಳಂನ ಕೊಚ್ಚಿಯ ಹಿನ್ನೀರಿನಲ್ಲಿ ನಿರ್ಮಿಸಿರುವ ರಮದಾ ವೈಂಧಮ್ ಐಷಾರಾಮಿ ರೆಸಾರ್ಟ್‌ಗೆ ಸಿದ್ದರಾಮಯ್ಯ ಸ್ನೇಹಿತರ ಜೊತೆ ತೆರಳಿದ್ದಾರೆ. ಸಿದ್ದರಾಮಯ್ಯ ಜೊತೆ ಸಚಿವ ಕೆ.ಜೆ.ಜಾರ್ಜ್, ಮಾಜಿ ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ. ವೆಂಕಟೇಶ್, ಶಾಸಕರಾದ ಪಿ.ಎಂ.ಅಶೋಕ್, ಬಿ.ಆರ್.ಪಾಟೀಲ್, ಹಂಪನಗೌಡ ಬಾದರ್ಲಿ ಸೇರಿದಂತೆ ಕೆಲವು ಸ್ನೇಹಿತರು ತೆರಳಿದ್ದಾರೆ.



ಸಿದ್ದರಾಮಯ್ಯ ತಂಗಿರುವ ಕೇರಳದ ರೆಸಾರ್ಟ್

ಅಧಿಕಾರ ಇಲ್ಲದ ಸಂದರ್ಭದಲ್ಲಿ ಸಿದ್ದರಾಮಯ್ಯ ನಗರ ಬಿಟ್ಟು ಹೊರಗೆ ವಿಶ್ರಾಂತಿ ಪಡೆಯುತ್ತಾರೆ ಎಂದರೆ, ರಾಜ್ಯ ರಾಜಕೀಯದಲ್ಲಿ ಏನೋ ಬೆಳವಣಿಗೆ ಆಗುತ್ತದೆ ಎಂಬ ಭಾವನೆ ಪಕ್ಷದ ವಲಯದಲ್ಲಿ ಕೇಳಿಬರುತ್ತಿದೆ. ಈ ಹಿಂದೆ ಇದೇ ರೆಸಾರ್ಟ್ ಹಾಗೂ ಧರ್ಮಸ್ಥಳದಲ್ಲಿ ಆಯುರ್ವೇದ ಚಿಕಿತ್ಸೆಗೆ ತೆರಳಿದ್ದ ಸಂದರ್ಭದಲ್ಲೂ ಪಕ್ಷದ ರಾಷ್ಟ್ರೀಯ ನಾಯಕರೊಬ್ಬರಿಗೆ ಧಕ್ಕಬೇಕಾದ ಅಧಿಕಾರ ಕೈ ತಪ್ಪಿತು. ■6ನೇ ಪುಟಕ್ಕೆ

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾರ್ಯಾರಂಭ

ಬೆಂಗಳೂರು, ಜೂ.24 (ಕೆಎಂಶಿ)– ಅಧಿಕಾರ ವಹಿಸಿಕೊಂಡು ಮೂರು ವಾರ ಕಳೆದ ನಂತರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೃಹ ಕಚೇರಿ ಕೃಷ್ಣಾ ಪ್ರವೇಶಿಸಿದ್ದಾರೆ.

ಇನ್ನು ಮುಂದೆ ಸಚಿವರು, ಶಾಸಕರು, ಅಧಿಕಾರಿಗಳು ಮತ್ತು ಸಾರ್ವಜನಿಕರು ಗೃಹ ಕಚೇರಿ ಕೃಷ್ಣಾದಲ್ಲೇ ಭೇಟಿ ಮಾಡುವಂತೆ ನಿನ್ನೆಯಷ್ಟೇ ಪತ್ರಿಕಾ ಹೇಳಿಕೆ ನೀಡಿದ್ದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಿ ನಿವಾಸ ಕಾವೇರಿ ಜೊತೆ ಕೃಷ್ಣಾದಲ್ಲೂ ವಾಸ್ತವ್ಯ ಹೂಡುವ ಆಲೋಚನೆಯಲ್ಲಿದ್ದರು. ಈ ಮಾಹಿತಿಯನ್ನು ಮುಖ್ಯಮಂತ್ರಿ ಅವರಿಗೆ ನೀಡಿದ ನಂತರ ಎರಡೂ ಸರ್ಕಾರಿ ನಿವಾಸಗಳನ್ನು ಬಿಟ್ಟುಕೊಟ್ಟು, ಕುಮಾರ ಕೃಪಾ ಅತಿಥಿಗೃಹದಲ್ಲಿ ಗೃಹ ಕಚೇರಿ ಹೊಂದಲು ಶಿವಕುಮಾರ್ ತೀರ್ಮಾನಿಸಿದ್ದರು. ಮುಖ್ಯಮಂತ್ರಿ ಆದೇಶದಂತೆ ಕುಮಾರ ಕೃಪಾ ಅತಿಥಿ



ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸಿ, ವಿಧ್ಯುಕ್ತವಾಗಿ ಕಾರ್ಯಾರಂಭ ಮಾಡಿದರು.

ಗೃಹ ನವೀಕರಣದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನಿರತರಾಗಿದ್ದರು.

ರಾಜ್ಯದಲ್ಲಿ ಮತ್ತೆ ಬೈಕ್ ಆಂಬುಲೆನ್ಸ್ ಸೇವೆ ಆರಂಭ

ಬೆಂಗಳೂರು: ರಾಜ್ಯದಲ್ಲಿ ಬೈಕ್ ಆಂಬುಲೆನ್ಸ್ ಸೇವೆಯನ್ನು ಮತ್ತೆ ಜಾರಿಗೆ ತರುವ ಬಗ್ಗೆ ರಾಜ್ಯ ಸರ್ಕಾರ ಚರ್ಚೆ ನಡೆಸಲಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.



ಯು.ಟಿ.ಖಾದರ್

ಈ ಬಗ್ಗೆ ಮಾತನಾಡಿದ ಅವರು, ಇಂತಹ ಬೈಕ್ ಆಂಬುಲೆನ್ಸ್ ಸೇವೆ ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಹಾಗೂ ದೇಶದ ಕೆಲವು ನಗರಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು. ಬೆಂಗಳೂರಿನಂತಹ ಮಹಾನಗರದ ಭಾರೀ ಟ್ರಾಫಿಕ್ ಹಾಗೂ ಗ್ರಾಮೀಣ ಭಾಗಗಳಲ್ಲಿ ಆಂಬುಲೆನ್ಸ್ ತಲುಪಲು ಆಗುವ ವಿಳಂಬವನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗುತ್ತಿದೆ. ಈ ಯೋಜನೆಯ ಕುರಿತು ಉನ್ನತ ಮಟ್ಟದ ಸಭೆ ನಡೆಸಿ ಸಂಪೂರ್ಣವಾಗಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಅಗತ್ಯವಿರುವ ತಾಂತ್ರಿಕ ಹಾಗೂ ವ್ಯವಸ್ಥಾಪಕ ಅಂಶಗಳನ್ನು ಪರಿಶೀಲಿಸಿದ ಬಳಿಕ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಮುಂದಾಗಲಿದೆ ಎಂದರು.

ಈ ಯೋಜನೆ ಜಾರಿಗೆ ಬಂದರೆ, ತುರ್ತು ಸಂದರ್ಭಗಳಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲು ಹಾಗೂ ರೋಗಿಯನ್ನು ವೇಗವಾಗಿ ಆಸ್ಪತ್ರೆಗೆ ಸಾಗಿಸಲು ದೊಡ್ಡ ನೆರವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ. ಬೈಕ್ ಆಂಬುಲೆನ್ಸ್‌ಗಳಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲು ಅಗತ್ಯವಾದ ವೈದ್ಯಕೀಯ ಉಪಕರಣಗಳು ಇರಲಿದ್ದು, ತರಬೇತಿ ಪಡೆದ ಸಿಬ್ಬಂದಿ ತುರ್ತು ಸಂದರ್ಭಗಳಲ್ಲಿ ಸ್ಥಳಕ್ಕೆ ಶೀಘ್ರವಾಗಿ ತಲುಪಲು ಸಹಾಯ ಮಾಡಲಿದ್ದಾರೆ. ಬೈಕ್ ಆಂಬುಲೆನ್ಸ್ ವ್ಯವಸ್ಥೆಯು ವೈದ್ಯಕೀಯ ಸೇವಾ ವಲಯದಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆ. ಮುಂಬರುವ ದಿನಗಳಲ್ಲಿ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಇವುಗಳನ್ನು ಇನ್ನಷ್ಟು ಬಲಪಡಿಸಿದರೆ, ನಗರಗಳಲ್ಲಿ ತುರ್ತು ವೈದ್ಯಕೀಯ ಸೇವೆಯನ್ನು ಮತ್ತಷ್ಟು ಸುಗಮಗೊಳಿಸಬಹುದು.

ಸೆಲ್ಫಿ ಗೀಳಿಗಿಳಿದು ಮುತ್ತತ್ತಿಯ ಕಾವೇರಿಯಲ್ಲಿ

ಒಂದೇ ಕುಟುಂಬದ ನಾಲ್ವರು, ಕಾರು ಚಾಲಕ ಸೇರಿದಂತೆ ಐವರು ಜಲಸಮಾಧಿ



ವಿಜಿಯಮ್ಮ



ಶ್ವೇತ



ಪ್ರಿಯಾಂಕಾ



ಚೈತ್ರಾ



ಮಹೇಶ್

ಹಲಗೂರು, ಜೂ.24(ಎಸ್‌ಎಂ)– ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆದುಕೊಳ್ಳಲು ಹೋದ ಒಂದೇ ಕುಟುಂಬದ ನಾಲ್ವರು ಹಾಗೂ ಕಾರು ಚಾಲಕ ನೀರಿನಲ್ಲಿ ಮುಳುಗಿ ಜಲಸಮಾಧಿಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಮುತ್ತತ್ತಿಯಲ್ಲಿ ಬುಧವಾರ ಸಂಜೆ ನಡೆದಿದೆ.

ಬೆಂಗಳೂರು ದಕ್ಷಿಣ ಜಿಲ್ಲೆ ಚನ್ನಪಟ್ಟಣ ತಾಲೂಕಿನ ವಿರೂಪಾಕ್ಷಿಪುರ ಹೋಬಳಿ ಜಗದಪುರ ಬ್ಯಾಡರಹಳ್ಳಿ ಗ್ರಾಮದ ನಿವಾಸಿಗಳಾದ ಶ್ವೇತಾ (38), ಅವರ ಪುತ್ರಿ ಚೈತ್ರಾ (20) ಹಾಗೂ ಮದ್ದೂರು ತಾಲೂಕಿನ ಕದಲೂರು ಗ್ರಾಮದ ವಿಜಿಯಮ್ಮ (52), ಪ್ರಿಯಾಂಕಾ (28) ಬೆಂಗಳೂರಿನ ಕಾರು ಚಾಲಕ ಮಹೇಶ್ (35) ದುರಂತ ಸಾವಿಗೀಡಾದವರು.

ವಿವರ: ಇವರೆಲ್ಲರೂ ಕುಟುಂಬ ಸಮೇತರಾಗಿ ಇಲ್ಲಿನ ಕಬ್ಬಾಳು ದೇವಾಲಯದಲ್ಲಿ ಆಯೋಜಿಸಿದ್ದ ಬೀಗರ ಔತಣ ಕೂಟಕ್ಕೆ ಆಗಮಿಸಿದ್ದರು. ಮೊದಲಿಗೆ ಕಬ್ಬಾಳಮ್ಮ ದೇವಿಗೆ ಪೂಜೆ ಸಲ್ಲಿಸಿ, ನಂತರ ಬೀಗರ ಔತಣ ಕೂಟ ಮುಗಿಸಿಕೊಂಡು ಹಲಗೂರು ಹೋಬಳಿಯ ಮುತ್ತತ್ತಿ ಪ್ರವಾಸಿ ತಾಣಕ್ಕೆ ಭೇಟಿ ನೀಡಿದ್ದರು.



ಸೆಲ್ಫಿ ಗೀಳಿಗೆ ಬಲಿಯಾದ ಕುಟುಂಬ ಸದಸ್ಯರ ಪಾರ್ಥಿವ ಶರೀರಗಳು.

ಮುತ್ತತ್ತಿರಾಯ ದೇವಾಲಯದಲ್ಲಿ ದೇವರ ದರ್ಶನ ಪಡೆದಿದ್ದಾರೆ. ಬಳಿಕ ಇಲ್ಲಿನ ಕಾವೇರಿ ನದಿಗೆ ಇಳಿದು ಆಟವಾಡುತ್ತಿದ್ದರು ಎನ್ನಲಾಗಿದೆ. ನದಿಯಲ್ಲಿ ನಿಂತು ಫೋಟೋ ಹಾಗೂ ಸೆಲ್ಫಿ ತೆಗೆದುಕೊಳ್ಳಲು ಮುಂದಾದಾಗ ಶ್ವೇತಾ, ಚೈತ್ರಾ, ವಿಜಿಯಮ್ಮ ಹಾಗೂ ಪ್ರಿಯಾಂಕಾ ಸೇರಿ ನಾಲ್ವರು ಕಾಲು ಜಾರಿ ಬಿದ್ದಿದ್ದು, ನೀರಿನ ಸೆಳೆತ ಅವರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಈ ವೇಳೆ ದಡದಲ್ಲಿದ್ದ ಕಾರು ಚಾಲಕ ಮಹೇಶ್ ಹಾಗೂ ಶ್ವೇತಾ ಪತಿ ರವಿ ಅವರನ್ನು ರಕ್ಷಿಸಲು ಮುಂದಾಗಿದ್ದು, ನಾಲ್ವರು ಮಹಿಳೆಯರೊಂದಿಗೆ ಮಹೇಶ್ ಕೂಡ ಕಾವೇರಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಉಳಿದಂತೆ ರವಿ (42) ಹಾಗೂ 3 ವರ್ಷದ ಲೋಚನ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆ ನಡೆದ ತಕ್ಷಣ ಸ್ಥಳೀಯರು ಮತ್ತು ಪ್ರವಾಸಿಗರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಧಾವಿಸಿದ ಹಲಗೂರು ಪೊಲೀಸ್ ಠಾಣೆ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದವರು ಕಾರ್ಯಾಚರಣೆ ನಡೆಸಿ ಐವರ ■6ನೇ ಪುಟಕ್ಕೆ

ಜು.1ರಿಂದಲೇ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಜಾರಿ

- ಎಂ ನರೇಗಾ ಬದಲು ಹೊಸ ವಿಬಿಜಿ ರಾಮ್ ಜಿ ಹೆಸರಲ್ಲಿ ಚಾಲನೆ
- ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಈ ಸಂಬಂಧ ಹಿರಿಯ ಅಧಿಕಾರಿಗಳ ಸಭೆ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಎಂ ನರೇಗಾ) ಯನ್ನು ವಿಕಸಿತ ಭಾರತ–ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಅಜೀವಿಕಾ ಮಿಷನ್ (ವಿಬಿ ಜಿ ರಾಮ್ ಜಿ) ಆಗಿ ಕೇಂದ್ರ ಸರ್ಕಾರ ಬದಲಾಯಿಸಿದ್ದು, ಕರ್ನಾಟಕದಲ್ಲಿ ಹೊಸ ಯೋಜನೆ ಹೆಸರಲ್ಲೇ ಜಾರಿಗೊಳ್ಳಲಿದೆ.



ಸಂಗ್ರಹ ಚಿತ್ರ

ಯೋಜನೆ ಜಾರಿ ವಿಚಾರವಾಗಿ ಕರ್ನಾಟಕ ಸರ್ಕಾರ ಬಲವಾಗಿ ವಿರೋಧ ವ್ಯಕ್ತಪಡಿಸಿ ಉದ್ಯೋಗ ಖಾತ್ರಿ ಹೆಸರು ಬದಲಾವಣೆ ಮಾಡುವುದು ಬೇಡ, ಜತೆಗೆ ಈ ಹಿಂದೆ ನೀಡುತ್ತಿದ್ದ ರೀತಿಯಲ್ಲಿಯೇ ಕೇಂದ್ರ ಸರ್ಕಾರ ತನ್ನ ಪಾಲಿನ ಶೇ 90ರ ಅನುದಾನ ನೀಡಬೇಕು ಎಂದು ಒತ್ತಾಯಿಸಿತ್ತು. ಈ ಕುರಿತು ಭಾರೀ ಪ್ರತಿ ಭಟನೆಯೂ ವ್ಯಕ್ತವಾಗಿತ್ತು. ಇದರಿಂದ ಯೋಜನೆ ಯಾವ ಹೆಸರಿನಲ್ಲಿ ಜಾರಿಂವಾಗಬಹುದು ಎನ್ನುವ ಗೊಂದಲ ಮುಂದುವರಿದಿತ್ತು.

ಯೋಜನೆ ಕುರಿತಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅವರು, ಬುಧವಾರ ಇಲಾಖೆ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ಗ್ರಾಮೀಣ ಭಾಗದ ಕುಟುಂಬಗಳಿಗೆ ಉದ್ಯೋಗದ ಖಾತ್ರಿ ನೀಡಿದ್ದ ನರೇಗಾ ಹೊಸ ಸ್ವರೂಪ ವಿಕಸಿತ ಭಾರತ್ ಜಿ ರಾಮ್ ಜಿಯಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾದರೂ ಗ್ರಾಮೀಣ ಜನರು, ಮಹಿಳೆಯರು, ವಂಚಿತರು, ದುರ್ಬಲರ ಹಿತದೃಷ್ಟಿಯಿಂದ ಜು.1ರಿಂದಲೇ ಜಾರಿಗೆ ತರಲಾಗುವುದು ಎಂದು ತಿಳಿಸಿದರು. ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೇಂದ್ರ ಸರ್ಕಾರ 90:10 ಅನುಪಾತದಲ್ಲಿ ವೇತನ ಭರಿಸುತ್ತಿತ್ತು. ರಾಜ್ಯ ಸರ್ಕಾರ ಕೇವಲ 10ರಷ್ಟು ಹಣ ನೀಡುತ್ತಿತ್ತು. ಆದರೆ, ಈಗ 60:40ರ ಅನುಪಾತದಲ್ಲಿ ವೆಚ್ಚ ಭರಿಸಬೇಕಾಗಿದ್ದು, ರಾಜ್ಯಗಳ ಮೇಲೆ ಹೆಚ್ಚಿನ ಹೊರೆ ಆಗುತ್ತದೆ ಎಂದು ಹೇಳಿದರು.



ಈಶ್ವರ ಖಂಡ್ರೆ

2006 ರಿಂದ 2026ರಲ್ಲಿ ಇಲ್ಲಿಯವರೆಗೆ ಕೇಂದ್ರ ಸರ್ಕಾರ ನರೇಗಾ ಅಡಿಯಲ್ಲಿ 56492 ಕೋಟಿ ಭರಿಸಿದ್ದರೆ, ರಾಜ್ಯ ಸರ್ಕಾರ 4821 ಕೋಟಿ ಮಾತ್ರ ಭರಿಸಿ, ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗ ಒದಗಿಸಿತ್ತು. ಆದರೆ, ಈಗ ಒಂದೇ ವರ್ಷಕ್ಕೆ 3806 ಕೋಟಿ ವೆಚ್ಚ ಭರಿಸುವ ಸ್ಥಿತಿ ಬಂದಿದೆ. ಇದು ರಾಜ್ಯದ ಮೇಲೆ ಆಗುವ ದೊಡ್ಡ ಹೊರೆ. ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜಿ ಅಡಿ ರಾಜ್ಯಕ್ಕೆ ಈ ವರ್ಷಕ್ಕೆ–5709 ಕೋಟಿ ಹಂಚಿಕೆ ಮಾಡಿದೆ. ಗ್ರಾಮೀಣ ಜನರಿಗೆ ತೊಂದರೆ ಆಗದಂತೆ ಯೋಜನೆಗೆ ಹೆಚ್ಚುವರಿ ಭರಿಸುವ ಬಗ್ಗೆ ಈಗಾಗಲೇ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು, ಅವರು ಸಮ್ಮತಿಸಿದ್ದಾರೆ ಎಂದರು.

ಕೃಷಿ ಉದ್ಯೋಗಕ್ಕೆ ಅಡ್ಡಿ: ಕೇಂದ್ರ ಸರ್ಕಾರ ಅವೈಜ್ಞಾನಿಕವಾಗಿ ಬೇಸಾಯದ ಸಮಯದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡದಿರುವಂತೆ ಸೂಚಿಸಿದೆ. ಇದು ಗ್ರಾಮೀಣ ಕುಟುಂಬಗಳಿಗೆ ಮಾರಕವಾಗಿದೆ. ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗ್ರಾಹಕಿ : ಹಲೋ... ಮೂರು ದಿನದಿಂದ ಇಂಟರ್‌ನೆಟ್ ವರ್ಕ್ ಆಗ್ತಿಲ್ಲ. ನೀವ್ ಹೇಳ್ರಿ ನಾ ಏನ್ ಮಾಡ್ಲಿ?

ಟೆಲಿಕಾಲರ್ : ಅಕ್ಕೋರೆ, ಮನಿ ಕೆಲ್ಸ ಏನಾರ ಇದ್ರ ಮಾಡ್ತಾ ಇರ್ರಿ...

ಮೈಸೂರು ಮಿತ್ರ

ಗುರುವಾರ, ಜೂನ್ 25, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಂಬಿ ಬದುಕುವುದು ಬೇರೆ... ನಂಬಿಸುತ್ತ ಬದುಕುವುದು ಬೇರೆ...
ನಂಬಿ ಬದುಕುವವರಲ್ಲಿ ಪ್ರೀತಿ ಇರುತ್ತದೆ.
ನಂಬಿಸುತ್ತ ಬದುಕುವವರಲ್ಲಿ ಸ್ವಾರ್ಥ ಇರುತ್ತದೆ...!!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಮಾಡಿದ ರಾಗಿ ಕೊಟ್ರೂ ಮೂರ್ಖನ ಸಹವಾಸ ಬೇಡವೆಂದಂತೆ.

ನಿಮ್ಮ ಪತ್ರಗಳು

ನಿಮ್ಮದೇ ವಿದ್ಯುತ್ ಕಂಪನಿಗಳ ಬಲಪಡಿಸಿ: ಟಾಟಾ, ಅಂಬಾನಿ, ಅದಾನಿಗೆ ಕೊಡಬೇಡಿ

ಮಾನ್ಯರೆ,

ಕರ್ನಾಟಕ ವಿದ್ಯುತ್ ಕಾಯ್ದೆ 2003 ರ ಅಡಿ ವಿದ್ಯುತ್ ಪೂರೈಕೆಯನ್ನು ಖಾಸಗಿಯವರಿಗೆ ವಹಿಸಲು ಅವಕಾಶವಿದ್ದು, ಟಾಟಾ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನವರು ಈಗಾಗಲೇ ಕರ್ನಾಟಕದ 19 ಜಿಲ್ಲೆಗಳ ವಿದ್ಯುತ್ ವಿತರಣಾ ಪರವಾನಗಿಗಾಗಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿರುವುದು ವರದಿಯಾಗಿದ್ದು, ಅದನ್ನು ವಿರೋಧಿಸಿ ಕೆಪಿಟಿಸಿಎಲ್ ನೌಕರರು, ರೈತರು, ನೇಕಾರರು ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿರುವುದು ಸಹ ವರದಿಯಾಗಿದೆ. ವಿದ್ಯುತ್ ವಿತರಣೆ ಕೇಂದ್ರ–ರಾಜ್ಯಗಳ ಸಮವರ್ತಿ ಪಟ್ಟಿಯಲ್ಲಿದ್ದರೂ ಅದನ್ನು ಬಹುತೇಕ ರಾಜ್ಯ ಸರ್ಕಾರಗಳೇ ನಿರ್ವಹಿಸುತ್ತಿವೆ. ಆದರೆ ಈಗ ಕೇಂದ್ರ ಸರ್ಕಾರವು ನೀತಿ ಆಯೋಗದ ಮೂಲಕ ತನ್ನ ಹಿತ ಚಿಂತಕರಾದ ಟಾಟಾ, ಅದಾನಿ, ಅಂಬಾನಿ ಕಂಪನಿಗಳಿಗೆ ಗುತ್ತಿಗೆ ಕೊಡಲು ಮುಂದಾಗಿದೆ. ಇದಕ್ಕೆ ಕರ್ನಾಟಕ ಸರ್ಕಾರವೂ ಆಸಕ್ತಿ ತೋರಿದೆ. 1947ಕ್ಕೆ ಮೊದಲು ವಿದ್ಯುತ್ ವಿತರಣೆಯು ಖಾಸಗಿ ವಲಯದಲ್ಲಿತ್ತು. ಸ್ವಾತಂತ್ರ್ಯ ನಂತರ ರಾಜ್ಯ ಸರ್ಕಾರಗಳು ತಮ್ಮ ಸುಪರ್ದಿಗೆ ಪಡೆದು ದೇಶಾದ್ಯಂತ ವಿದ್ಯುತ್ ಜಾಲವನ್ನು, ವಿದ್ಯುತ್ ಕೇಂದ್ರಗಳನ್ನು ನಿರ್ಮಿಸಿವೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ನಷ್ಟ ಅನುಭವಿಸುತ್ತಿದ್ದು ವಿದ್ಯುತ್ ವಿತರಣೆಯು ಸಮರ್ಪಕವಾಗಿ ನಡೆಯುತ್ತಿಲ್ಲ, ಖಾಸಗಿಯವರಿಗೆ ವಹಿಸಿದರೆ ವಿದ್ಯುತ್ ವಿತರಣೆಯು ಪರಿಣಾಮಕಾರಿಯಾಗುತ್ತದೆ. ವಿದ್ಯುತ್ ಸೋರಿಕೆ ಮತ್ತು ಆರ್ಥಿಕ ನಷ್ಟವನ್ನು ತಪ್ಪಿಸಬಹುದು ಎನ್ನುವುದು ಕೇಂದ್ರ ರಾಜ್ಯ ಸರ್ಕಾರಗಳ ವಾದವಾಗಿದೆ.

ದೇಶಾದ್ಯಂತ ವಿದ್ಯುತ್ ವಿತರಣಾ ವಲಯವು ಹೊಂದಿರುವ ಸಾಲದ ಮೊತ್ತ 5 ಲಕ್ಷ ಕೋಟಿ ಆದರೆ ಕೇಂದ್ರ ಸರ್ಕಾರವು ಈಗ 11 ರಾಜ್ಯಗಳ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಲು ಮುಂದಾಗಿದ್ದು, ಆಗ ವಿತ್ತೀಯ ಕೊರತೆಯೂ ಕೇವಲ 3.5 ರಿಂದ 3ಕ್ಕೆ ಇಳಿಯಲಿದೆ ಅಷ್ಟೇ. ಎಂದರೆ ಹೆಚ್ಚಿನ ವ್ಯತ್ಯಾಸ ವೇನೂ ಇಲ್ಲ. 2015 ರಲ್ಲಿ ಶೇಕಡ 25 ರಷ್ಟಿದ್ದ ವಿದ್ಯುತ್ ಸೋರಿಕೆ ಈಗ ಶೇ 15ಕ್ಕೆ ಇಳಿದಿದೆ. ಅಲ್ಲದೆ ವಿದ್ಯುತ್ ಪೂರೈಕೆಯ ವಾಸ್ತವ ವೆಚ್ಚ ಮತ್ತು ವರಮಾನ ಸಂಗ್ರಹದ ಅಂತರ ಪ್ರತಿ ಯುನಿಟ್‌ಗೆ 89ಪೈಸೆಯಿಂದ ಈಗ ಆರು ಪೈಸೆಗೆ ಇಳಿದಿದೆ. 2025 ರಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ಖಾಸಗಿ ಕಂಪನಿಗಳು ಸೇರಿ 2700 ಕೋಟಿ ಲಾಭ ಗಳಿಸಿರುವುದು ವರದಿಯಾಗಿದೆ. 2015 ರಿಂದ ಈಚೆಗೆ ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿಗಳಲ್ಲಿ ದಕ್ಷತೆ ಹೆಚ್ಚಾಗಿದ್ದು ವಿದ್ಯುತ್ ಸೋರಿಕೆ, ವಿದ್ಯುತ್ ನಷ್ಟ ಕಡಿಮೆಯಾಗಿದ್ದು ಲಾಭ ಗಳಿಸಿರುವುದು ವರದಿಯಾಗಿದೆ. ಇಂತಹ ಸ್ಥಿತಿಯಲ್ಲಿ ಸ್ವಾತಂತ್ರ್ಯ ನಂತರ ಎಲ್ಲಾ ಮೂಲಸೌಕರ್ಯಗಳನ್ನು ಜನರ ತೆರಿಗೆ ಹಣದಿಂದ ನಿರ್ಮಿಸಿ / ಅಭಿವೃದ್ಧಿಪಡಿಸಿ ಈಗ ಕೇವಲ ವಿತರಣಾ ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡುವುದು ಆಘಾತಕಾರಿ ಸಂಗತಿ. ಇದು ಗೆದ್ದಲು ಹುಳ ಕಟ್ಟಿದ ಹುತ್ತದಲ್ಲಿ ನಾಗರಹಾವು ಬಂದು ಸೇರಿಕೊಂಡಂತೆ ಆಗುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರವು ಯಾವುದೇ ಕಾರಣಕ್ಕೂ ವಿತರಣಾ ವ್ಯವಸ್ಥೆಯನ್ನು ಟಾಟಾ ಕಂಪನಿಗೆ ವಹಿಸದೆ ರಾಜ್ಯದಲ್ಲಿರುವ ವಿದ್ಯುತ್ ಕಂಪನಿಗಳನ್ನು ಇನ್ನಷ್ಟು ಬಲಪಡಿಸಿ ತನ್ನ ಹಿಡಿತದಲ್ಲೇ ಇಟ್ಟುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಇದು ರೈತರಿಗೆ, ನೇಕಾರರಿಗೆ, ಸಣ್ಣ ಉದ್ಯಮಗಳಿಗೆ, ಗ್ರಾಹಕರಿಗೆ ದೊಡ್ಡ ಉರುಳಾಗಲಿದೆ. ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳದೆ, ಖಾಸಗಿಯವರಿಗೆ ವಹಿಸದೆ ಎಚ್ಚರಿಕೆ ವಹಿಸುವುದು ಅಗತ್ಯ. ಇಲ್ಲದಿದ್ದರೆ ಸಾರ್ವಜನಿಕರ ಆಕ್ರೋಶಕ್ಕೆ ಬಲಿಯಾಗಬೇಕಾಗುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಸರ್ಕಾರಿ ಶಾಲೆಗಳ ಕಟ್ಟಡಗಳ ಶೋಚನೀಯ ಸ್ಥಿತಿ

ಮಾನ್ಯರೆ,

ಒಂದು ವರದಿಯ ಪ್ರಕಾರ ರಾಜ್ಯದ ಸುಮಾರು 16800 ಸರ್ಕಾರಿ ಶಾಲೆಗಳ ಕಟ್ಟಡಗಳು ಅತ್ಯಂತ ದುಸ್ಥಿತಿಯಲ್ಲಿವೆ. ಮಳೆ ನೀರು ಸೋರುತ್ತಿರುವ ಛಾವಣಿ, ಮುರಿದ ಬಾಗಿಲು, ಕಿಟಕಿಗಳು, ಬಿರುಕು ಬಿಟ್ಟ ಗೋಡೆಗಳು ಮಕ್ಕಳ ಮತ್ತು ಶಿಕ್ಷಕರಿಗೆ ಯಾವಾಗ ಬೇಕಾದರೂ ಅಪಾಯ ಉಂಟು ಮಾಡುವ ಸ್ಥಿತಿ ತಲುಪಿವೆ. ಈ ಶಾಲೆಗಳನ್ನು ಗುರುತಿಸಿ ಶೀಘ್ರ ಗತಿಯಲ್ಲಿ ಅವುಗಳನ್ನು ದುರಸ್ತಿ ಮಾಡಬೇಕು. ಸರ್ಕಾರ ಇದರತ್ತ ಕೂಡಲೇ ಗಮನ ಹರಿಸಿ ಕಾರ್ಯ ಪ್ರವೃತ್ತವಾಗಬೇಕು.

ಬಹುಶಃ ಈ ಶಾಲಾ ಕಟ್ಟಡಗಳ ತಕ್ಷಣ ದುರಸ್ತಿಗೆ ಸರ್ಕಾರ ಒಂದನ್ನೇ ನಂಬಿ ಕುಳಿತುಕೊಳ್ಳಲಾಗದು. ಸಾರ್ವಜನಿಕರು ದೇವಸ್ಥಾನಗಳಿಗೆ ಉದಾರವಾಗಿ ದಾನ ಮಾಡುತ್ತಾರೆ, ಶ್ರೀಮಂತ ದೇವಾಲಯಗಳು ಇನ್ನೂ ಹೆಚ್ಚಿನ ಶ್ರೀಮಂತವಾಗುತ್ತಿವೆ. ಅದೇ ರೀತಿ ತಮ್ಮ ಮಕ್ಕಳು ಕಲಿಯುವ 'ಸರಸ್ವತಿ ನಿಲಯಗಳಾದ' (Temples of Leaming) ಶಾಲೆಗಳಿಗೆ ದಾನ ಮಾಡಲು ಮುಂದಾಗದೆ ಇರುವುದು ಆಶ್ಚರ್ಯ ಮತ್ತು ನೋವಿನ ಸಂಗತಿ. ಇನ್ನಾದರೂ ಈ ಮನಸ್ಥಿತಿ ಬದಲಾಗಬೇಕಾಗಿದೆ. ನಮ್ಮ ಮಕ್ಕಳ ಸುರಕ್ಷತೆ ಬಗ್ಗೆ ಆದ್ಯತೆ ನೀಡಿ ಪೋಷಕರು ಸಾರ್ವಜನಿಕರು, ದಾನಿಗಳು ಶಾಲಾ ಕಟ್ಟಡಗಳ ದುರಸ್ತಿಗೆ ಹಣ ಸಹಾಯ ಮಾಡಲು ಮುಂದಾಗಬೇಕು.

–ಲಕ್ಷ್ಮಣ್ ಗೋರ್ಲಕಟ್ಟೆ, ಬೋಗಾದಿ, ಮೈಸೂರು.

ನಗರ ಪಾಲಿಕೆ ಗಮನ ಹರಿಸಲಿ



ಮಾನ್ಯರೆ,

ಮಳೆಗಾಲ ಪ್ರಾರಂಭವಾಗಿದೆ. ಮಳೆ ನೀರು ಹರಿಯಬೇಕಾದ ಚರಂಡಿಗಳಲ್ಲಿ ಹೂಳು ತುಂಬಿ ಕಳೆ ಗಿಡಗಳು ಸೊಂಪಾಗಿ ಬೆಳೆದು ಮಳೆ ನೀರು ಸಲೀಸಾಗಿ ಹೋಗಲು ಅಡ್ಡಿಯಾಗುತ್ತಿದೆ. ಮಳೆ ನೀರು ಸರಾಗವಾಗಿ ಹರಿಯದೇ ಕೆಸರು ತುಂಬಿ ಸೊಳ್ಳೆಗಳು ಹೆಚ್ಚಾಗಲು ಕಾರಣವಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆಯು ನಿಯತವಾಗಿ ಈ ಚರಂಡಿಗಳನ್ನು ಸ್ವಚ್ಛ ಮಾಡದ ಕಾರಣ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಮಳೆ ಹೆಚ್ಚಾಗುವ ಮುನ್ನ ಈ ಮಳೆ ನೀರು ಸಾಗುವ ಚರಂಡಿಗಳನ್ನು ಸ್ವಚ್ಛಗೊಳಿಸಲಿ.


–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಮಂಥನ




ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com

ಜೀವನ ಕಲಿಸುವ ಸಾಲುಗಳು...!



ರಾಬರ್ಟ್ ಫ್ರಾಸ್ಟ್





ಇತ್ತೀಚೆಗೆ ಹೀಗೆಯೇ ರೀಲ್ಸ್ ನೋಡುವಾಗ ಒಂದು ಹಳೆಯ ಜಾಹೀರಾತು ಕಣ್ಣಿಗೆ ಬಿತ್ತು. 2008ರಲ್ಲಿ, ನೆದರ್‌ಲ್ಯಾಂಡ್‌ನಲ್ಲಿ ಫೋರ್ಡ್ ಕಂಪನಿಯ ಕಾರ್‌ಗಾಗಿ ಚಿತ್ರಿತ ವಾಗಿದ್ದ ಜಾಹೀರಾತು ಅದು. ಒಬ್ಬ ಹುಡುಗ ಕವಲೊಡೆದ ದಾರಿಯಲ್ಲಿ ನಿಂತು ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ ಎಂಬ ಗೊಂದಲದಲ್ಲಿದ್ದಾನೆ. ಎರಡೂ ದಾರಿಗಳಲ್ಲಿ ತನ್ನ ಭವಿಷ್ಯವನ್ನು ಕಲ್ಪಿಸಿಕೊಳ್ಳುತ್ತಾ ಒಂದನ್ನು ಆರಿಸಿಕೊಳ್ಳುತ್ತಾನೆ. ಆ ರಸ್ತೆಯಲ್ಲಿ ಫೋರ್ಡ್ ಕಾರ್ ಒಂದು ಅವನನ್ನು ಹತ್ತಿಸಿಕೊಳ್ಳುತ್ತದೆ ಅದರಲ್ಲಿ ಒಬ್ಬ ಸುಂದರ ಮಾತ್ರವಲ್ಲ, ಸದ್ಗುಣಿ ಎನಿಸುವ ಹುಡುಗಿಯಿರುತ್ತಾಳೆ. ಇದೊಂದು ಸಾಮಾನ್ಯವಾದ ಜಾಹೀರಾತೇ ಹೌದಾದರೂ, ಹಿನ್ನೆಲೆಯಲ್ಲಿ ಬರುತ್ತಿದ್ದ ಕವನದ ಓದು, ಮತ್ತು ಆ ಜಾಹೀರಾತಿನಲ್ಲಿ ಇದ್ದ ಟ್ಯಾಗ್ ಲೈನ್ ನನ್ನನ್ನು ಸೆಳೆದವು. ಹಿನ್ನೆಲೆಯಲ್ಲಿ ರಾಬರ್ಟ್ ಫ್ರಾಸ್ಟ್‌ನ Road Not Taken ಕೇಳಿಬರುತ್ತಿದ್ದರೆ, ಟ್ಯಾಗ್ ಲೈನ್ That Made the Difference ಎಂದಿತ್ತು.

ನನ್ನ ಅಮ್ಮನೂ ಓದಿದ್ದ ರಾಬರ್ಟ್ ಫ್ರಾಸ್ಟ್ ಅನ್ನು ನಾನು ನನ್ನ ಹೈಸ್ಕೂಲ್ ದಿನಗಳಿಂದ ಬಲ್ಲೆ. ಅವನು ನನ್ನ ಪಾಠಿಚೀಲದಲ್ಲಿದ್ದ ಪುಸ್ತಕಗಳಲ್ಲಿ ಪದ್ಯ ರೂಪದಲ್ಲಿದ್ದ, ಈಗಲೂ ಇದ್ದಾನೆ! ವ್ಯತ್ಯಾಸವೆಂದರೆ, ಆಗ ಅವನು ನನಗೆ ಅಂಕ ಗಳಿಸುವ ದಾರಿಯಾಗಿದ್ದ, ಈಗ ಮತ್ತೆ ಮತ್ತೆ ನನ್ನಿಂದ ವಿಶ್ಲೇಷಣೆಗೆ ಒಳಗಾಗುತ್ತಿದ್ದಾನೆ! ಅರ್ಥವಾಯಿತೇ? ಅಂದರೆ ನಾನು ಅವನನ್ನು ನನ್ನ ಶಾಲಾ ದಿನಗಳಿಂದ ಓದುತ್ತಾ ಬಂದದ್ದು ಮಾತ್ರವಲ್ಲದೆ ಈಗ ಅವನನ್ನು ಪಾಠ ಕೂಡಾ ಮಾಡುತ್ತಿದ್ದೇನೆ. ಏಕೆ ಒಂದು ಪದ್ಯವನ್ನು ಪ್ರಪಂಚಾದ್ಯಂತ ಹೀಗೆ ಪರಂಪರೆ ಪಾಲನೆ ಎಂಬಂತೆ ಓದಿಕೊಂಡು ಬರುತ್ತಿದ್ದಾರೆ? ಎಂಬ ಪ್ರಶ್ನೆ ಏಳುವುದು ಸಹಜವೇ.

ಹೌದು ರಾಬರ್ಟ್ ಫ್ರಾಸ್ಟ್!

ಅಮೆರಿಕೆಯ ಅತ್ಯಂತ ಪ್ರಸಿದ್ಧ ಕವಿ. 4 ಬಾರಿ ತನ್ನ ಕವಿತೆಗಳಿಗಾಗಿಯೇ ಪುಲಿಟ್ಜರ್ ಸೇರಿದಂತೆ ಅನೇಕಾನೇಕ ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡವನು. ಅವನೆಷ್ಟು ಪ್ರಸಿದ್ಧನಾಗಿದ್ದ ಮತ್ತು ಈಗಲೂ ಪ್ರಸಿದ್ಧನೆಂದರೆ, ಗೂಗಲ್ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ಕವಿಗಳ ಬಗ್ಗೆ ಗೂಗಲ್‌ನಲ್ಲಿ ಜನ ಹುಡುಕಿರುವುದರಲ್ಲಿ ಪ್ರಥಮ ಸ್ಥಾನ ಇವನಿಗೆ! ನಂತರದ ಸ್ಥಾನ ಟಿ.ಎಸ್. ಎಲಿಯಟ್‌ಗೆ! ಇವನ ಪದ್ಯದ ಸಾಲುಗಳನ್ನು ಕವಿಗಳು, ಕಾದಂಬರಿಕಾರರು, ವ್ಯಾಪಾರಿಗಳು, ತತ್ವಜ್ಞಾನಿಗಳು, ವಿದ್ಯಾರ್ಥಿಗಳು ಸಾಲದೆಂಬಂತೆ, ರಾಜಕೀಯ ಮುತ್ಸದ್ದಿಗಳೂ ಬಳಸಿದ್ದಾರೆ, ಬಳಸುತ್ತಿದ್ದಾರೆ. ಎಷ್ಟೋ ಪುಸ್ತಕಗಳಿಗೆ, ಲೇಖನಗಳಿಗೆ ಅವು ಶೀರ್ಷಿಕೆಯಾಗಿವೆ.

ಅಮೆರಿಕೆಯ ಜನ ಇವನನ್ನು ತಮ್ಮ ಪ್ರೀತಿಯ ಅಜ್ಜನಂತೆ ಕಾಣುತ್ತಿದ್ದರು. ಮಾರ್ಚ್ 26 1874ರಲ್ಲಿ ಅಮೆರಿಕೆಯ ಸ್ಯಾನ್ ಫ್ರಾನ್ಸಿಸ್ಕೋನಲ್ಲಿ ಜನಿಸಿದ ಫ್ರಾಸ್ಟ್ ಸ್ವಲ್ಪ ಕಾಲ ಇಂಗ್ಲೆಂಡ್‌ನಲ್ಲಿಯೂ ಜೀವಿಸಿದ್ದ. ಯುನೈಟೆಡ್ ಸ್ಟೇಟ್ಸ್ ಮತ್ತು ವೆರ್ಮೋಂಟ್ ಇವನನ್ನು ಪೊಯೆಟ್ ಲಾರಿಯೆಟ್ ಎಂದು ಗೌರವಿಸಿದ್ದವು. ರೈತನಾಗಿಯೂ 9 ವರ್ಷಗಳ ಕಾಲ ಇದ್ದ ಫ್ರಾಸ್ಟ್, ಶಿಕ್ಷಕ ಪತ್ರಕರ್ತನಾಗಿಯೂ ಇದ್ದು ನಂತರದ ದಿನಗಳಲ್ಲಿ ಬರಹಕ್ಕೇ ಮೀಸಲಾಗಿ ಅದನ್ನೇ ತನ್ನ ಜೀವನವಾಗಿಸಿಕೊಂಡ. 88 ವರ್ಷಗಳ ತುಂಬು ಜೀವನ ನಡೆಸಿದ ಫ್ರಾಸ್ಟ್, 1963ರ ಜನವರಿ 29ರಂದು ಬಾಸ್ಟನ್ ನಲ್ಲಿ ತೀರಿಕೊಂಡ.

ಅತ್ಯಾಪ್ತರ ಸಾವಿನ ಸರಮಾಲೆಯನ್ನೇ ತನ್ನ ಜೀವಿತಾವಧಿಯಲ್ಲಿ ನೋಡಿದ್ದ ಫ್ರಾಸ್ಟ್, ತನ್ನ ಮಕ್ಕಳ ಸಾವಿನಿಂದಲೂ ಜರ್ಝರಿತ ನಾಗಿದ್ದ. ಆದರೂ ಅವನ ಕವಿಮನಸು ಹೇಗೋ ಸಮತೋಲನ ಕಾಯ್ದುಕೊಂಡು ಅತ್ಯುತ್ತಮ ಕವಿತೆಗಳನ್ನು ನೀಡುತ್ತಲೇ ಹೋಯಿತು. ಯಾವುದೇ ಶಬ್ದಾಡಂಬರ ಇಲ್ಲದೆ, ಸರಳ ಪದಗಳಲ್ಲಿ ಜೀವನ ಪಾಠವನ್ನು ಹೇಳುವ ಅವನ ಪದ್ಯಗಳು ಜನಸಾಮಾನ್ಯರಿಂದ ಹಿಡಿದು ಪ್ರಾಜ್ಞರನ್ನೂ ಸೆಳೆದವು.

ನಾನು ಲೇಖನದ ಆರಂಭದಲ್ಲಿ ಉಲ್ಲೇಖಿಸಿದ ಪದ್ಯ The Road Not Taken ಅನ್ನು ನಾನು ಹೈಸ್ಕೂಲಿನಲ್ಲಿ ಡಿಗ್ರಿಯಲ್ಲಿ ಮತ್ತು ಎಂಎನಲ್ಲಿ ಕೂಡಾ ಓದಿದ್ದೆ. ಉಪನ್ಯಾಸಕಿಯಾಗಿ ವೃತ್ತಿ ಆರಂಭ ಮಾಡಿದಾಗಲೂ ಆ ಪದ್ಯವನ್ನು ನನ್ನ ಮೊದಲ ಬ್ಯಾಚಿನ ವಿದ್ಯಾರ್ಥಿಗಳಿಗೆ ಪಾಠ ಮಾಡಿದೆ. ಈಗಲೂ ಮಾಡುತ್ತಿದ್ದೇನೆ! The Road Not Taken ಅನ್ನು ಫ್ರಾಸ್ಟ್ ಬರೆದಿದ್ದು 1915ರಲ್ಲಿ. ನಂತರ 1916ರಲ್ಲಿ Mountain Interval ಎಂಬ ಸಂಕಲನದಲ್ಲಿ ಪ್ರಕಟವಾಯಿತು.

ಸರಳ ಪದಗಳ 5 ಸಾಲಿನ 4 ಚರಣಗಳ ಈ ಪದ್ಯ ಎಲ್ಲರಿಗೂ ಜೀವನ ಪಾಠ ಹೇಳುತ್ತದೆ. ಪದ್ಯ ಹೀಗಿದೆ...

Two roads diverged in a yellow wood,
And sorry I could not travel both
And be one traveller, long I stood
And looked down one as far as I could
To where it bent in the undergrowth;

Then took the other, as just as fair,
And having perhaps the better claim,
Because it was grassy and wanted wear;
Though as for that the passing there
Had worn them really about the same,

And both that morning equally lay
In leaves no step had trodden black.
Oh, I kept the first for another day!
Yet knowing how way leads on to way,
I doubted if I should ever come back.

I shall be telling this with a sigh
Somewhere ages and ages hence:
Two roads diverged in a wood, and I?
I took the one less travelled by,
And that has made all the difference.

ಪದ್ಯದ ಸಾರಾಂಶ ಇಷ್ಟೇ;

ಒಬ್ಬ ಮನುಷ್ಯ ತನ್ನ ಪ್ರಯಾಣದ ಸಂದರ್ಭ ದಲ್ಲಿ ಕವಲು ದಾರಿಗೆ ಎದುರಾಗುತ್ತಾನೆ. ಎರಡರಲ್ಲಿಯೂ ನಾನು ಹೋಗಲಾರೆ ಎಂಬ ವಿಷಾದದೊಂದಿಗೆ, ಯಾವುದನ್ನು ಆಯ್ದುಕೊಳ್ಳಲಿ ಎಂಬ ಗೊಂದಲ ಅವನಿಗೆ. ಎರಡರಲ್ಲೂ ಜನ ಓಡಾಡಿರುವುದು ಹೌದಾದರೂ ಒಂದು ಹೆಚ್ಚು ಜನ ಓಡಾಡಿ ಹುಲ್ಲು ಸವೆದಿರುವ ದಾರಿ ಮತ್ತು ಯಾರೂ ಹೆಚ್ಚು ಓಡಾಡದೆಯೇ ಹಸಿರಾಗಿರುವ ದಾರಿ. ಕಡೆಗೆ ತಾನು ಹೆಚ್ಚು ಜನ ಓಡಾಡದ ದಾರಿಯನ್ನು ಆಯ್ದುಕೊಂಡೆ ಎಂಬು ನಿಟ್ಟುಸಿರಿಡುತ್ತಾ ಹೇಳುವ ಕವಿ, ಅದೇ ತನ್ನ ಜೀವನದಲ್ಲಿಯ ಬದಲಾವಣೆಗೆ ದಾರಿಯಾಯಿತು ಎಂದು ಹೇಳುತ್ತಾನೆ.

ಜೀವನದಲ್ಲಿ ಎಲ್ಲರಿಗೂ ಎದುರಾಗುವ ಸಂದರ್ಭವಿದು. ಜೀವನದ ಹಲವು ಘಟ್ಟಗಳಲ್ಲಿ ಹೀಗೆಯೇ ನಮಗೆ ಕವಲುದಾರಿಗಳು ಎದುರಾಗುತ್ತಲೇ ಇರುತ್ತವೆ. ನಾವು ಆಯ್ಕೆಯ ಗೊಂದಲಕ್ಕೆ ಬೀಳುತ್ತಲೇ ಇರುತ್ತೇವೆ. ಒಂದಷ್ಟು ಮಂದಿ ಎಲ್ಲರೂ ಹಿಡಿದಿರುವ ದಾರಿ ಸುಲಭ ಎಂದು ಆಯ್ದುಕೊಂಡರೆ ಕೆಲವರು ತಮ್ಮದೇ ಛಾಪು ಮೂಡಿಸಲು ಹೊಸ ದಾರಿಯಲ್ಲಿ ನಡೆಯುತ್ತಾರೆ, ಅದು ಅವರನ್ನು ಸಾಧಕರನ್ನಾಗಿ ಮಾಡುತ್ತದೆ. ಈ ಪದ್ಯವೂ ಅದನ್ನೇ ಹೇಳಲು ಹೊರಟಂತಿದೆ.

ಆದರೆ ವಿಮರ್ಶಕರು ಹೇಳುವುದು ಬೇರೆಯೇ. ಇದರ ಹೆಸರು The Road Not Taken. ಹಾಗಾಗಿ ಇಲ್ಲಿ ಕವಿ ಹೇಳುವುದು ತಾನು ತುಳಿಯದ ದಾರಿಯ ಬಗ್ಗೆ, ಅದನ್ನು ಆರಿಸಿಕೊಂಡಿದ್ದರೆ ಬೇರೆಯದೇನೋ ಆಗುತ್ತಿತ್ತೇನೋ? ಎಂಬ ನಿರಾಶೆಯೂ ಕವಿಗಿದೆ ಎಂಬುದನ್ನು ವಿಮರ್ಶಕರು ಗುರುತಿಸುತ್ತಾರೆ. ಹಾಗೆಯೇ ಈಗ ಆರಿಸಿಕೊಂಡು ನಡೆದುಬಂದಿರುವ ಹಾದಿಯಲ್ಲಿ, ತನ್ನ ಬದುಕಿನಲ್ಲಿ ಆಗಿರುವ ಬದಲಾವಣೆಗಳಿಗೆ ತಾನು ಕಾರಣನೇ ಅಲ್ಲವೇ? ಎಂಬ ಹತಾಶೆಯೂ ಕಾಣಿಸುತ್ತದೆ. ಅದನ್ನೇ ಕೊನೆಯ ಚರಣದಲ್ಲಿ Sigh ಅಂದರೆ ನಿಟ್ಟುಸಿರು ಎಂದು ಕವಿ ಬಳಸಿದ್ದಾನೆ. ಅದು ನಿರಾಶೆಯದು ಎನ್ನುವುದು ವಿಮರ್ಶಕರ ವಿವರಣೆ. ನಿರಚನಾವಾದದ(Decon struction) ದೃಷ್ಟಿಯಲ್ಲಿಯೂ ಇದೇ ಅರ್ಥ.

ಆದರೆ ಆಳವಾದ ಈ ಓದುವಿಕೆಯನ್ನು ಬದಿಗಿಟ್ಟರೆ, ನಾನು ಮೊದಲಿಗೆ ಹೇಳಿದ ಅರ್ಥವೇ ಎದ್ದು ಕಾಣುವುದು. ಮತ್ತು ಅದು ಈ ಪದ್ಯವನ್ನು ಎಲ್ಲರಿಗೂ ಸ್ಫೂರ್ತಿದಾಯಕವಾಗಿಸುತ್ತದೆ. ಅದರಲ್ಲಿಯೂ ವಿದ್ಯಾರ್ಥಿಗಳಿಗೆ ಈ ಪದ್ಯ ಸಾಕಷ್ಟು ಪಾಠಗಳನ್ನು ಹೇಳುತ್ತದೆ.

ತಮ್ಮ ಶೈಕ್ಷಣಿಕ ಜೀವನದಲ್ಲಿಯೇ ಹಲವು ಆಯ್ಕೆಗಳ ಸಂದರ್ಭವನ್ನು ಎದುರಿಸುವ ವಿದ್ಯಾರ್ಥಿಗಳಿಗೆ ನಿರ್ಧಾರದ ಮಹತ್ವವನ್ನು ಪದ್ಯ ಹೇಳುತ್ತದೆ. ನಿರ್ಧಾರಗಳನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ ಮತ್ತು ದಾರಿ ಯಾವುದೇ ಆಗಿದ್ದರೂ, ಒಮ್ಮೆ ಆರಿಸಿಕೊಂಡ ಮೇಲೆ ಮತ್ತೆ ಹಿಂತಿರುಗುವುದು ಅಸಾಧ್ಯ, ಹಾಗಾಗಿ ಆರಿಸಿಕೊಂಡ ದಾರಿಯಲ್ಲಿ ಎದುರಾದ ಸವಾಲುಗಳನ್ನು ಎದುರಿಸಿ ಮುನ್ನುಗ್ಗುವುದೇ ಬುದ್ಧಿವಂತಿಕೆ ಎಂಬುದನ್ನು ಪದ್ಯ ಹೇಳುತ್ತದೆ. ನಮ್ಮ ನಮ್ಮ ಜೀವನಕ್ಕೆ ನಾವೇ ಹೊಣೆಗಾರರು, ಅದನ್ನು ರೂಪಿಸಿಕೊಳ್ಳುವ ಜವಾಬ್ದಾರಿ ನಮ್ಮದೇ ಎನ್ನುವುದನ್ನು ಪದ್ಯ ಮನದಟ್ಟು ಮಾಡಿಸುತ್ತದೆ.

ಈ ಎಲ್ಲ ಅಂಶಗಳು ಈ ಪದ್ಯವನ್ನು ಇಂದಿಗೂ ವಿದ್ಯಾರ್ಥಿಗಳಿಗೆ ಪ್ರಸ್ತುತವನ್ನಾಗಿ ಮಾಡುತ್ತದೆ. ತರಗತಿಯಲ್ಲಿ ಈ ಎಲ್ಲ ಅಂಶಗಳನ್ನು ಹೇಳುತ್ತಿದ್ದರೆ ಸಮಯ ಕಳೆದದ್ದು ತಿಳಿಯುವುದೇ ಇಲ್ಲ ಮತ್ತು ಎಷ್ಟು ಹೇಳಿದರೂ ಮುಗಿಯುವುದಿಲ್ಲ. ಇಲ್ಲಿ ನಾನು ನಿಮಗೆ ಆ ಪದ್ಯವನ್ನು ಪರಿಚಯಿಸಿದ್ದೇನೆ ಅಷ್ಟೇ, ನಿಮಗೆ ಪದ್ಯ ಬೇರೆಯದೇ ರೀತಿಯಲ್ಲಿ ಕಾಡಬಹುದು!

ಇಂದು ಈ ಪದ್ಯಕ್ಕೆ ಇಷ್ಟೆಲ್ಲಾ ಮನ್ನಣೆ ನೀಡಿದ್ದೇವೆ, ಜೀವನ ಕಲಿಸುವ ಸಾಲುಗಳು ಎಂದೆಲ್ಲಾ ಹೇಳುತ್ತಿದ್ದೇವೆ. ಆದರೆ ರಾಬರ್ಟ್ ಫ್ರಾಸ್ಟ್ ಈ ಪದ್ಯವನ್ನು ಬರೆದದ್ದು ಒಂದು ಮಾಮೂಲಿ ಘಟನೆಯಿಂದ ಪ್ರೇರಿತವಾಗಿ ಎಂದರೆ ನೀವು ನಂಬಲೇಬೇಕು. ಹೌದು! ಸ್ವಲ್ಪ ದಿನಗಳ ಕಾಲ ಲಂಡನ್‌ನಲ್ಲಿ ವಾಸವಿದ್ದ ಫ್ರಾಸ್ಟ್‌ಗೆ ಇಂಗ್ಲಿಷ್ ಕವಿ ಎಡ್ವರ್ಡ್ ಥಾಮಸ್ ನೊಂದಿಗೆ ಗೆಳೆತನವಾಗುತ್ತದೆ. ಇಬ್ಬರೂ ವಾಯುವಿಹಾರಕ್ಕೂ ಒಟ್ಟಿಗೆ ಹೋಗುತ್ತಿರುತ್ತಾರೆ. ಅಂತಹ ಒಂದು ದಿನ ಕವಲುದಾರಿ ಎದುರಾದಾಗ, ಯಾವಾಗಲೂ ಅಂತಹ ಸಂದರ್ಭಗಳಲ್ಲಿ ಗೊಂದಲಗೊಳ್ಳುತ್ತಿದ್ದ ಥಾಮಸ್‌ನನ್ನು ನೋಡಿ ನಕ್ಕು ಫ್ರಾಸ್ಟ್ ಈ ಕವನ ಬರೆದನಂತೆ! ಆದರೆ ಕವನಗಳು ಹೇಳಿದ ಜೀವನ ಸತ್ಯ ಅದನ್ನು ಅಮರವಾಗಿಸಿ ತನ್ಮೂಲಕ ಫ್ರಾಸ್ಟ್ ನನ್ನೂ ಅಮರವಾಗಿಸಿತು. ಫ್ರಾಸ್ಟ್ ಯಾವಾಗಲೂ ಹೇಳುತ್ತಿದ್ದನಂತೆ, ನನ್ನನ್ನು ಅಮರವಾಗಿಸುವ ಒಂದಷ್ಟು ಪದ್ಯಗಳನ್ನು ಬರೆಯಬೇಕು," ಎಂದು. ಅವನ ಆಸೆ ಈಡೇರಿದೆ!

ಈ ಪದ್ಯ ಮಾತ್ರವಲ್ಲ, ರಾಬರ್ಟ್ ಫ್ರಾಸ್ಟ್‌ನ, Stopping by Woods on a Snowy Evening ಪದ್ಯ ಕೂಡಾ ಅಷ್ಟೇ ಜನಪ್ರಿಯ. ಅಲ್ಲಿಯೂ ಒಬ್ಬ ಸವಾರ ಕಾಡಿನ ಸೌಂದರ್ಯಕ್ಕೆ ಬೆರಗಾಗಿ ಮಾರುಹೋಗುತ್ತಾನೆ. ಆದರೆ ಅವನ ಜವಾಬ್ದಾರಿಗಳು ಅವನನ್ನು ಹಿಂತಿರುಗಿ ಮನೆಯ ಕಡೆ ಹೋಗುವಂತೆ ಅವನನ್ನು ಪ್ರೇರೇಪಿಸುತ್ತವೆ. ಅವನು ಹೇಳುತ್ತಾನೆ

But I have promises to keep
And miles to go before I sleep

ಎಂದು.

ವಯಸ್ಸಿನ ಕ್ಷಣಿಕ ಆಕರ್ಷಣೆಗಳಿಗೆ ಬಲಿಯಾಗಲು ಯಾವಾಗಲೂ ಸಿದ್ಧವಾಗಿ ತಮ್ಮ ಗುರಿ, ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಬದಿಗೊತ್ತುವ ವಿದ್ಯಾರ್ಥಿಗಳಿಗೆ ಇದಕ್ಕಿಂತಾ ಉತ್ತಮ ಪದ್ಯ ಇನ್ಯಾವುದಿರಬಹುದು?

ಈ ಪದ್ಯ ನಮ್ಮ ಪ್ರಥಮ ಪ್ರಧಾನಮಂತ್ರಿ ನೆಹರೂ ಅವರಿಗೂ ಅಚ್ಚುಮೆಚ್ಚಿನ ದಾಗಿತ್ತು. ಅವರ ಬಳಿ ಫ್ರಾಸ್ಟ್‌ನ ಕವನಗಳ ಸಂಕಲನ ಯಾವಾಗಲೂ ಇರುತ್ತಿತ್ತಂತೆ. ಅವರ ಟೇಬಲ್ ಮೇಲೆ ಒಂದು ಪುಟ್ಟ ಬೋರ್ಡ್ ಇದ್ದು ಅದರಲ್ಲಿ ಈ ಪದ್ಯದ ಕೊನೆಯ ಎರಡು ಸಾಲುಗಳನ್ನು ಮೂಡಿಸಲಾಗಿತ್ತು.

Miles to go before I sleep
And miles to go before I sleep.

ಇಲ್ಲಿ ಗಮನಿಸಬೇಕಾದ್ದು ಏನೆಂದರೆ, ಒಂದೇ ಸಾಲು ಆದರೆ ಎರಡಕ್ಕೂ ಬೇರೆ ಬೇರೆ ಅರ್ಥ!

ಅದು ಫ್ರಾಸ್ಟ್‌ನ ಮೋಡಿ!

2023ರಲ್ಲಿ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಅಂದಿನ ಅಮೆರಿಕೆಯ ಅಧ್ಯಕ್ಷ ಜೋ ಬಿಡೆನ್, ರಾಬರ್ಟ್ ಫ್ರಾಸ್ಟ್‌ನ ಕವನಗಳ ಸಂಕಲನವನ್ನು ನೀಡಿದ್ದರು! ಇಂದಿಗೂ ಫ್ರಾಸ್ಟ್ ಹೀಗೆ ಓದಲ್ಪಡುತ್ತಿದ್ದಾನೆ.

ತನ್ನ 41ನೆಯ ವಯಸ್ಸಿನಲ್ಲಿ ಫ್ರಾಸ್ಟ್ The Road Not Taken ಪದ್ಯವನ್ನು ಬರೆದದ್ದು. ಈಗ ಕವನಕ್ಕೆ 90ರ ಹರೆಯ! ಇಂದಿಗೂ ಎಲ್ಲರ ಮನಃಪಟಲದಲ್ಲಿ ಸುಳಿಯುವ ಪದ್ಯ The Road Not Taken!

ಭಾರತಾಂಬೆ ಹೆಸರಲ್ಲಿ ಪ್ರತಿಜ್ಞೆ: ಕೇರಳಂ ಬಿಜೆಪಿ ಕೌನ್ಸಿಲರ್‌ಗಳ ಪ್ರಮಾಣ ಅಮಾನ್ಯ



ಕೊಚ್ಚಿ: ಸ್ಥಳೀಯಾಡಳಿತ ಸಂಸ್ಥೆಗಳಿಗೆ ಚುನಾಯಿತ ಜನಪ್ರತಿನಿಧಿಗಳು ಕಾನೂನಿನಿಂದ ರೂಪಿಸಲಾದ ಚೌಕಟ್ಟಿಗೆ ಅನ್ವಯವಾಗಿ ಪ್ರಮಾಣವಚನ ಸ್ವೀಕರಿಸಬೇಕು ಎಂದು ಕೇರಳಂ ಹೈಕೋರ್ಟ್ ಬುಧವಾರ ಮಹತ್ವದ ತೀರ್ಪು ನೀಡಿದೆ.

ತಿರುವನಂತಪುರ ಕಾರ್ಪೊರೇಷನ್‌ನಲ್ಲಿ ದೇವರ ಹೆಸರನ್ನು ಅಥವಾ ವಿಧಿಬದ್ಧವನ್ನು ಹೊರತುಪಡಿಸಿ ಇತರೆ ಹೆಸರುಗಳಲ್ಲಿ ಪ್ರಮಾಣವಚನ ಸ್ವೀಕರಿಸಿದ ಬಿಜೆಪಿಯ ಹಲವಾರು ಕೌನ್ಸಿಲರ್‌ಗಳ ಪ್ರಮಾಣವಚನ ಅಮಾನ್ಯವೆಂದು ಆದೇಶಿಸಿದೆ.

ನ್ಯಾಯಮೂರ್ತಿ ಪಿ.ವಿ. ಕುಂಞಿಕೃಷ್ಣನ್ ಅವರು ನೀಡಿದ ತೀರ್ಪಿನಲ್ಲಿ, ಕೇರಳಂ ಪುರಸಭೆ ಕಾಯ್ದೆ ಮತ್ತು ಕೇರಳಂ ಪಂಚಾಯಿತಿ ರಾಜ್ ಕಾಯ್ದೆಯಡಿ ಚುನಾಯಿತ ಸದಸ್ಯರು ದೇವರ ಹೆಸರಿನಲ್ಲಿ ಅಥವಾ ವಿಧಿಬದ್ಧವಾಗಿ ಪ್ರಮಾಣವಚನ ಸ್ವೀಕರಿಸಬೇಕು ಎಂದಿದೆ.

ಅದನ್ನು ಹೊರತುಪಡಿಸಿ ಯಾವುದಾದರೂ ನಿರ್ದಿಷ್ಟ ದೇವತೆ, ಭಾರತ ಮಾತೆ, ರಾಜಕೀಯ ಹುತಾತ್ಮರು, ಸಂಸ್ಥೆಗಳು ಅಥವಾ ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಲು ಕಾನೂನಿನಡಿ ಅವಕಾಶ ಇಲ್ಲ ಎಂದು ಹೇಳಿದೆ. ತಿರುವನಂತಪುರ ಕಾರ್ಪೊರೇಷನ್‌ನ 20 ಕೌನ್ಸಿಲರ್‌ಗಳು ವಿವಿಧ ಹಿಂದೂ ದೇವತೆಗಳಾದ ಭಾರತಾಂಬೆ, ಭಾರತ ಮಾತೆ, ಗುರುದೇವ ಮತ್ತು ರಾಜಕೀಯ ಚಳವಳಿಯ ಹುತಾತ್ಮರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರು.

ಮತ್ತೊಂದು ಪ್ರತ್ಯೇಕವಾದ ಅರ್ಜಿಯಲ್ಲಿ ಪಾಲಕ್ಕಾಡ್ ಜಿಲ್ಲೆಯ ವಡಕ್ಕಂಚೇರಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಹೆಸರಿನಲ್ಲಿ ದೇವರ ಆಶೀರ್ವಾದದಿಂದ ಪ್ರಮಾಣವಚನ ಸ್ವೀಕರಿಸಿದ್ದರು ಎಂದು ಉಲ್ಲೇಖಿಸಲಾಗಿತ್ತು. ಚುನಾಯಿತ ಪ್ರತಿನಿಧಿಯೊಬ್ಬರು ದೇಶದ ಸಂವಿಧಾನದ ಮೌಲ್ಯವನ್ನು ಎತ್ತಿ ಹಿಡಿಯುತ್ತಾರೆ. ಕಾನೂನನ್ನು ಪಾಲಿಸುತ್ತಾರೆ ಮತ್ತು ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಾರೆ. ಹಾಗಾಗಿ ಪ್ರಮಾಣವನ್ನು ಕಾನೂನಿಂದ ರಚಿಸಲಾದ ಚೌಕಟ್ಟಿಗೆ ಅನುಗುಣವಾಗಿ ಸ್ವೀಕರಿಸಬೇಕು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಜನರಿಗೆ ಯಾವುದೇ ದೇವರನ್ನು ಪೂಜಿಸುವ ಅಥವಾ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವಿದೆ. ಆದರೆ, ಪ್ರಮಾಣವು ಶಾಸನಬದ್ಧವಾಗಿಯೇ ನಡೆಯಬೇಕು ಎಂದಿದೆ.

ದೇವಾಲಯ ನಿರ್ಮಾಣ ಕಾಮಗಾರಿಗೆ ಚಾಲನೆ...



ಮೈಸೂರಿನ ಶಿವರಾಮಪೇಟೆಯಲ್ಲಿ ಸೋಸಲೆ ಶ್ರೀ ವ್ಯಾಸರಾಜರ ಮಠವು ಮೂರು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಶ್ರೀ ಶ್ರೀನಿವಾಸ ದೇವಾಲಯ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಸೋಸಲೆ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಜಯರಾಜ್, ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ, ವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ.ಡಿ.ಪಿ.ಮಧುಸೂದನಾ ಚಾರ್ಯ, ತಿರುಮಲ ತಿರುಪತಿ ದೇವಸ್ಥಾನ ಬೋರ್ಡ್‌ನ ಮಾಜಿ ಸದಸ್ಯ ಡಿ.ಪಿ.ಅನಂತಾಚಾರ್ಯ, ಮುಖಂಡರಾದ ಗುರುರಾಜ್, ಸುಧೀಂದ್ರ, ರಾಘವೇಂದ್ರ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೆಲ ಮೂಲಭೂತ ಸಮಸ್ಯೆಗಳಿಂದ ಪ್ರಜಾಪ್ರಭುತ್ವ ಕುಂಟು ಕುದುರೆಯಾಗಿದೆ

ವಿಚಾರ ಸಂಕಿರಣ ಉದ್ಘಾಟಿಸಿ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಬೇಸರ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾವೇರಿ ಸಭಾಂಗಣದಲ್ಲಿ ನಡೆದ 'ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಸಮಕಾಲೀನ ಭಾರತ; ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಹಾಗೂ ಒಳಗೊಳ್ಳುವ ಅಭಿವೃದ್ಧಿ: ಮರುಚಿಂತನೆ' ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣಕ್ಕೆ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಚಾಲನೆ ನೀಡಿದರು.

> ಕಳೆದ ಒಂದು ದಶಕದಿಂದ ಹಿಂದುತ್ವದ ರಾಜಕಾರಣದ ವ್ಯವಸ್ಥೆ ಇದೆ. ಬಂಡವಾಳಶಾಹಿ ಹಾಗೂ ಬಲಪಂಥೀಯ ಪ್ರಜಾಪ್ರಭುತ್ವ ಕಾಣುತ್ತಿದ್ದೇವೆ. ಅಲ್ಲದೆ, ಕೋಮುವಾದ, ಜಾತಿವಾದ ಹೆಚ್ಚಾಗುತ್ತಿದೆ. ಎಸ್‌ಐಆರ್ ಅಸ್ತ್ರ ಬಳಸಿ ಕೋಟ್ಯಾಂತರ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕುವ ಹುನ್ನಾರ ನಡೆಯುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದ್ದು, ಸರ್ಕಾರಗಳನ್ನು ಪತನಗೊಳಿಸುವುದು, ಪಕ್ಷಗಳನ್ನು ಒಡೆಯುವುದು ಪ್ರಜಾಪ್ರಭುತ್ವವೇ ಎಂಬ ಪ್ರಶ್ನೆ ಕಾಡುತ್ತಿದೆ. ದೇಶದಲ್ಲಿ ಬಡವರು-ಶ್ರೀಮಂತರ ನಡುವಿನ ಕಂದಕ ಹೆಚ್ಚಾಗುತ್ತಿದೆ. ತಲಾ ಆದಾಯದ ಪ್ರಮಾಣ ಕುಸಿದಿದೆ. ಸಮಾನತೆ, ಸೋದರತ್ವ ಮರೀಚಿಕೆಯಾಗಿದೆ.
>
> -ಮೂಡ್ನಾಕೂಡು ಚಿನ್ನಸ್ವಾಮಿ

ಮೈಸೂರು,ಜೂ.24(ಎಂಟಿವೈ)- ಅದ್ಭುತವಾಗಿ ದಾರಿ ತೋರಿಸುವ ಅತ್ಯುತ್ತಮ ಸಂವಿಧಾನ ನಮ್ಮ ದೇಶದಲ್ಲಿದ್ದರೂ ಕೆಲ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗದ ಕಾರಣ ಪ್ರಜಾಪ್ರಭುತ್ವ ಕುಂಟು ಕುದುರೆಯಾದಂತಾಗಿದೆ ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ 'ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಸಮಕಾಲೀನ ಭಾರತ: ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಹಾಗೂ ಒಳಗೊಳ್ಳುವ ಅಭಿವೃದ್ಧಿ: ಮರುಚಿಂತನೆ' ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಪ್ರದಾನ ಭಾಷಣ ಮಾಡಿದರು.

ಜಾತಿ ವ್ಯವಸ್ಥೆ ನೆಲೆಯೂರಿರುವುದರಿಂದ ದೇಶದಲ್ಲಿ ಪ್ರಜಾಪ್ರಭುತ್ವ ದುರ್ಬಲಗೊಳ್ಳುತ್ತಿದೆ. ಜಾತಿ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವ ಎಣ್ಣೆ-ಸೀಗೆಕಾಯಿ ಇದ್ದಂತೆ, ಇವು ಎಂದಿಗೂ ಹೊಂದಾಣಿಕೆಯಾಗುವುದಿಲ್ಲ. ಆ ಕಾರಣದಿಂದಲೇ ಅನೇಕ ಸಮಸ್ಯೆಗಳಿಗೆ ಇಂದಿಗೂ ಪರಿಹಾರ ಸಿಕ್ಕಿಲ್ಲ. ಸಂವಿಧಾನದಲ್ಲಿನ ಹಲವು ನಿಯಮಗಳು (ಕಲಂ) ಇಂದಿಗೂ ಅನುಷ್ಠಾನವಾಗಿಲ್ಲ. ಇದರಿಂದ ಅಸಮಾನತೆ, ಭ್ರಾತೃತ್ವ ಇಲ್ಲದಂತಾಗಿ ಜಾತಿ ವ್ಯವಸ್ಥೆ ಮತ್ತಷ್ಟು ಗಟ್ಟಿಗೊಳ್ಳುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಡಿಐಜಿ ಹನುಮಂತರಾಯ ಉದ್ಘಾಟಿಸಿ ಮಾತನಾಡಿ, ಸಂವಿಧಾನ ಎಲ್ಲರ ದಾರಿದೀಪವಾಗಿದೆ. ದೇಶದ ಮುಂದಿನ ಹಾದಿ ಹೇಗಿರಬೇಕೆಂಬ ಮರು ಚಿಂತನೆ ಅಗತ್ಯ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳಿಂದ ಗುಣಮಟ್ಟದ ಚರ್ಚೆ ಆಗಬೇಕು. ಸಾಮಾಜಿಕ ನ್ಯಾಯಪರ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು. ಕಟ್ಟಕಡೆಯ ವ್ಯಕ್ತಿಗೂ ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ವಹಿಸಿದ್ದರು. ಕುಲಸಚಿವರಾದ ಪ್ರೊ.ಎಸ್.ಕೆ.ನವೀನ್‌ಕುಮಾರ್, ಸಿ.ಎಸ್. ಆನಂದ್‌ಕುಮಾರ್, ಹಣಕಾಸು ಅಧಿಕಾರಿ ನಿರಂಜನರಾಜ್ ಅರಸ್, ಡೀನ್ ಪ್ರೊ. ಎಂ.ರಾಮನಾಥಂ ನಾಯ್ಡು, ಸಂಘಟನಾ ಕಾರ್ಯದರ್ಶಿ ಶಿವಕುಮಾರಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ನಮಗೂ ಪೋಸ್ಟರ್ ಅಭಿಯಾನ ಬರುತ್ತೆ...!

- ಕಾಂಗ್ರೆಸ್ ನಾಯಕರಿಗೆ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಎದಿರೇಟು
- ನಮ್ಮ ಕುಟುಂಬಕ್ಕೆ 100 ಎಕರೆ ಭೂಮಿ ಇದೆ ಎಂದಿರುವ ಎಂ.ಬಿ.ಪಾಟೀಲ್ ಕ್ಷಮೆಗೆ ಆಗ್ರಹ

ಬೆಂಗಳೂರು,ಜೂ.24(ಕೆಎಂಶಿ)- ಪೋಸ್ಟರ್ ಅಭಿಯಾನ ನಮಗೂ ಬರುತ್ತೆ, ಪುಂಡಪೋಕರಿಗಳ ಪೋಸ್ಟರ್‌ಗಳಿಗೆ ನಾನು ಉತ್ತರಿಸಲ್ಲ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ನಮಗೂ ಪೋಸ್ಟರ್ ಅಭಿಯಾನ ಮಾಡಲು ಬರುತ್ತದೆ, ಇವರಂತೆ ಕೀಳು ಮಟ್ಟದ ರಾಜಕಾರಣ ಮಾಡಬಾರದೆಂದು ಸುಮ್ಮನಿದ್ದೇವೆ. ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಮ್ಮ ಹೇಳಿಕೆಗೆ ಕ್ಷಮೆ ಕೇಳಬೇಕು, ಇಲ್ಲದಿದ್ದರೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ ಎಂದು ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಯಿ ಇದೆ ಎಂದು ಏನು ಬೇಕಾದರೂ ಮಾತನಾಡುವುದಲ್ಲ. ಎಂ.ಬಿ.ಪಾಟೀಲ್ ವಿದ್ಯಾವಂತರು ಅಂದುಕೊಂಡಿದ್ದೆ, ಯಾವ ಆಧಾರದ ಮೇಲೆ ಮಾತನಾಡಿದ್ದಾರೋ ಗೊತ್ತಿಲ್ಲ ಎಂದರು.

ಎಂ.ಬಿ.ಪಾಟೀಲ್ ನಮ್ಮ ಕುಟುಂಬಕ್ಕೆ 100 ಎಕರೆ ಭೂಮಿ ಇದೆ ಎಂಬುದನ್ನು ಸಾಬೀತು ಮಾಡಿದರೆ ಅವರಿಗೆ ನಾನು



ನಿಖಿಲ್

ತಲೆಬಾಗುತ್ತೇನೆ. ಇಲ್ಲವಾದಲ್ಲಿ ಅವರು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು.

ಸ್ಟೇಟಸ್ ಮುಖ್ಯಮಂತ್ರಿ ಕೆಲವು ಚೇಲಾಗಳನ್ನು ನಿಖಿಲ್ ಕುಮಾರಸ್ವಾಮಿ ಮತ್ತು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೈಯ್ಯಲು ನೇಮಿಸಿದ್ದಾರೆ. ಅತೀ ಹೆಚ್ಚು ಬೈದವರಿಗೆ ಮಂತ್ರಿಸ್ಥಾನ ನೀಡಲಾಗುವುದು ಎಂಬ ಆಮಿಷ ಒಡ್ಡಿರಬಹುದು. ಸಚಿವ ಸಂಪುಟ ವಿಸ್ತರಣೆ ನಂತರ ಇವರೆಲ್ಲ ಮನೆ ಸೇರಿಕೊಳ್ಳುತ್ತಾರೆ ಎಂದರು.

ನಿಖಿಲ್ ಲೇಔಟ್ ಮಾಡ್ತೀನಿ ಎಂಬ ಶಾಸಕ ಹೆಚ್.ಸಿ.ಬಾಲಕೃಷ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ನಿಖಿಲ್, ರೈತರಿಗೆ ಬೇಕಿರುವುದು ನೆಮ್ಮದಿಯ ಜೀವನ, ಸ್ವಾಭಿಮಾನದ ಬದುಕು, ಲೇಔಟ್ ಬೇಕಾಗಿರುವುದು ಶಾಸಕರಿಗೆ. ಬಿಡದಿ ಟೌನ್‌ಶಿಪ್ ವಿವಾದ ಕುರಿತು ವಿಧಾನಸೌಧದ ಹವಾನಿಯಂತ್ರಿತ ಕೊಠಡಿಯಲ್ಲಿ ಚರ್ಚೆ ಬೇಡ. ರೈತರಿಗೆ ಅನ್ಯಾಯ ಆಗುತ್ತಿರುವ ಪ್ರದೇಶದಲ್ಲೇ ಚರ್ಚೆಯಾಗಲಿ. ಕುಮಾರಸ್ವಾಮಿ ಜೊತೆ ಯಾವುದೇ ತಂಡ ಇಲ್ಲ. ಮುಖ್ಯಮಂತ್ರಿ ತಮ್ಮ ಪಕ್ಷದ ಕಾರ್ಯಕರ್ತರು ಮತ್ತು ಚೇಲಾಗಳನ್ನು ಕರೆದುಕೊಂಡು ಬಂದು ರೈತರ ಮಧ್ಯೆ ಚರ್ಚೆ ಮಾಡಲಿ, ಸತ್ಯಾಸತ್ಯತೆ ಹೊರಬರಲಿ ಎಂದರು.

ಈ ಮಧ್ಯೆ ತಮ್ಮ ಜಾಲತಾಣ ಖಾತೆಯಲ್ಲಿ ಟ್ವೀಟ್ ಮಾಡಿರುವ ಅನಿತಾ ಕುಮಾರಸ್ವಾಮಿ, ನನ್ನ ಹೆಸರಿನಲ್ಲಿರುವುದು 32 ಎಕರೆ ಜಮೀನು, ಸಚಿವ ಎಂ.ಬಿ. ಪಾಟೀಲ್ ಹೇಳಿರುವಂತೆ 100 ಎಕರೆ ಅಲ್ಲ. ರಾಜಕೀಯ ದುರುದೇಶಕ್ಕಾಗಿ ಮನೆಯವರನ್ನು ಎಳೆದು ತಂದು ಸುಳ್ಳು ಪ್ರಚಾರ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ ಎಂದಿದ್ದಾರೆ.

ವೈಯಕ್ತಿಕ ವಿಚಾರಗಳನ್ನು ಚರ್ಚಿಸುವ ಕೀಳು ಮಟ್ಟಕ್ಕೆ ಯಾರೂ ಹೋಗಬಾರದು. ಅನಗತ್ಯವಾಗಿ ನನ್ನ ಮತ್ತು ನನ್ನ ಕುಟುಂಬದ ಕುರಿತು ಇಲ್ಲಸಲ್ಲದ ಆರೋಪ ಮಾಡಿದರೆ ಕಾನೂನು ಮೂಲಕ ಉತ್ತರ ಕೊಡುತ್ತೇನೆ ಎಂದು ಎಚ್ಚರಿಸಿದ್ದಾರೆ.

ಕೆವಿಸಿ ಆಸ್ಪತ್ರೆಯಲ್ಲಿ ಮಗು ಸಾವು; ಪೋಷಕರಿಂದ ವೈದ್ಯರ ನಿರ್ಲಕ್ಷ್ಯ ಆರೋಪ

ಮೈಸೂರು,ಜೂ.24(ಎಂಕೆ)- ಮೈಸೂರಿನ ಕೆವಿಸಿ ಆಸ್ಪತ್ರೆಯಲ್ಲಿ ಹೆರಿಗೆ ವೇಳೆ ನವಜಾತ ಶಿಶು ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಆರೋಪಿಸಿ ನೊಂದ ಪೋಷಕರು ಮತ್ತು ಕುಟುಂಬಸ್ಥರು ಆಸ್ಪತ್ರೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು.



ಹೆರಿಗೆ ವೇಳೆ ಶಿಶು ಮೃತಪಟ್ಟಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಬುಧವಾರ ಕೆವಿಸಿ ಆಸ್ಪತ್ರೆ ಎದುರು ಕುಟುಂಬದವರು ಪ್ರತಿಭಟನೆ ನಡೆಸಿದರು.

ಹುಣಸೂರು ತಾಲೂಕಿನ ರಾಯನಹಳ್ಳಿ ನಿವಾಸಿ ಕಾವ್ಯ ಎಂಬ ಗರ್ಭಿಣಿ ಮಹಿಳೆಗೆ ಕೂಡಲೇ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಹೇಳಿ 4 ದಿನವಾದರೂ ಶಸ್ತ್ರಚಿಕಿತ್ಸೆ ಮಾಡದೆ ಮಗುವಿನ ಸಾವಿಗೆ ವೈದ್ಯರು ಕಾರಣರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಆಸ್ಪತ್ರೆ ವೈದ್ಯರು, 6 ವರ್ಷದ ಹಿಂದೆ ಮದುವೆಯಾಗಿದ್ದ ಕಾವ್ಯ ಕಳೆದ ಮೂರು ವರ್ಷದಿಂದ ನನ್ನ ಬಳಿ ಚಿಕಿತ್ಸೆ ಪಡೆಯುತ್ತಿದ್ದರು. ಒಂದು ವರ್ಷದ ಹಿಂದೆ ಅವರಿಗೆ ಅವಳಿ ಮಕ್ಕಳು ಜನಿಸಿ ಮೃತಪಟ್ಟಿದ್ದವು. ನಂತರ ಒಂದೆರಡು ವರ್ಷ ಮಕ್ಕಳು ಮಾಡಿಕೊಳ್ಳುವುದು ಬೇಡ ಎಂದು ಸಲಹೆ ನೀಡಿದ್ದೆ. ಆದರೆ, ನಾಲ್ಕೈದು ತಿಂಗಳಲ್ಲಿ ಮತ್ತೆ ಗರ್ಭಿಣಿಯಾದ ಕಾವ್ಯಗೆ ಚಿಕಿತ್ಸೆ ನೀಡುತ್ತಾ ಗಮನಿಸಲಾಗುತ್ತಿತ್ತು. ಕಾವ್ಯಗೆ ಬಿಪಿ ಇದ್ದು, ಅವರ ಕಂಡಿಷನ್ ಕೂಡ ಕ್ರಿಟಿಕಲ್ ಆಗಿತ್ತು. ಮಗುವಿಗೆ ಕರುಳು ಸುತ್ತಿಕೊಂಡಿದ್ದು, ಅದೇ ಅದರ ಸಾವಿಗೆ ಕಾರಣವಾಗಿರಬಹುದು ಎಂದು ಹೇಳಿದ್ದಾರೆ. ಈ ಸಂಬಂಧ ದೂರು ದಾಖಲಾಗಿಲ್ಲ.

ಎನ್.ಭಾಸ್ಕರ್‌ಗೆ ಹುಟ್ಟುಹಬ್ಬದ ಶುಭಾಶಯ...




ಮೈಸೂರಿನ ಸರ್ಕಾರಿ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಕೆಪಿಸಿಸಿ ಸಂಯೋಜಕರೂ ಆದ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರಿಗೆ ಮೈಸೂರು ವಕೀಲ ಮಿತ್ರರು ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಪುಟ್ಟಸ್ವಾಮಿ, ಪುಟ್ಟಸಿದ್ದೇಗೌಡ, ತಿಮ್ಮಯ್ಯ, ಪುಟ್ಟರಸ, ಮಹೇಶ, ಮುದ್ದುಮಾದಪ್ಪ, ಬಸವರಾಜ್, ಚಂದ್ರಶೇಖರ್, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ನಗರಧ್ಯಕ್ಷ ಜೆ.ಪ್ರಭು ಮತ್ತಿತರರು ಉಪಸ್ಥಿತರಿದ್ದರು.

'ಮರೆಯೋದುಂಟೆ ಮೈಸೂರು ದೊರೆಯ' ಗೀತ ಗಾಯನ ಇಂದು

ಮೈಸೂರು, ಜೂ.24(ಎಂಕೆ)-ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಗುರುವಾರ (ಜೂ.25) ಸಂಜೆ 4.30ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣಾರ್ಥ 'ಮರೆಯೋದುಂಟೆ ಮೈಸೂರು ದೊರೆಯ' ಭಾವಗೀತೆ ಮತ್ತು ಭಕ್ತಿಗೀತೆ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಭೈರಿ ಅಧ್ಯಕ್ಷತೆಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಡಿ.ಬಿ.ರಾಜಶೇಖರ ಮೂರ್ತಿ, ಎಂ.ಓಂ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ರಾಷ್ಟ್ರಕವಿ ಕುವೆಂಪು, ದ.ರಾ. ಬೇಂದ್ರೆ, ದೊಡ್ಡರಂಗೇಗೌಡ ರಚನೆಯ ಹಾಗೂ ಎಸ್.ಜಾನಕಿ, ರತ್ನಮಾಲಾ ಪ್ರಕಾಶ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಡಿರುವ 35 ಹಾಡುಗಳನ್ನು ಪ್ರಸ್ತುತಪಡಿಸಲಾಗುತ್ತಿದ್ದು, ಪ್ರವೇಶ ಉಚಿತವಾಗಿದೆ ಎಂದು ತಿಳಿಸಿದರು. ಜಾಯ್ಸ್ ವೈಶಾಕ್, ಬಸವರಾಜು ಎಸ್. ಬೆಳ್ಳಿಕಟ್ಟೆ, ರೇಖಾ ಗೌತಮ್ ಉಪಸ್ಥಿತರಿದ್ದರು.




ಮೈಸೂರಿನ ಜೆ.ಪಿ.ನಗರ ರಿಂಗ್ ರಸ್ತೆಯ ಫೆದರ್ಸ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ತರಬೇತುದಾರರು ಯೋಗಾಸನಗಳನ್ನು ಪ್ರದರ್ಶಿಸಿದರು.

ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಆರ್‌ಸಿಎಸ್‌ಎಸ್ ಮೈಸೂರು ಶಾಖೆಯು, ಎಲ್‌ಕೆಜಿ, ಯುಕೆಜಿ, ಪ್ರಿಸ್ಕೂಲ್ ಹಾಗೂ ಮಾಂಟೆಸರಿ ಶಾಲಾ ಶಿಕ್ಷಕರ ತರಬೇತಿ ತರಗತಿ ಪಡೆಯಲು ಅರ್ಜಿ ಆಹ್ವಾನಿಸಿದೆ. 2026-27ನೇ ಸಾಲಿಗೆ ಅನ್ವಯವಾಗುವ ತರಬೇತಿಯಲ್ಲಿ ನುರಿತ ಅಧ್ಯಾಪಕರಿಂದ ಮಕ್ಕಳ ಮಾನಸಿಕ ಬೆಳವಣಿಗೆಗಳು, ಆಹಾರ, ಪೋಷಕಾಂಶ, ಕ್ರಿಯಾಶೀಲತೆ, ಕಂಪ್ಯೂಟರ್ ಕೌಶಲ್ಯ ಕುರಿತಂತೆ ವಿಶೇಷ ತರಗತಿಗಳಿರುತ್ತವೆ. 18ರಿಂದ 55ರ ವಯೋಮಾನದ ಎಲ್ಲಾ ಆಸಕ್ತರು ಆನ್‌ಲೈನ್ ತರಬೇತಿ ಬಯಸುವವರೂ ಅರ್ಜಿ ಪಡೆಯಬಹುದು. ಮಾಹಿತಿಗೆ 9686855470, 8310396882.

ಶಿವಮೊಗ್ಗ ಜಿಲ್ಲಾ ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

ಶಿವಮೊಗ್ಗ: ಇಲ್ಲಿನ ಜಿಲ್ಲಾ ನ್ಯಾಯಾಲಯಕ್ಕೆ ಇದೇ ಮೊದಲ ಬಾರಿಗೆ ಹುಸಿ ಬಾಂಬ್ ಬೆದರಿಕೆ ಬಂದಿದೆ. ಜಿಲ್ಲಾ ನ್ಯಾಯಾಧೀಶರ ಇಮೇಲ್ ಖಾತೆಗೆ ಬೆದರಿಕೆ ಸಂದೇಶ ಕಳುಹಿಸಲಾಗಿದೆ. ನ್ಯಾಯಾಲಯದ ಸಂಕೀರ್ಣದಲ್ಲಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳ ತಪಾಸಣೆ ನಡೆಸಿತು.



ನಸುಕಿನ ಜಾವ 1:37ಕ್ಕೆ ನ್ಯಾಯಾಧೀಶರ ಇಮೇಲ್‌ಗೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಮಧ್ಯಾಹ್ನ 2:30ಕ್ಕೆ ಸ್ಫೋಟ ಆಗಲಿದೆ ಎಂದು ಬರೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರ ಕಚೇರಿಯಿಂದ ಪೊಲೀಸರಿಗೆ ದೂರು ನೀಡಲಾಗಿತ್ತು. ತಕ್ಷಣ ಪೊಲೀಸರು ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದೊಂದಿಗೆ ಆಗಮಿಸಿ ನ್ಯಾಯಾಲಯದ ಆವರಣದಲ್ಲಿ ಶೋಧ ಕಾರ್ಯಾಚರಣೆ ನಡೆಸಿದರು. ಸ್ಟೋರ್ ರೂಂಗಳು, ನ್ಯಾಯಾಲಯದ ಕೊಠಡಿ, ವಕೀಲರ ಭವನ, ಪಾರ್ಕಿಂಗ್ ಸ್ಥಳಗಳೂ ಸೇರಿದಂತೆ ವಿವಿಧೆಡೆ ತಪಾಸಣೆ ನಡೆಸಲಾಯಿತು. ಬಾಂಬ್ ತಪಾಸಣೆ ನಡೆಸಿದ ನಂತರ ಕೊಠಡಿಗಳಿಗೆ ಬೀಗ ಹಾಕಲಾಯಿತು. ಮುಖ್ಯ ನ್ಯಾಯಾಧೀಶರಾದ ಮಂಜುನಾಥ್ ಪ್ರತಿಕ್ರಿಯಿಸಿ, ಕಳೆದೊಂದು ವಾರದ ಹಿಂದೆ ಕೋಲಾರದಲ್ಲಿ ಇದೇ ರೀತಿ ಘಟನೆ ನಡೆದಿತ್ತು. ಇದರ ಹಿಂದಿನ ಉದ್ದೇಶ ಏನೂ ಅಂತ ಗೊತ್ತಾಗುತ್ತಿಲ್ಲ. ಈ ಹಿಂದೆ ತಮಿಳುನಾಡಿನ ಪೊಲೀಸ್ ಠಾಣೆಯಲ್ಲಿ ನಡೆದ ಒಂದು ಕೊಲೆ ಪ್ರಕರಣ ಸಂಬಂಧ ಪ್ರಸ್ತಾಪಿಸಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬರೆಯಲಾಗಿದೆ. ಈ ಬಗ್ಗೆ ನ್ಯಾಯಾಲಯದಿಂದ ಎಸ್‌ಪಿಗೆ ಪತ್ರ ಬರೆಯಲಾಗಿದೆ. ಕೋಲಾರ ಹಾಗೂ ಧಾರವಾಡದಲ್ಲೂ 3 ದಿನಗಳ ಕೆಳಗೆ ಬಾಂಬ್ ಬೆದರಿಕೆ ಕರೆ ಬಂದಿತ್ತು. ಕಳೆದ 2 ತಿಂಗಳಿನಿಂದ ವಿನಾಕಾರಣ ಟಾರ್ಗೆಟ್ ಮಾಡಿ ಬೆದರಿಕೆ ಇಮೇಲ್ ಮಾಡಲಾಗುತ್ತಿದೆ. ಸೈಬರ್ ಇಲಾಖಾ ಸಿಬ್ಬಂದಿ ಆಗಮಿಸಿದ್ದು ಶೋಧ ಕಾರ್ಯ ಮಾಡುತ್ತಿದ್ದಾರೆ. ಇದನ್ನು ನೋಡಿದ್ರೆ ನಕಲಿ ಇಮೇಲ್ ಅನ್ನಿಸುತ್ತದೆ ಎಂದರು.

133 ಜನೌಷಧಿ ಕೇಂದ್ರಗಳಿಗೆ ನೋಟಿಸ್

ಬೆಂಗಳೂರು: ರಾಜ್ಯ ಸರ್ಕಾರ, 133 ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳಿಗೆ ಶೋಕಾಸ್ ನೋಟಿಸ್ ನೀಡಿದೆ.


ಬ್ರ್ಯಾಂಡೆಡ್ ಔಷಧಿ ಮಾರಾಟ ಮಾಡುತ್ತಿದ್ದಾರೆ ಎಂದು ರಾಜ್ಯದ ಔಷಧ ನಿಯಂತ್ರಣ ಇಲಾಖೆ ಕಳೆದ 2 ದಿನಗಳಲ್ಲಿ 172 ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳ ಮೇಲೆ ದಾಳಿ ಮಾಡಿದ್ದು, ಇದೀಗ 133 ಜನೌಷಧಿ ಕೇಂದ್ರಗಳಿಗೆ ಶೋಕಾಸ್ ನೋಟಿಸ್ ಹೊರಡಿಸಿದೆ. ರಾಜ್ಯದಲ್ಲಿ 1200ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳು ಇವೆ. ಇದರಲ್ಲಿ 172ರ ಔಷಧಿ ಕೇಂದ್ರಗಳ ಮೇಲೆ ದಾಳಿ ನಡೆಸಿದ್ದು, ಈ ಪೈಕಿ 133 ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧಿ ಮಾರಾಟ ಆಗಿರುವುದು ಬೆಳಕಿಗೆ ಬಂದಿದೆ. ಇನ್ನೂ ಉಳಿದ ಜನೌಷಧಿ ಕೇಂದ್ರಗಳನ್ನ ಪರಿಶೀಲನೆ ಮಾಡಲಿದ್ದಾರೆ. ಸದ್ಯ ಜನೌಷಧಿ ಮಾಲೀಕರು ಶೋಕಾಸ್ ನೋಟಿಸ್‌ಗೆ ಉತ್ತರವನ್ನ ಕೊಡಬೇಕು. ಯಾಕೆ ಬ್ರ್ಯಾಂಡೆಡ್ ಮಾರಾಟ ಮಾಡುತ್ತಿದ್ದೀರಾ ಎಂದು ಉತ್ತರ ಕೊಡಬೇಕು. ಇಲ್ಲದೇ ಹೋದರೆ ಕಾನೂನು ರೀತಿಯ ಕ್ರಮ ಜರುಗಿಸುವುದಕ್ಕೆ ರಾಜ್ಯ ಔಷಧ ನಿಯಂತ್ರಣ ಇಲಾಖೆ ಮುಂದಾಗಿದೆ.

ಶ್ರೀ ವೀರಾಂಜನೇಯಸ್ವಾಮಿ ದೇವಾಲಯದ ಗರುಡಗಂಭ ಪ್ರತಿಷ್ಠಾಪನಾ ಕಾರ್ಯಕ್ರಮ

ಮೈಸೂರು, ಜೂ.24(ಎಂಕೆ)- ಮೈಸೂರಿನ ಬನ್ನಿಮಂಟಪ 'ಸಿ' ಬಡಾವಣೆ, ಹನುಮಂತನಗರದಲ್ಲಿರುವ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಜೂ.26 ರಂದು 'ಗರುಡಗಂಭ(ದೀಪಸ್ತಂಭ)' ಪ್ರತಿಷ್ಠಾಪನಾ ಕಾರ್ಯಕ್ರಮ ನೆರವೇರಲಿದೆ. ಅಂದು ಸಂಜೆ 6 ಗಂಟೆಯಿಂದ ರಾತ್ರಿ 8.30ರವರೆಗೆ ಅಜುಜ್ಞೆ 1, ವಿಶ್ವಕ್ಸೇನ ಹಾಗೂ ಮಹಾಗಣಪತಿ ಪೂಜೆ, ಭಗವದ್ ವಾಸುದೇವ, ಪುಣ್ಯಾವಾಚನ, ಕಳಸಾರಾಧನೆ, ಲಘು ಪೂರ್ಣಾವತಿ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳ ನಂತರ ತೀರ್ಥ ಪ್ರಸಾದ ವಿನಿಯೋಗವಿರಲಿದೆ. ಜೂ.27 ರಂದು ಬೆಳಗ್ಗೆ 6.30ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಂಚಗವ್ಯ ಸ್ಥಾಪನೆ, ಕಳಸಾರಾಧನೆ, ನ್ಯಾಸಹೋಮ, ಪೂರ್ಣಾವತಿ, ಗರುಡಗಂಭ ಪ್ರತಿಷ್ಠಾಪನೆ ವಿಧಿಗಳು ನೆರವೇರಲಿದೆ ಎಂದು ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಎಂ.ಬಿ.ಮಂಜುನಾಥ್, ಕಾರ್ಯದರ್ಶಿ ಹೆಚ್.ಎನ್. ಶ್ರೀನಿವಾಸ್(ಸುರೇಶ್), ಹಾಗೂ ಖಜಾಂಚಿ ಕೆ.ಬಿ.ಕಾಳೇಗೌಡರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿ ಅಧಿಕಾರಿ ಹುದ್ದೆ ಶಾಸನಬದ್ಧವಾಗಿದ್ದು, ನಿರ್ಲಕ್ಷ್ಯ ವಹಿಸಲು ಸಾಧ್ಯವಿಲ್ಲ: ಹೈಕೋರ್ಟ್

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಮೊದಲ ಮೇಲ್ಮನವಿ ಪ್ರಾಧಿಕಾರದ ಹುದ್ದೆಯು ಕೇವಲ ವೈಯಕ್ತಿಕ ಹುದ್ದೆಯಲ್ಲ, ಅದೊಂದು ಶಾಸನಬದ್ಧ ಅಧಿಕಾರವಾಗಿದೆ. ಹೊಸದಾಗಿ ಅಧಿಕಾರ ವಹಿಸಿಕೊಳ್ಳುವ ಅಧಿಕಾರಿಗಳಿಗೆ ತಕ್ಷಣದಿಂದಲೇ ಬಾಕಿ ಉಳಿದಿರುವ ಜವಾಬ್ದಾರಿಗಳು ಸೇರುತ್ತವೆ ಎಂದು ಹೈಕೋರ್ಟ್ ಹೇಳಿದೆ.



ತನ್ನ ಹುದ್ದೆಯಲ್ಲಿ ಈ ಹಿಂದೆ ಇದ್ದ ಅಧಿಕಾರಿಗಳು ನಿರ್ಲಕ್ಷ್ಯತನ ವಹಿಸಿದ್ದಾರೆ ಎಂಬ ಕಾರಣ ನೀಡಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಅವಕಾಶವಿಲ್ಲ ಎಂದು ತಿಳಿಸಿದೆ.

ಮಾಹಿತಿ ಆಯೋಗ 25ಸಾವಿರ ರೂ.ಗಳ ದಂಡ ವಿಧಿಸಿದ್ದ ಕ್ರಮವನ್ನು ಪ್ರಶ್ನಿಸಿ ಬಿಡಿಎ ಕಾರ್ಯದರ್ಶಿ ಸಿ.ಎಲ್. ಶಿವಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಅರ್ಜಿದಾರರಿಗೆ ರಾಜ್ಯ ಮಾಹಿತಿ ಆಯೋಗ ವಿಧಿಸಿದ್ದ 25000 ದಂಡದ ಆದೇಶವನ್ನು ಎತ್ತಿಹಿಡಿದು, ಅರ್ಜಿಯನ್ನು ವಜಾಗೊಳಿಸಿದೆ.

ಅಲ್ಲದೆ, ಅಧಿಕಾರಿಗಳು ತಮ್ಮ ಹುದ್ದೆಯಿಂದ ವರ್ಗಾವಣೆ ನೆಪವೊಡ್ಡಿ ತನ್ನ ಶಾಸನಬದ್ಧ ಕರ್ತವ್ಯಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡುತ್ತಾ ಹೋದರೆ ಆಡಳಿತಾತ್ಮಕ ವಿಚಾರಗಳಲ್ಲಿ ವಿಳಂಬ ಮತ್ತು ಏರುಪೇರಾಗುವಂತಾಗಲಿದೆ. ಹಿಂದಿನ ಅಧಿಕಾರಿಗಳ ಅವಧಿಯಲ್ಲಿ ಆರಂಭವಾದ ಕಾರಣಕ್ಕೆ ಹೊಸದಾಗಿ ಬಂದ ಸಾರ್ವಜನಿಕ ಅಧಿಕಾರಿ ಪ್ರಕರಣವನ್ನು ನಿರ್ಲಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಜತೆಗೆ, ಇದು ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾಗಿರಲಿದೆ ಎಂದು ಪೀಠ ಹೇಳಿದೆ.

ಅರ್ಜಿದಾರ ಅಧಿಕಾರಿಯು ಕಾರ್ಯದರ್ಶಿ ಹುದ್ದೆಯ ಅಧಿಕಾರ ವಹಿಸಿಕೊಂಡ ನಂತರ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಶ್ರದ್ಧೆ ಹೊಂದಿದ್ದರೆ ತಕ್ಷಣ ಕ್ರಮಕ್ಕೆ ಮುಂದಾಗಬೇಕಾಗಿತ್ತು. ಇಲ್ಲವೇ ಮಾಹಿತಿ ಆಯೋಗದಿಂದ ನೋಟಿಸ್ ಜಾರಿಯಾದ ಬಳಿಕ ಕಾರ್ಯಪ್ರವೃತ್ತರಾಗಿ ಮಾಹಿತಿ ಒದಗಿಸಲು ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಬಹುದಾಗಿತ್ತು. ಆದರೆ, ಮಾಹಿತಿ ಆಯೋಗ ದಂಡ ವಿಧಿಸಿದ 2 ತಿಂಗಳ ಬಳಿಕ ಅಧೀನ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ, ಮಾಹಿತಿ ಆಯೋಗದಿಂದ ಮೂರು ಬಾರಿ ವಿಚಾರಣೆ ನಡೆದರೂ ಬಿಡಿಎ ಪರವಾಗಿ ಯಾರೂ ಹಾಜರಿರಲಿಲ್ಲ. ಈ ನಡೆ ಕೇವಲ ಹಿಂದಿನ ಅಧಿಕಾರಿಗಳ ತಪ್ಪಲ್ಲ, ಬದಲಿಗೆ ಹಾಲಿ ಅಧಿಕಾರಿಯ ಅವಧಿಯಲ್ಲೂ ಮುಂದುವರೆದಿರುವ ಗಂಭೀರ ಕರ್ತವ್ಯ ಲೋಪ ಮತ್ತು ಕಾಯ್ದೆಯ ಉದ್ದೇಶವನ್ನು ದುರ್ಬಲಗೊಳಿಸಿದಂತಾಗಲಿದೆ. ಇಂತಹ ಕೃತ್ಯವನ್ನು ಹಗುರವಾಗಿ ಪರಿಗಣಿಸುವುದಕ್ಕೆ ಅವಕಾಶವಿಲ್ಲ ಎಂದು ಪೀಠ ತಿಳಿಸಿದೆ.

ಕಾರ್ಯಾಗಾರ

ಮೈಸೂರು,ಜೂ.24- ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜವಳಿ ರಫ್ತುದಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಜು.3ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ಜಿಪಂ ಕಚೇರಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ರಫ್ತು ಉದ್ಯಮ ದಲ್ಲಿ ಆಸಕ್ತಿ ಹೊಂದಿರುವ ಉದ್ದಿಮೆ ದಾರರು ಕಾರ್ಯಾಗಾರದಲ್ಲಿ ಭಾಗ ವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 11 ಕೆ.ವಿ. ಚಂದ್ರಮೌಳೇಶ್ವರ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಜೂ.25 ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಾಳಿದಾಸ ರಸ್ತೆ, ದೇವಸ್ಥಾನ ರಸ್ತೆ, ವಿ.ವಿಮೊಹಲ್ಲಾ 4ನೇ ಹಂತ, ಆದಿ ಪಂಪಾ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಗೃಹಲಕ್ಷ್ಮಿ ರಾಜ್ಯದ ಇತಿಹಾಸದಲ್ಲೇ ಬಹು ದೊಡ್ಡ ಹಗರಣ


ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ

- ಬ್ಯಾಂಕ್ ಖಾತೆಯೇ ಇಲ್ಲದ 23262 ಜನರಿಗೆ 46.52 ಕೋಟಿ; 19020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ: ಸಿಎಜಿ ವರದಿ ಬಹಿರಂಗ

ಬೆಂಗಳೂರು,ಜೂ.24(ಕೆಎಂಶಿ)-ಕಾಂಗ್ರೆಸ್ ನೇತೃತ್ವದ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹಗರಣವಾಗಿ ಮಾರ್ಪಟ್ಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ ಬರೋಬ್ಬರಿ 46.52 ಕೋಟಿ ರೂ. ಪಾವತಿಯಾಗಿರುವುದು ಮತ್ತು 19,020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದನ್ನು ಸಿಎಜಿ ವರದಿ ಬಹಿರಂಗ ಪಡಿಸಿದೆ.

10 ಲಕ್ಷಕ್ಕೂ ಅಧಿಕ ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ರಾಜ್ಯದ ಬಡ ಮಹಿಳೆಯರ ಹೆಸರಿನಲ್ಲಿ ನಡೆಯುತ್ತಿರುವ ಭಾರೀ ಲೂಟಿಗೆ ಸಾಕ್ಷಿಯಲ್ಲವೇ ಎಂದು ಪ್ರಶ್ನಿಸಿದ್ದಾರೆ.



ಸಾರ್ವಜನಿಕರ ತೆರಿಗೆ ಹಣವನ್ನು ವ್ಯವಸ್ಥಿತವಾಗಿ ನುಂಗಿದ ಭ್ರಷ್ಟಾಚಾರದ ಹಿಂದೆ ಯಾರ ಕೈವಾಡವಿದೆ. ಸ್ವತಃ ಸಿಎಜಿ ಕೇಳಿದರೂ ಬ್ಯಾಂಕ್ ಖಾತೆಗಳ ವಿವರ ನೀಡದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಚ್ಚಿಡುತ್ತಿರುವುದಕ್ಕೆ ಕಾರಣ ಏನು.

ಇದರಿಂದ ಭ್ರಷ್ಟಾಚಾರದ ಬೇರುಗಳು ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಬಹಳ ಗಾಢವಾಗಿ ಹರಡಿಕೊಂಡಿರುವ ಸಂಶಯ ಮತ್ತಷ್ಟು ಬಲಗೊಳ್ಳುತ್ತದೆ.

ಬಡವರ ಹೆಸರಿನಲ್ಲಿ ಕೋಟ್ಯಾಂತರ ರೂ. ಲೂಟಿ ಹೊಡೆದಿರುವ ಗಂಭೀರ ಭ್ರಷ್ಟಾಚಾರ ಹಗರಣದ ಪಾರದರ್ಶಕ ಹಾಗೂ ಉನ್ನತ ಮಟ್ಟದ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲೇ ಬೇಕು ಎಂದಿದ್ದಾರೆ.

ಸರ್ಕಾರಿ ಯೋಜನೆಗಳ ಹೆಸರಿನಲ್ಲಿ ಕೋಟ್ಯಾಂತರ ರೂ. ಲೂಟಿ ಆಗುತ್ತಿರುವುದು, 'ಗ್ಯಾರಂಟಿ ಅನುಷ್ಠಾನ ಸಮಿತಿ'ಗಳು ಎಷ್ಟು ಅಪ್ರಸ್ತುತ ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಹಂಚುವ ನೆಪದಲ್ಲಿ ಸಾರ್ವಜನಿಕರ ತೆರಿಗೆ ಹಣ ಲೂಟಿ ಮಾಡಿ, ಮೋಜು ಮಾಡುವ ಗಂಜಿ ಕೇಂದ್ರಗಳಾಗಿವೆ ಎಂಬುದು ಇದರಿಂದ ಸಾಬೀತಾಗಿದೆ.

ಜನರ ತೆರಿಗೆ ಹಣದಲ್ಲಿ ಕಾರು, ಬಂಗಲೆ, ವೇತನ ಪಡೆದು ಐಷಾರಾಮಿ ಜೀವನ ನಡೆಸುತ್ತಿರುವ ಗ್ಯಾರಂಟಿ ಅನುಷ್ಠಾನ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರು, ಹಣ ಲೂಟಿಯ ಬೃಹತ್ ಹಗರಣ ನಡೆಯುವಾಗ ಕಣ್ಣುಮುಚ್ಚಿ ಕುಳಿತಿದ್ದರೇ ಅಥವಾ ಅವರಿಗೆ ತಿಳಿದೇ ಭ್ರಷ್ಟಾಚಾರ ನಡೆಯುತ್ತಿದೆಯೇ.

ಇದು ಭ್ರಷ್ಟ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಮಾತ್ರವಲ್ಲ, ಗ್ಯಾರಂಟಿ ಗಳ ಹೆಸರಿನಲ್ಲಿ ಸ್ವಪಕ್ಷದವರ ಜೇಬು ತುಂಬಿಸಲು ಮತ್ತು ಸಾರ್ವಜನಿಕ ಖಜಾನೆಯನ್ನು ಯೋಜಿತ ರೀತಿಯಲ್ಲಿ ಲೂಟಿ ಹೊಡೆಯುವ ಹುನ್ನಾರವಾಗಿದೆ.

ಒಂದೆಡೆ ಖಾತೆ ಇಲ್ಲದವರಿಗೆ ಹಣ ಲೂಟಿಯಾಗುತ್ತಿದ್ದರೆ, ಇನ್ನೊಂದೆಡೆ ಕೋಟ್ಯಾಂತರ ಅರ್ಹ ತಾಯಂದಿರಿಗೆ ನೀಡಬೇಕಿದ್ದ 2025ರ ಫೆಬ್ರವರಿ-ಮಾರ್ಚ್‌ನ ಬರೋಬ್ಬರಿ 5,000 ಕೋಟಿ ರೂ. ಫಲಾನುಭವಿಗಳಿಗೆ ತಲುಪದೆ ನಾಪತ್ತೆಯಾಗಿದ್ದು. ಕಾಂಗ್ರೆಸ್ ಸರ್ಕಾರ ಇದುವರೆಗೂ ಇದಕ್ಕೆ ಉತ್ತರ ನೀಡಿಲ್ಲ ಎಂದು ಟೀಕಿಸಿದ್ದಾರೆ.

572 ವಿಎ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ; ಶೀಘ್ರ ಅಧಿಸೂಚನೆ ಸಾಧ್ಯತೆ

ಬೆಂಗಳೂರು: ರಾಜ್ಯದ 22 ಜಿಲ್ಲೆಗಳ 572 ಗ್ರಾಮ ಆಡಳಿತ ಅಧಿಕಾರಿಗಳ (ವಿಎ) ನೇರ ನೇಮಕಕ್ಕೆ ಆರ್ಥಿಕ ಇಲಾಖೆ ಅನುಮೋದನೆ ನೀಡಲಾಗಿದ್ದು, ಈ ಸಂಬಂಧ ಕಂದಾಯ ಇಲಾಖೆಯು ಹುದ್ದೆ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದೆ.

ಮೈಸೂರು(45 ಹುದ್ದೆ), ಮಂಡ್ಯ(50), ಹಾಸನ(35), ಚಾಮರಾಜನಗರ(31), ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ತುಮಕೂರು, ಶಿವಮೊಗ್ಗ, ಕೋಲಾರ, ಬೆಂಗಳೂರು ದಕ್ಷಿಣ(ರಾಮನಗರ), ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ, ಕಲಬುರಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಹುದ್ದೆಗಳ ನೇಮಕಕ್ಕೆ ನಿರ್ಧರಿಸಲಾಗಿದೆ.

ನೇರ ನೇಮಕಾತಿ ಕೋಟಾದಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅನುಸರಿಸಬೇಕಾದ ಪರಿಷ್ಕೃತ ರೋಸ್ಟರ್ ಬಿಂದು ಮೀಸಲಾತಿ ವಿವರಗಳನ್ನು ಮರು ನಿಗಧಿಪಡಿಸಲಾಗಿದೆ. ಆದ್ದರಿಂದ, ಈ ಎಲ್ಲಾ ಅಂಶಗಳನ್ನು ಪರಿ ಗಣಿಸಿ ಆಯಾ ಜಿಲ್ಲೆಗಳಿಗೆ ಪ್ರಸ್ತುತ ಭರ್ತಿ ಮಾಡಲು ತಿಳಿಸಿರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳಿಗೆ ಪತ್ರದಲ್ಲಿ ಸೂಚನೆ ನೀಡಿದ್ದು ಶೀಘ್ರ ದಲ್ಲಿಯೇ ನೇಮಕಾತಿಗೆ ಅಧಿಸೂಚನೆ ಹೊರಬೀಳಲಿದೆ.

ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್

ಮಂಡ್ಯ, ಜೂ.24– ಮಾದಕ ವಸ್ತುಗಳನ್ನು ಸೇವಿಸುವುದರಿಂದ ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಯುವಜನತೆ ಉತ್ತಮ ಆರೋಗ್ಯ ಪಡೆಯಲು ಗಮನ ಹರಿಸಬೇಕು. ಮಾದಕ ವಸ್ತು ಹಾಗೂ ಡ್ರಗ್ಸ್ ಸೇವನೆಯಿಂದ ಆಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಆನಂದ್ ತಿಳಿಸಿದರು.

ನಗರದ ಸಿಹಿ ನೀರು ಕೊಳ, ಆರ್.ಜಿ. ವ್ಯಸನಿಗಳ ಪುನಶ್ಚೇತನಾ ಕೇಂದ್ರದಲ್ಲಿ ನಡೆದ ಧ್ವನಿ ಗ್ರಾಮೀಣಾಭಿವೃದ್ಧಿ ಆರ್.ಜಿ. ವ್ಯಸನಿಗಳ ಸಮಗ್ರ ಪುನಶ್ಚೇತನ ಕೇಂದ್ರ ಮಂಡ್ಯ ವತಿಯಿಂದ ನಶಾ ಮುಕ್ತ ಭಾರತ ಅಭಿಯಾನ–2026 ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮದ್ಯ ಹಾಗೂ ಡ್ರಗ್ಸ್ ವ್ಯಸನಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಳೆದ 23 ವರ್ಷಗಳಿಂದ ನಶಾ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮ ನಡೆಸಲಾಗುತ್ತಿದೆ. ಕ್ಷಣಿಕ ಸುಖ ಬಯಸಿ ಮಾದಕ ವಸ್ತುಗಳ ಸೇವಿಸುವುದರಿಂದ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಯುವಕರು ಹೆಚ್ಚು ಹೆಚ್ಚು ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ಹೀಗಾಗಿ ಆರೋಗ್ಯದ ಮೇಲೆ ಹೆಚ್ಚು ಕಾಳಜಿ ವಹಿಸಬೇಕು. ಯುವಜನತೆಯಿಂದ ಮಾತ್ರ ದೇಶ ಅಭಿವೃದ್ಧಿಯಾಗಲು ಸಾಧ್ಯ. ಯುವ ಜನತೆ ದುಶ್ಚಟಗಳಿಂದ ದೂರವಿದ್ದಾಗ ಮಾತ್ರ ದೇಶವನ್ನು ನಶಾ ಹಾಗೂ ಡ್ರಗ್ಸ್ ಮುಕ್ತ ಭಾರತ ಸೃಷ್ಟಿಸಲು ಸಾಧ್ಯವಾಗುತ್ತದೆ ಎಂದರು. ಯುವಕರು ಮಾದಕ ವಸ್ತು ಸೇವನೆ ತ್ಯಜಿಸುವ ಸಂಕಲ್ಪ ಮಾಡಿದರೆ ಮಾತ್ರ ತಮ್ಮ ಕುಟುಂಬವನ್ನು ಸದೃಢವಾಗಿಡಲು ಸಾಧ್ಯವಾಗುತ್ತದೆ ಎಂದರು.

ನಶಾ ಮುಕ್ತ ಭಾರತ ನಿರ್ಮಾಣದಲ್ಲಿ ಮಾಧ್ಯಮದವರ ಪಾತ್ರವೂ ಪ್ರಮುಖ. ಮಾದಕ ವಸ್ತು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪ್ರಚಾರ ಮಾಡುವುದರಿಂದ ಮಾದಕವಸ್ತು ಸೇವನೆ ತಡೆಗಟ್ಟಲು ಸಾಧ್ಯ ಎಂದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ಕೆ.ನಾಗಣ್ಣಗೌಡ ಮಾತನಾಡಿ, ಯುವಕರು ದೇಶದ ಆಸ್ತಿ, ಆದರೆ ಯುವಜನತೆ ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಯುವಜನರು ಮಾದಕ ವಸ್ತು ಸೇವನೆ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಜೂ.26 ರಂದು ವಿಶ್ವ ಮಾದಕ ವಸ್ತುಗಳ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. ಯುವ ಜನತೆ ದುಶ್ಚಟಗಳಿಂದ ದೂರ ಇದ್ದು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್ ಎಂ.ಸಿ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಕಲ್ಯಾಣ ಅಧಿಕಾರಿ ಕೋಮಲ್ ಕುಮಾರ್, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮನೋರೋಗ ತಜ್ಞ ಡಾ.ಹೆಚ್.ಎ.ಶಶಾಂಕ್ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ.ಮಹಮ್ಮದ್ ಸುಹೇಲ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಡಿಹೆಚ್ಇ ಕೀರ್ತಿ ಜಿಲ್ಲಾ ಸಹ ಸಲಹೆಗಾರ ತಿಮ್ಮರಾಜು, ಶಂಕರ ನಗರ ಬಿಎಲ್‌ಎಸ್ ನರ್ಸಿಂಗ್ ಕಾಲೇಜು ಪುಣ್ಯಶ್ರೀ ಉಪಸ್ಥಿತರಿದ್ದರು.



ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್ ಉದ್ಘಾಟಿಸಿದರು.

ಕೆರೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಚಾಲನೆ

ಭಾರತೀನಗರ, ಜೂ.24– ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ನೀರಾವರಿ ಇಲಾಖೆಯಿಂದ ಹೆಚ್ಚಿನ ಅನುದಾನ ತಂದು ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದೇನೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಇಲ್ಲಿಗೆ ಸಮೀಪದ ಚಂದೂಪುರ ಗ್ರಾಮದ ಬಳಿಯ ಮಾಚಟ್ಟ ವೀರಪ್ಪ ದೇವಸ್ಥಾನದ ಅಗಸರಹಳ್ಳದಲ್ಲಿ 1.70 ಕೋಟಿ ವೆಚ್ಚದ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನೀರಾವರಿ ಇಲಾಖೆ ಮೂಲಕ ಕೆರೆ, ಕಟ್ಟೆ ಹಾಗೂ ಗದ್ದೆಬಯಲು ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿಸಲಾಗುತ್ತಿದೆ. ರೈತರು ಕಾಮಗಾರಿ ಗುಣಮಟ್ಟದಿಂದ ನಡೆಯುವಂತೆ ಗಮನಹರಿಸಬೇಕು ಎಂದು ತಿಳಿಸಿದರು.

ಗ್ರಾಮಗಳಲ್ಲಿ ಒಗ್ಗಟ್ಟು ಇದ್ದಾಗ ಮಾತ್ರ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಗುತ್ತದೆ. ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರು.

ನಾನು ಶಾಸಕನಾಗುವ ಮೊದಲೇ ಉದಯ್ ಚಾರಿಟಬಲ್ ಟ್ರಸ್ಟ್ ಮೂಲಕ ಪ್ರತಿಯೊಂದು ಗ್ರಾಮದಲ್ಲೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೆ, ಮುಂದಿನ ದಿನಗಳಲ್ಲಿಯೂ ನನ್ನ ಕೈಲಾದ ಸೇವೆ ಮುಂದುವರಿಸುತ್ತೇನೆ ಎಂದರು.

ಈ ವೇಳೆ ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಜಪಂ ಮಾಜಿ ಅಧ್ಯಕ್ಷ ಬಿ.ಬಸವರಾಜು, ಮಾಜಿ ಸದಸ್ಯ ಎ.ಎಸ್. ರಾಜೀವ್, ಗುತ್ತಿಗೆದಾರ ಕೆಂಪೇಗೌಡ, ಮುಖಂಡರಾದ ಎಲ್‌ಐಸಿ ಕೆಂಪೇಗೌಡ, ಹೆಚ್.ಕೆ.ಶಿವಣ್ಣ, ಹೆಚ್.ಸಿ.ಸಂತೋಷ್, ಹೆಚ್.ಕೆ.ಮಹೇಶ್, ಹೆಚ್.ಜೆ.ರವಿರಾಜ್, ಕಿರಣ್, ಗುತ್ತಿಗೆದಾರ ವಿಶ್ವ, ಪ್ರಸನ್ನ, ಪುಟ್ಟೇಗೌಡ, ರವಿ, ದೇವರಾಜು, ನಂದೀಶ್ ಸೇರಿದಂತೆ ಹಲವರಿದ್ದರು.



ಕೆರೆ ತಡೆಗೋಡೆ ಕಾಮಗಾರಿಗೆ ಶಾಸಕ ಕೆ.ಎಂ.ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಜೂ.27, ಡಾ.ಭೀಮ್‌ರಾವ್ ಮಂಡ್ಯ ಪ್ರವಾಸ

ಮಂಡ್ಯ, ಜೂ.24– ಭಾರತೀಯ ಬೌದ್ಧ ಮಹಾಸಭಾ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಭೀಮ್‌ರಾವ್ ಯಶವಂತರಾವ್ ಅಂಬೇಡ್ಕರ್ ಅವರು ಜೂ.27ರಂದು ಮಂಡ್ಯ ಪ್ರವಾಸ ಕೈಗೊಂಡಿದ್ದಾರೆ ಎಂದು ಭಾರತೀಯ ಬೌದ್ಧ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎಂ.ಸಿ.ಶಿವರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಭೀಮ್‌ರಾವ್ ಯಶವಂತ ರಾವ್ ಅಂಬೇಡ್ಕರ್ ಅವರು ಜೂ.27 ಮತ್ತು 28ರಂದು ರಾಜ್ಯ ಪ್ರವಾಸ ಕೈಗೊಂಡಿದ್ದು, ಅಂದು ಬೆಳಗ್ಗೆ ಬೆಂಗಳೂರಿನಿಂದ ಮಂಡ್ಯ ನಗರಕ್ಕೆ ಆಗಮಿಸಲಿದ್ದಾರೆ ಎಂದರು.


ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮ ತಡೆಯಲು ಅಭಿಯಾನ ಅಗತ್ಯ: ಡಾ.ಕುಮಾರ

ಮಂಡ್ಯ, ಜೂ.24– ಮಾದಕ ವಸ್ತುಗಳ ಸೇವನೆಗೆ ಒಮ್ಮೆ ಒಳಗಾದರೆ ಅದರಿಂದ ಹೊರ ಬರುವುದು ಕಷ್ಟ. ಮಾನವನ ಆರೋಗ್ಯದ ಮೇಲೆ ಮಾದಕ ವಸ್ತುಗಳು ದುಷ್ಪರಿಣಾಮ ಬೀರಲಿವೆ. ಉತ್ತಮ ಆರೋಗ್ಯ ಪಡೆಯುವ ಹಾಗೂ ಡ್ರಗ್ ಮುಕ್ತ ಜಿಲ್ಲೆಯಾಗಿ ಮಾಡುವ ನಿಟ್ಟಿನಲ್ಲಿ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮ ಕುರಿತು ಶಾಲಾ ಮಕ್ಕಳಲ್ಲಿ ಮಾದಕವಸ್ತು ಸೇವನೆ ಮಾಡುವ ಪೋಷಕರಿಗೆ ಪತ್ರ ಅಭಿಯಾನ ಮೂಲಕ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶ್ರೀರಂಗಪಟ್ಟಣದ ಗಂಜಾಂನಲ್ಲಿ ಅಪ್ರಾಪ್ತ ಯುವಕರು ಮಾದಕ ವಸ್ತು ಸೇವನೆ ಮಾಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾದ ಹಿನ್ನೆಲೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ (ಗಾಂಜಾ) ಮಾದಕ ವಸ್ತು ಸೇವನೆಗೆ ಸಂಬಂಧಪಟ್ಟ ಪ್ರಕರಣಗಳ ವಿವರಗಳನ್ನು ನೀಡಬೇಕು ಎಂದು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಅರಣ್ಯ ಹಾಗೂ ಕೃಷಿ ಭೂಮಿಗಳಲ್ಲಿ ಗಾಂಜಾ ಬೆಳೆಯುತ್ತಿರುವ ಬಗ್ಗೆ ಮಾಹಿತಿ ಇದ್ದು, ಅಧಿಕಾರಿಗಳು ಅರಣ್ಯ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಗಾಂಜಾ ಬೆಳೆಯುವ ಪ್ರದೇಶಗಳನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮಾದಕ ವಸ್ತುಗಳ ಸೇವನೆಯಿಂದ ದುಷ್ಪರಿಣಾಮ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಎಂ.ಆನಂದ್ ಮಾತನಾಡಿದರು. ಈ ವೇಳೆ ಸಭೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಲೋಕೇಶ್ ಸೇರಿದಂತೆ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.



ಸಭೆಯಲ್ಲಿ ಡಿಸಿ ಡಾ.ಕುಮಾರ್ ಮಾತನಾಡಿದರು.

ಅರ್ಜಿ ಆಹ್ವಾನ

ಮಂಡ್ಯ, ಜೂ.24– ಮಳವಳ್ಳಿ ತಾಲೂಕಿನ ಬಾಚನಹಳ್ಳಿ ಮೊರಾರ್ಜಿ ದೇಸಾಯಿ ಉನ್ನತೀಕರಿಸಿದ ಪದವಿ ಪೂರ್ವ ಕಾಲೇಜಿನಲ್ಲಿ ಗಣಕ ವಿಜ್ಞಾನ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಅಹ್ವಾನಿಸಲಾಗಿದೆ. ಅರ್ಹರು ವಸತಿ ಕಾಲೇಜಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೊ.9740894467 ಸಂಪರ್ಕಿಸಬಹುದು.

ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅಪಾರ

ನ್ಯಾಯಾಧೀಶ ಸುಧೀರ್ ಅಭಿಪ್ರಾಯ

ಕೆ.ಆರ್.ಪೇಟೆ, ಜೂ.24– ಕಾರ್ಮಿಕರು ದೇಶದ ಸಂಪತ್ತು. ಕಾರ್ಮಿಕರ ಪ್ರಾಮಾಣಿಕ ದುಡಿಮೆಯಿಂದ ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ. ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅಪಾರ ಎಂದು ಜೆಎಂಎಫ್‌ಸಿ ಸಿವಿಲ್ ನ್ಯಾಯಾಲಯದ ಹಿರಿಯ ಶ್ರೇಣಿ ನ್ಯಾಯಾಧೀಶ ಸುಧೀರ್ ತಿಳಿಸಿದರು.

ಪಟ್ಟಣದ ಗ್ರಾಮಭಾರತಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಕಾರ್ಮಿಕ ಇಲಾಖೆ ಮತ್ತು ಅರಣ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಹಾಗೂ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ, ವಿವಿಧ ಹೂ ಮತ್ತು ಹಣ್ಣಿನ ಸಸಿಗಳನ್ನು ನೆಟ್ಟು ಅವರು ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿ ನಾಗರಿಕ ಸಮಾಜಕ್ಕೆ ಅಂಟಿರುವ ಶಾಪ. ಆಟವಾಡಿಕೊಂಡು ಶಾಲೆಗೆ ಹೋಗಿ ಪಾಠ ಕಲಿತು ಜ್ಞಾನವಂತರಾಗಿ ಸದೃಢ ಸಮಾಜ ಕಟ್ಟಬೇಕಾದ ಭವಿಷ್ಯದ ನಾಗರಿಕರಾದ ಮಕ್ಕಳನ್ನು ದುಡಿಮೆಗೆ ಕಳುಹಿಸಿ ಬಾಲ ಕಾರ್ಮಿಕರನ್ನಾಗಿಸದೇ, ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ಮಕ್ಕಳಿಗೆ ಸಂವಿಧಾನ ಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ನೀಡಿ ಅವರು ತಮ್ಮ ಶಿಕ್ಷಣ ಜ್ಞಾನದ ಬೆಳಕಿನ ಶಕ್ತಿಯ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬಂದು ಸಾಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಗಿಡಮರಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಪರಿಸರ ಸಂರಕ್ಷಣೆ ದಿಕ್ಕಿನಲ್ಲಿ ನಾವೆಲ್ಲರೂ ಜಾಗೃತರಾಗಿ ಗಿಡಮರಗಳನ್ನು ನೆಟ್ಟು ಪೋಷಿಸಿ ಬೆಳೆಸುವ ಮೂಲಕ ಪರಿಸರ ಮಾಲಿನ್ಯದಿಂದ ಮುಕ್ತವಾದ ಹಸಿರಿನಿಂದ ಕೂಡಿರುವ ಸ್ವಚ್ಛ ವಾತಾವರಣ ನಿರ್ಮಿಸಲು ಮುಂದಾಗಬೇಕು ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಡಾ.ಎನ್.ಚಾಂದಿನಿ ಮಾತನಾಡಿ, ಮಾನವನ ದೌರ್ಜನ್ಯದಿಂದ ಗಿಡಮರಗಳು ಸೇರಿದಂತೆ ಕಾಡು ನಾಶವಾಗಿ, ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ಸೇವಿಸುವ ಆಹಾರ ಸೇರಿದಂತೆ ನಾವು ವಾಸಿಸುವ ನಮ್ಮ ಸುತ್ತಮುತ್ತಲಿನ ಪರಿಸರ ಸೇರಿದಂತೆ ವಾತಾವರಣವು ಮಾಲಿನ್ಯವಾಗಿ ನಾವು ಹಾಗೂ ನಮ್ಮ ಮಕ್ಕಳು ರೋಗ–ರುಜಿನಗಳಿಗೆ ತುತ್ತಾಗಿ ಸಂಕಷ್ಟಕ್ಕೆ ಒಳಗಾಗುತ್ತಿದ್ದೇವೆ. ಆದ್ದರಿಂದ ಮನೆಗೆ 2 ಮರ ಊರಿಗೊಂದು ತೋಪು ಎಂಬ ಹಿರಿಯರ ನಾಣ್ಣುಡಿಯಂತೆ ಪ್ರತಿಯೊಬ್ಬರೂ ಗಿಡ ಮರಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಿ ಪಾಲನೆ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ನಮ್ಮ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ದೊರೆಯುವಂತೆ ಈಗಿನಿಂದಲೇ ಎಚ್ಚರ ವಹಿಸಬೇಕು ಎಂದರು.

ಗ್ರಾಮ ಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಎಸ್.ಸಿ.ಕಿರಣ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕ ಹರೀಶ್, ಕಾರ್ಮಿಕ ಅಧಿಕಾರಿ ಎಂ.ಸ್ವಾಮಿ, ತಾಲೂಕು ವಲಯ ಅರಣ್ಯಾಧಿಕಾರಿ ಅನಿತಾ ಪ್ರವೀಣ್, ವಕೀಲರ ಸಂಘದ ಉಪಾಧ್ಯಕ್ಷ ಪುರುಷೋತ್ತಮ್, ಜಂಟಿ ಕಾರ್ಯದರ್ಶಿ ದೊಡ್ಡಯ್ಯ, ವಕೀಲರಾದ ಎಸ್.ಆರ್.ನವೀನ್ ಕುಮಾರ್, ಎಂ.ಆರ್.ಪ್ರಸನ್ನಕುಮಾರ್, ವಜ್ರಪ್ರಸಾದ್ ಇತರರಿದ್ದರು.



ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮೂರನೇ ಪುಟದಿಂದ

ಮೈಸೂರು "ಅತ್ಯಾಪ್ತೆ" ಮನೆ ಮೇಲೆ ಇಡಿ ದಾಳಿ

ಅಧಿಕಾರಿಗಳೆಂದು ಪರಿಚಯ ಮಾಡಿಕೊಂಡು ಮನೆಯನ್ನೆಲ್ಲಾ ಜಾಲಾಡಿದರು. ಮನೆಯ ಪ್ರತಿಯೊಂದು ಕೋಣೆಯ ತಪಾಸಣೆ ನಡೆಸಿ ದಾಖಲಾತಿಗಳನ್ನು ಪರಿಶೀಲನೆ ನಡೆಸಿದರು. ಅಲ್ಲದೆ ಆಸ್ತಿ ಪಾಸ್ತಿಗೆ ಸಂಬಂಧಿಸಿದಂತೆ ಯಮುನಾ ಹಾಗೂ ಅವರ ತಾಯಿಯನ್ನು ವಿಚಾರಣೆಗೊಳಪಡಿಸಿದರು.

ತರುವಾಯ ಮಧ್ಯಾಹ್ನ 12.25 ಗಂಟೆಗೆ ಯಮುನಾ ಅವರನ್ನು ಮನೆಯಿಂದ ಬ್ಯಾಂಕ್‌ಗೆ ಒಂದು ತಂಡ ಕರೆದೊಯ್ದರೆ, ಮತ್ತೊಂದು ತಂಡ ಮನೆಯಲ್ಲಿ ಪರಿಶೀಲನಾ ಕಾರ್ಯದಲ್ಲಿ ತೊಡಗಿತ್ತು.

ಇಡಿ ಅಧಿಕಾರಿಗಳು ಬ್ಯಾಂಕ್‌ನಲ್ಲಿ ಪರಿಶೀಲನೆ ನಡೆಸಿ ಮತ್ತೆ ದಟ್ಟಗಳ್ಳಿಯ ಮನೆಗೆ ಕರೆದುತಂದು ವಿಚಾರಣೆ ಮುಂದುವರೆಸಿದರು.

ಈ ಮೂಲಕ ಇಂದು ಬೆಳಿಗ್ಗೆಯಿಂದ ರಾತ್ರಿ ಬಹುಹೊತ್ತಿನವರೆಗೂ ಇಡಿ ಅಧಿಕಾರಿಗಳು ಯಮುನಾ ಅವರ ಮನೆಯಲ್ಲಿ ಪರಿಶೀಲನೆ ನಡೆಸಿ, ಅಗತ್ಯ ಮಾಹಿತಿ ಕಲೆ ಹಾಕಿದರು.

ಮಂಜುನಾಥ್ ಅವರ ಬೆಳಗಾವಿಯ ದೂರದರ್ಶನ ಕೇಂದ್ರದ ಬಳಿಯ ಹೈಟೆಕ್ ಅಪಾರ್ಟ್ ಮೆಂಟ್, ಮಂಜು ನಾಥ್ ಅವರ ಸ್ವಗ್ರಾಮ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲೂಕಿನ ಅರಸೀಕೆರೆ ಮನೆ, ಅಥಣಿಯ ಐನಾಪುರ ಗ್ರಾಮದ ಮಂಜುನಾಥ್ ಅವರ ಸ್ನೇಹಿತನ ಮನೆ ಸೇರಿದಂತೆ ಹಲವು ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ಇಂದು ಮುಂಜಾನೆ 5.30 ಗಂಟೆಗೆ ಏಕ ಕಾಲಕ್ಕೆ ದಾಳಿ ನಡೆಸಿದ್ದಾರೆ.

ಡಾ.ಮಂಜುನಾಥ್‌ಗೆ ಸಂಬಂಧಿಸಿದಂತೆ ರಾಜ್ಯ; ಹೊರರಾಜ್ಯದ 20 ಕಡೆ ದಾಳಿ

ಅಕ್ರಮ ಹಣ ವರ್ಗಾವಣೆ, ಆಸ್ತಿ ಸಂಪಾದನೆ ಆರೋಪದ ಮೇಲೆ ಬೆಳಗಾವಿ, ಬಳ್ಳಾರಿ, ವಿಜಯನಗರ, ಬೆಂಗಳೂರು, ಮೈಸೂರು, ಮಹಾರಾಷ್ಟ್ರದ ಸೊಲ್ಲಾಪುರ, ಪುಣೆ, ಮುಂಬೈ ಸೇರಿದಂತೆ ಡಾ. ಮಂಜುನಾಥ್‌ಗೆ ಸಂಬಂಧಿಸಿದಂತೆ 20ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ ನಡೆಸಿ ಶೋಧನಾ ಕಾರ್ಯ ಮುಂದುವರೆದಿದೆ.

ಮಂಜುನಾಥ್, ಬೇನಾಮಿ ಹೆಸರಿನಲ್ಲಿ ವೈನ್‌ಶಾಪ್, ಬಾರ್ ಅಂಡ್ ರೆಸ್ಟೋರೆಂಟ್, ರೆಸಾರ್ಟ್ ಹೊಂದಿರುವುದಲ್ಲದೆ, ಆದಾಯ ಮೂಲಕ್ಕಿಂತ ಭಾರೀ ಪ್ರಮಾಣದಲ್ಲಿ ಸಂಪತ್ತು ಗಳಿಸಿರುವ ಆರೋಪದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಅವರ ಆಸ್ತಿ–ಪಾಸ್ತಿಗಳ ಮೇಲೆ ಇ.ಡಿ. ದಾಳಿ ನಡೆಸಿದೆ. ಸರ್ಕಾರಿ ಅಧಿಕಾರಿಯಾಗಿ ಅಕ್ರಮ ಲೇವಾದೇವಿ ಮತ್ತು ಹಣಕಾಸು ವಹಿವಾಟನ್ನು ದೊಡ್ಡ ಪ್ರಮಾಣದಲ್ಲಿ ನಡೆಸುತ್ತಿದ್ದರೆಂಬ ಆರೋಪವೂ ಇವರ ಮೇಲಿದೆ.

ಬೆಂಗಳೂರು ಮತ್ತು ಗೋವಾದ ಇ.ಡಿ. ಅಧಿಕಾರಿಗಳು ಜಂಟಿಯಾಗಿ, ಬೆಳಗಾವಿಯ ದೂರದರ್ಶನ ಕೇಂದ್ರದ ಸಮೀಪವಿರುವ ಅವರ ಮನೆ, ಅಲ್ಲದೆ, ಬೆಂಗಳೂರು, ವಿಜಯನಗರ, ಹರಪ್ಪನಹಳ್ಳಿ ತಾಲೂಕು, ಅರಸೀಕೆರೆಯಲ್ಲಿರುವ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ಮಾಡಿದ್ದಾರೆ. ಹರಪನಹಳ್ಳಿಯ ಅರಸೀಕರೆ ಗ್ರಾಮದ ಎರಡು ಮನೆ, ಅಥಣಿ ತಾಲ್ಲೂಕಿನ ಐನಾಪುರ ಗ್ರಾಮದಲ್ಲಿನ ಸ್ನೇಹಿತನ ಮನೆ, ಬೆಂಗಳೂರಿನಲ್ಲಿನ ಅಪಾರ್ಟ್‌ಮೆಂಟ್‌ಗಳ ಮೇಲೆ ಕೇಂದ್ರ ಭದ್ರತಾ ಪಡೆಯ 10 ತುಕಡಿಗಳ ರಕ್ಷಣೆಯಲ್ಲಿ ದಾಳಿ ನಡೆಸಲಾಗಿದೆ. ಮಂಜುನಾಥ್ ಆಪ್ತ ತುಮಕೂರು ಅಬಕಾರಿ ಎಸ್‌ಪಿ ಸತೀಶ್ ಕಾಗಲಿ ಅವರ ಬೆಳಗಾವಿಯ ಐನಾಪುರ ಪಟ್ಟಣ ಹಾಗೂ ಶ್ರೀನಗರದಲ್ಲಿರುವ ನಿವಾಸಗಳ ಮೇಲೂ ದಾಳಿ ನಡೆದಿದೆ. ಚಿಕ್ಕೋಡಿಯ ಅಬಕಾರಿ ಡಿವೈಎಸ್‌ಪಿ ವಿಶ್ವನಾಥ್ ಗಾಣಿಗೇರ ಮನೆ, ಕಚೇರಿ ಮೇಲೆ ದಾಳಿ ನಡೆಸಿ, ದಾಖಲೆಗಳ ಪರಿಶೀಲನೆ ನಡೆಸಲಾಗಿದೆ.

ಸರ್ಕಾರಿ ಕಾರು ಬಿಟ್ಟು ಬೆನ್ಜ್ ಕಾರು ಬಳಸುತ್ತಿದ್ದ ಡಾ.ಮಂಜುನಾಥ್

ಡಾ.ಮಂಜುನಾಥ್, ಮೈಸೂರು ಅಬಕಾರಿ ಡಿಸಿ ಆಗಿದ್ದಾಗ ಅವರ ಐಷರಾಮಿತನವನ್ನು ಬಹಳಷ್ಟು ಜನರು ನೋಡಿದ್ದಾರೆ. ಅವರಿಗೆ ಸರ್ಕಾರಿ ಕಾರು ಇದ್ದರೂ ಅದನ್ನು ಬಳಸುತ್ತಿರಲಿಲ್ಲ. ಕಚೇರಿಗೆ ಬರುವುದರಿಂದ ಹಿಡಿದು ಎಲ್ಲೇ ಹೋಗಬೇಕಾದರೂ ಅವರು ಸರ್ಕಾರಿ ಕಾರು ಬಿಟ್ಟು ತಮ್ಮ ಸ್ವಂತ ಮರ್ಸಿಡಿಸ್ ಬೆನ್ಜ್ ಕಾರು ಬಳಸುತ್ತಿದ್ದರು. ಸಂಸದರ ಮಗ ಎಂಬುದರ ಜೊತೆಗೆ ಪ್ರಭಾವಿ ರಾಜಕಾರಣಿ ಸತೀಶ್ ಜಾರಕಿಹೊಳಿ ಕುಟುಂಬದ ಅಳಿಯ ಆಗಿದ್ದು, ಡಾ.ಮಂಜುನಾಥ್ ಅವರ ಐಷರಾಮಿತನ ಇಮ್ಮಡಿಯಾಗಿತ್ತು. ರಾಜಕೀಯ ಕುಟುಂಬದ ಪ್ರಭಾವ ಇದ್ದ ಕಾರಣ ಡಾ. ಮಂಜುನಾಥ್ ಅವರು ಯಾರಿಗೂ ಕೇರ್ ಮಾಡುತ್ತಿರಲಿಲ್ಲ. ಯಾರೂ ನನ್ನ ಏನು ಮಾಡಲು ಸಾಧ್ಯವಿಲ್ಲ ಎಂದು ಅಧಿಕಾರಿ ವರ್ಗದಲ್ಲಿ ದರ್ಪ ಮೆರೆಯುತ್ತಿದ್ದರು.

ನಿವೃತ್ತರ ಸ್ವರ್ಗದಲ್ಲಿ ಇಡಿ ದಾಳಿ ಮಾಮೂಲಾಗಿದೆ

ಸಾಂಸ್ಕೃತಿಕ ನಗರಿ ಮೈಸೂರು ನಿವೃತ್ತಿ ದಾರರ ಸ್ವರ್ಗ, ಪ್ರಶಾಂತ ನಗರಿ ಎಂಬ ಮಾತಿದೆ. ಅಕ್ರಮ ಆಸ್ತಿ ಗಳಿಕೆ ಆರೋಪ ದಡಿ ಇಡಿ ಅಧಿಕಾರಿಗಳು ದೇಶದ ವಿವಿಧೆಡೆ ದಾಳಿ ನಡೆಸುತ್ತಿದ್ದರೂ, ಆದರೆ, ಮೈಸೂರಿನಲ್ಲಿ ಇಂತಹ ಬೆಳವಣಿಗೆ ಕಂಡು ಬರುತ್ತಿರಲಿಲ್ಲ.

ಆದರೆ, ಇತ್ತೀಚಿಗೆ ಮೈಸೂರಿನಲ್ಲಿ ಕೂಡ ಅಕ್ರಮ ಆಸ್ತಿ ಸಂಪಾದನೆಯ ಆರೋಪದ ಮೇಲೆ ಆಗಾಗೆ ದಾಳಿ ನಡೆಯುತ್ತಿರುವುದು ಪ್ರಜ್ಞಾವಂತರಲ್ಲಿ ಬೇಸರ ತಂದಿದೆ. ಮುಡಾದಲ್ಲಿ ನಡೆದ ಭಾರೀ ಹಗರಣದ ಬಗ್ಗೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಅನೇಕ ಉದ್ಯಮಿಗಳ ಮನೆ ಮೇಲೂ ದಾಳಿ ನಡೆದಿತ್ತು.

ಇತ್ತೀಚೆಗಂತೂ ಮೈಸೂರಿನಲ್ಲಿ ಕೂಡ ಇಡಿ ದಾಳಿ ಸಾಮಾನ್ಯವಾಗಿ ಬಿಟ್ಟಿದೆ. ಅಕ್ರಮ ಆಸ್ತಿ ಗಳಿಕೆಯ ವ್ಯವಹಾರಗಳು ನಡೆಯುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.

ಸ್ಥಳೀಯ ಪೊಲೀಸರಿಗೆ ಸುಳಿವೇ ನೀಡಿಲ್ಲ: ಅರೆ ಸೇನಾ ಪಡೆ ಭದ್ರತೆ

ಮೈಸೂರಿನ ದಟ್ಟಗಳ್ಳಿಯ ಯಮುನಾ ಅವರ ಮನೆ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಸ್ಥಳೀಯ ಪೊಲೀಸರಿಗೆ ಮಾಹಿತಿಯನ್ನೇ ನೀಡಿಲ್ಲ. ಅರೆ ಸೇನಾ ಪಡೆ ಸಿಬ್ಬಂದಿಯ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಿದರು.

ಹಾಗಾಗಿ ಯಮುನಾ ಅವರ ಮನೆ ಬಳಿ ಸ್ಥಳೀಯ ಪೊಲೀಸರ ಸುಳಿವೇ ಇರಲಿಲ್ಲ. ಸಹಜ ಕುತೂಹಲಕ್ಕಾದರೂ ಸ್ಥಳೀಯ ಪೊಲೀಸರು ಯಮುನಾ ಮನೆ ಬಳಿ ಬರಲಿಲ್ಲ.

ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಮನೆ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಇಡಿ ಅಧಿಕಾರಿಗಳ ಮೇಲೆ ವಿಜಯನ್ ಅವರ ಬೆಂಬಲಿಗರು ದಾಳಿ ಮಾಡಿದಾಗ ಸ್ಥಳೀಯ ಪೊಲೀಸರು ನೆರವಿಗೆ ದಾವಿಸದ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು, ಸ್ಥಳೀಯ ಪೊಲೀಸರ ದೂರವಿಟ್ಟು ಕಾರ್ಯಾಚರಣೆಗಿಳಿದಿದ್ದಾರೆನ್ನಲಾಗಿದೆ.

ಇತ್ತೀಚಿಗೆ ಕೇರಳ, ದೆಹಲಿ ಸೇರಿದಂತೆ ಹಲವು ಸ್ಥಳಗಳಲ್ಲಿ ದಾಳಿ ಮಾಡಿದಾಗಲೂ ಸ್ಥಳಿಯ ಪೊಲೀಸರ ಭದ್ರತೆ ಒಪ್ಪದ ಇಡಿ ಅಧಿಕಾರಿಗಳು ಅರೆ ಸೇನಾ ಪಡೆಯ ಭದ್ರತೆಯೊಂದಿಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ಮೂಲಕ ಪೊಲೀಸರ ಬಗ್ಗೆ ಇಡಿ ಅಧಿಕಾರಿಗಳಿಗೆ ಅಪನಂಬಿಕೆ ಇರುವುದು ಸ್ಪಷ್ಟವಾಗಿದೆ.

ಜೈಲು ಪಾಲಾಗಿದ್ದ ಡಾ.ಮಂಜುನಾಥ್

ಹಠ ಹಿಡಿದಿದ್ದರು. ಕೊನೆಗೆ ಅವರನ್ನು ಭೇಟಿ ಮಾಡಿ 15 ಲಕ್ಷ ನೀಡುವುದಾಗಿ ತಿಳಿಸಿದ್ದೆ. ಅದಕ್ಕೆ ಅವರು ಕೂಡ ಒಪ್ಪಿಕೊಂಡರು. ಇದನ್ನೆಲ್ಲಾ ಆಡಿಯೋ, ವಿಡಿಯೋ ರೆಕಾರ್ಡ್ ಮಾಡಿಕೊಂಡು ಮಂಜುನಾಥ್ ಅವರ ಲಂಚಾವತಾರ ಹಾಗೂ ಅಕ್ರಮ ಆಸ್ತಿಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ದೂರು ನೀಡಿದ್ದೆ.

ಮೈಸೂರಿನ ಕೆಲವು ಮದ್ಯ ಮಾರಾಟಗಾರರು ಲೈಸೆನ್ಸ್ ನವೀಕರಣಕ್ಕಾಗಿ ಲಂಚ ನೀಡುವಾಗ ಡಾ.ಮಂಜುನಾಥ್ ಅವರು 2012, ಜೂನ್ 27 ರಂದು ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ಈ ಪ್ರಕರಣದಲ್ಲಿ ಮಂಜುನಾಥ್ ಅವರು 11 ದಿನ ಜೈಲು ಶಿಕ್ಷೆ ಅನುಭವಿಸಿದ್ದರು ಎಂದು ಅಂದಿನ ಘಟನೆಯನ್ನು ಚಂದ್ರಶೇಖರ್ ವಿವರಿಸಿದರು.

ಸಂಭ್ರಮಾಚರಣೆ: ಲಂಚ ಪಡೆದ ಪ್ರಕರಣದಲ್ಲಿ ಡಾ. ಮಂಜುನಾಥ್ ಅವರು ಮೈಸೂರು ಜೈಲಿನಲ್ಲಿ 11 ದಿನ ಸೆರೆವಾಸ ಅನುಭವಿಸಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರ ಬಂದಾಗ ಅವರ ಬೆಂಬಲಿಗರು ಅದ್ದೂರಿ ಮೆರವಣಿಗೆ ಮೂಲಕ ಸಂಭ್ರಮಾಚರಣೆ ಮಾಡಿದ್ದರು ಎಂದು ಚಂದ್ರಶೇಖರ್ ಅವರು ಅಂದಿನ ಘಟನೆಯನ್ನು ನೆನಪಿಸಿದರು. ಮೈಸೂರು ಅಬಕಾರಿ ಡಿಸಿ ಆಗಿದ್ದ ಸಂದರ್ಭದಲ್ಲೇ ಡಾ.ಮಂಜುನಾಥ್ 100 ಕ್ಕೂ ಹೆಚ್ಚು ಬಾರ್ ಅಂಡ್ ರೆಸ್ಟೋರೆಂಟ್ ಲೈಸೆನ್ಸ್ ಅನ್ನು ಬೇನಾಮಿಯಾಗಿ ಪಡೆದಿದ್ದಾರೆ.

ಸಾವಿರ ಕೋಟಿ ಒಡೆಯ: ಮೈಸೂರು ನಗರ ಒಂದರಲ್ಲೇ ಸುಮಾರು 10 ಬೇನಾಮಿ ಲೈಸೆನ್ಸ್ ಹೊಂದಿದ್ದಾರೆ ಡಾ.ಮಂಜುನಾಥ್ ಅವರು ಏನಿಲ್ಲ ವೆಂದರೂ ಈಗ ಸಾವಿರ ಕೋಟಿ ಆಸ್ತಿ ವಂತರಾಗಿದ್ದಾರೆ ಎಂದು ಚಂದ್ರಶೇಖರ್ ಆರೋಪಿಸಿದರು.

ಉದ್ಯೋಗ ಖಾತ್ರಿ ಜಾರಿ

ಕಾರಣ ಈಗ ಅತ್ಯಾಧುನಿಕ ಕೃಷಿ ಯಂತ್ರೋ ಪಕರಣ ಬಂದಿದ್ದು, ಗ್ರಾಮೀಣ ಕುಟುಂಬಗಳಿಗೆ ಬೇಸಾಯದ ಸಮಯದಲ್ಲೂ ಕೃಷಿ ಉದ್ಯೋಗ ಲಭಿಸುವುದಿಲ್ಲ. ಹೀಗಾಗಿ ವಿಬಿಜಿ ರಾಮ್ ಜಿ ಅವರ ಅನ್ನವನ್ನು ಕಸಿದುಕೊಂಡಂತೆ ಮಾಡಿದೆ. ಇದರ ವಿರುದ್ಧ ರಾಜ್ಯ ಸರ್ಕಾರ ಆಕ್ಷೇಪಣೆ ವ್ಯಕ್ತಪಡಿಸಿದೆ ಎಂದರು. ಬರುವ 28ರಂದು ದೆಹಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೊಂದಿಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಇದ್ದು, ಈ ಸಭೆಯಲ್ಲಿ ಈ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಕೂಲಿ ಹೆಚ್ಚಿಸಿ: ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಬೇಕು ಎಂಬುದು ನಮ್ಮ ಒತ್ತಾಯ. ನಮ್ಮ ರಾಜ್ಯದಲ್ಲಿ 375 ಕೂಲಿ ಇದೆ. ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡಿದೆ. ಇದಕ್ಕೆ ಹೊಂದುವಂತೆ ಕೇಂದ್ರವೂ ಕನಿಷ್ಠ ಕೂಲಿ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು. ಜು. 1ರಿಂದ ಹೊಸ ಸ್ವರೂಪದ ಮನ್ರೇಗಾ (ವಿಬಿಜಿ ರಾಮ್ ಜಿ) ಜಾರಿ ಮಾಡಲಾಗುವುದು. ಇದರಡಿ ಯಲ್ಲಿ ಯಾರೇ ಉದ್ಯೋಗ ಕೇಳಿ ಬಂದರೂ ಅರ್ಹರಿಗೆ ಉದ್ಯೋಗ ನೀಡಲು ಸರ್ಕಾರ ಸನ್ನದ್ಧವಾಗಿದೆ.ಕಳೆದ 3 ತಿಂಗಳಲ್ಲಿ ರಾಜ್ಯದಲ್ಲಿ 1.40 ಲಕ್ಷ ಮಾನವ ದಿನ ಸೃಷ್ಟಿಸಲಾಗಿದೆ. 9 ಕೋಟಿ ವಾರ್ಷಿಕ ಗುರಿ ಇಟ್ಟುಕೊಂಡಿದೆ. ಪ್ರತಿ ತಿಂಗಳೂ 80 ರಿಂದ 90 ಲಕ್ಷ ಮಾನವ ದಿನ ಸೃಷ್ಟಿ ನಮ್ಮ ಗುರಿ ಎಂದರು. ಈಗಾಗಲೇ ನರೇಗಾ ಅಡಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 7000ಕ್ಕೂ ಹೆಚ್ಚು ಸಿಬ್ಬಂದಿಯ ಜೀವನೋಪಾಯಕ್ಕೆ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಾಗುವುದು ಎಂದರು.

'ಪ್ರಜಾ ಸೇವೆ' ಇಲಾಖೆ ರಚನೆ

- ಕಾರ್ಯದರ್ಶಿ ಸೇರಿದಂತೆ 73 ಹುದ್ದೆ ಸೃಷ್ಟಿ
- ಗುತ್ತಿಗೆ/ಹೊರಗುತ್ತಿಗೆಯಲ್ಲಿ 48 ಹುದ್ದೆ ಸೃಷ್ಟಿ

ಮೈಸೂರು, ಜೂ.24(ಎಸ್‌ಪಿಎನ್)–ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯಲ್ಲಿನ ಅಧಿಕಾರಿ, ಸಿಬ್ಬಂದಿಗಳ ಸಮೇತ ಎಲ್ಲಾ ಹುದ್ದೆಗಳನ್ನು ಸಿಆಸುಇ(ಇ–ಆಡಳಿತ)ಅಡಿಯಲ್ಲಿ ಸಾರ್ವಜನಿಕ ದೂರು ಮತ್ತು ಕುಂದುಕೊರತೆಗಳ ವಿಭಾಗದ ಎ ಮತ್ತು ಬಿ ಶಾಖೆಗಳು(ಅಧಿಕಾರಿ/ಸಿಬ್ಬಂದಿ ಸಮೇತ) ಮತ್ತು ಸಕಾಲ ಮಿಷನ್ ವಿಭಾಗದ ಎಲ್ಲಾ ಹುದ್ದೆಗಳನ್ನು ಸಂಯೋಜಿಸಿ ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಹೊಸದಾಗಿ 'ಪ್ರಜಾ ಸೇವೆ ಇಲಾಖೆ'ಯನ್ನು ಸ್ಥಾಪಿಸಿ, ಆದೇಶಿಸಲಾಗಿದೆ.

ಈ ಇಲಾಖೆಗೆ ಹೊಸದಾಗಿ ರಚಿಸಲಾದ ಇಲಾಖೆಯ ರಚನೆ ಮತ್ತು ಹುದ್ದೆಗಳ ವಿವರ ಇಂತಿದೆ. ಪ್ರಜಾ ಸೇವಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ 01, ಅಪರ ಕಾರ್ಯದರ್ಶಿ 02, ಉಪ ಕಾರ್ಯದರ್ಶಿ 01, ಆಡಳಿತಾಧಿಕಾರಿ 01, ಸಹಾಯಕ ಆಡಳಿತಾಧಿಕಾರಿ (ಗ್ರೇಡ್ –1 ತಹಸೀಲ್ದಾರ್) ಅಧೀನ ಕಾರ್ಯದರ್ಶಿ 04, ಶಾಖಾಧಿಕಾರಿ 05, ಲೆಕ್ಕಾಧೀಕ್ಷಕರು 01, ಹಿರಿಯ ಸಹಾಯಕರು 11, ಸಹಾಯಕರು 12, ಕಿರಿಯ ಸಹಾಯಕರು 09, ಶೀಘ್ರಲಿಪಿಗಾರರು 5, ಬೆರಳಚ್ಚುಗಾರರು 5, ವಾಹನ ಚಾಲಕರು 04, ಗ್ರೂಪ್ ಡಿ 09 ಸೇರಿದಂತೆ ಒಟ್ಟು 73 ಹುದ್ದೆಗಳನ್ನು ಸೃಜಿಸಲಾಗಿದೆ.

ಗುತ್ತಿಗೆ/ಹೊರಗುತ್ತಿಗೆ ಹುದ್ದೆಗಳಾದ ರಾಜ್ಯ ನಿರ್ವಹಣಾ ಸಮಾಲೋಚಕರು 01, ರಾಜ್ಯಮಾಹಿತಿ ತಂತ್ರಜ್ಞಾನ ಸಮಲೋಚಕರು, ಹೆಚ್ಚುವರಿ ರಾಜ್ಯ ನಿರ್ವಹಣಾ ಸಮಾಲೋಚಕರು, ಹೆಚ್ಚುವರಿ ರಾಜ್ಯ ನಿರ್ವಹಣಾ ಸಮಾಲೋಚಕ, ಸಹಾಯಕ ನಿರ್ವಹಣಾ ಸಮಾಲೋಚಕರು, ಸಹಾಯಕ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗೆ ತಲಾ 1 ಹುದ್ದೆ, ಡಾಟಾ ಎಂಟ್ರಿ ಆಪರೇಟರ್ 05, ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕ 32, ವಾಹನ ಚಾಲಕರು 02, ಡಿ ಗ್ರೂಪ್ ನೌಕರರ ಹುದ್ದೆ 3 ಸೇರಿದಂತೆ ಒಟ್ಟು 48 ಸಿಬ್ಬಂದಿ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಸೇವೆಗಳು–6) ಅಧೀನ ಕಾರ್ಯದರ್ಶಿ ಜಿ.ಎನ್.ಗಾಯಿತ್ರಿ ಆದೇಶಿಸಿದ್ದಾರೆ. ರಾಜ್ಯ ಸರ್ಕಾರ(ವ್ಯವಹಾರ ಹಂಚಿಕೆಗಳು) ನಿಯಮಗಳು 1977ರ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವ ಬಗ್ಗೆ ಸಿಆಸುಇ ವಿಭಾಗವು ಸೂಕ್ತಕ್ರಮಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ನನ್ನ ಹೆಸರಿನಲ್ಲಿರುವುದು ಬರೀ 32 ಎಕರೆ ಜಮೀನು ಅಷ್ಟೇ.!

ನೂರು ಎಕರೆ ಅಲ್ಲ; ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಸ್ಪಷ್ಟನೆ



ಅನಿತಾ ಕುಮಾರಸ್ವಾಮಿ

ಬೆಂಗಳೂರು: ಸಚಿವ ಎಂ.ಬಿ. ಪಾಟೀಲ್ ಅವರು ಹೇಳಿರುವಂತೆ 100 ಎಕರೆ ಜಮೀನು ನನ್ನ ಹೆಸರಿನಲ್ಲಿ ಇಲ್ಲ. ನನ್ನ ಹೆಸರಿನಲ್ಲಿರುವುದು 32 ಎಕರೆ ಜಮೀನು ಮಾತ್ರ ಎಂದು ಅನಿತಾ ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ತಮ್ಮ ವಿರುದ್ಧ ರಾಜಕೀಯ ದುರುದೇಶದಿಂದ ಸುಳ್ಳು ಪ್ರಚಾರ ನಡೆಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ರಾಜಕೀಯ ಲಾಭಕ್ಕಾಗಿ ಮನೆಯವರನ್ನು ಎಳೆದು ತಂದು ಆರೋಪ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ ಎಂದು ತಿರುಗೇಟು ನೀಡಿದ್ದಾರೆ. ಇದೇ ವೇಳೆ ವೈಯಕ್ತಿಕ ವಿಚಾರಗಳನ್ನು ರಾಜಕೀಯಕ್ಕೆ ಎಳೆಯಬಾರದು ಎಂದು ಎಚ್ಚರಿಕೆ ನೀಡಿರುವ ಅವರು, ವೈಯಕ್ತಿಕ ವಿಚಾರಗಳ ಬಗ್ಗೆ ಚರ್ಚಿಸುವ ಕೀಳು ಮಟ್ಟಕ್ಕೆ ಯಾರೂ ಹೋಗಬಾರದು. ಅನಗತ್ಯವಾಗಿ ನನ್ನ ಬಗ್ಗೆ ಹಾಗೂ ನನ್ನ ಕುಟುಂಬದ ಕುರಿತು ಇಲ್ಲಸಲ್ಲದ ಆರೋಪಗಳನ್ನು ಮಾಡಿದರೆ, ಅಂತಹವರಿಗೆ ಕಾನೂನು ಮೂಲಕ ಉತ್ತರ ನೀಡುತ್ತೇನೆ ಎಂದು ಎಚ್ಚರಿಸಿದ್ದಾರೆ. ಇದಕ್ಕೂ ಮುನ್ನ ಮಾತನಾಡಿದ್ದ ಸಚಿವ ಎಂ.ಬಿ. ಪಾಟೀಲ್ ಅವರು, ಬಿಡದಿ ಟೌನ್‌ಶಿಪ್ ನಿರ್ಮಾಣ ವಿಚಾರದಲ್ಲಿ ಹೆಚ್.ಡಿ. ಕುಮಾರಸ್ವಾಮಿ ರಾಜಕೀಯ ಮಾಡುತ್ತಿದ್ದಾರೆ. ಈ ಯೋಜನೆಯನ್ನು ಸ್ವತಃ ಕುಮಾರಸ್ವಾಮಿ ಅವರೇ ಪ್ರಾರಂಭಿಸಿದ್ದರು. ಹಾಗಿದ್ದ ಮೇಲೆ ಈಗೇಕೆ ವಿರೋಧ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಅವರಿಗೆ ಸೇರಿದ ಸುಮಾರು 100 ಎಕರೆ ಜಮೀನು ಸಹ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈಗ ಈ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಶುದ್ಧ ನಾಟಕ ಎಂದು ಟೀಕಿಸಿದರು.

ಕೇರಳಂ ರೆಸಾರ್ಟ್‌ನಲ್ಲಿ ರೆಸ್ಟ್

ಜೆಡಿಎಸ್ ಹಾಗೂ ಕಾಂಗ್ರೆಸ್ ಮೈತ್ರಿ ಸರ್ಕಾರದ ನಾಯಕತ್ವ ವಹಿಸಿದ್ದ ಕುಮಾರ ಸ್ವಾಮಿ ಅಧಿಕಾರದಿಂದ ಕೆಳಗಿಳಿಯಬೇಕಾಯಿತು. ಅಧಿಕಾರದಿಂದ ಕೆಳಗಿಳಿದ ನಂತರ ಮೌನಕ್ಕೆ ಶರಣಾಗಿರುವ ಸಿದ್ದರಾಮಯ್ಯ, ಯಾವುದೇ ಸಕ್ರಿಯ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ ಮತ್ತು ಮಾಧ್ಯಮಗಳ ಮುಂದೆ ಯಾವುದೇ ಮಾಹಿತಿ ಹಂಚಿಕೊಂಡಿಲ್ಲ. ಶಿವಕುಮಾರ್ ಸಂಪುಟಕ್ಕೆ ಸೇರಬಯಸುವ ಶಾಸಕ ಆಕಾಂಕ್ಷಿಗಳು ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಪ್ರತಿನಿತ್ಯ ಭೇಟಿ ಮಾಡಿ, ತಮಗೆ ಮಂತ್ರಿ ಸ್ಥಾನ ಕೊಡಿಸುವಂತೆ ಕೋರುತ್ತಿದ್ದರು. ಕೆಲವರು ಇಡೀ ದಿನ ಅವರ ಜೊತೆಯೇ ಕಾಲ ಕಳೆಯುತ್ತಿದ್ದರು. ಸಂಪುಟ ವಿಸ್ತರಣೆ ಸದ್ಯಕ್ಕಿಲ್ಲ ಎಂಬುದು ತಿಳಿಯುತ್ತಿದ್ದಂತೆ ಸಿದ್ದರಾಮಯ್ಯ ಜೊತೆ ಎಲ್ಲರೂ ಪ್ರವಾಸ ಕೈಗೊಂಡಿದ್ದಾರೆ.

ಕಾರು ಚಾಲಕ ಸೇರಿದಂತೆ ಐವರು ಜಲಸಮಾಧಿ

ಶವಗಳನ್ನು ನದಿಯಿಂದ ಹೊರ ತೆಗೆದಿದ್ದಾರೆ. ಬಳಿಕ ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಮಳವಳ್ಳಿಯ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ಎಸ್ಪಿ ಭೇಟಿ, ಪರಿಶೀಲನೆ: ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕಿ ವಿ.ಜೆ.ಶೋಭರಾಣಿ, ಡಿವೈಎಸ್ಪಿ ಯಶವಂತ್ ಕುಮಾರ್ ಹಾಗೂ ಹಲಗೂರು ಪೊಲೀಸ್ ಠಾಣೆ ಎಸ್‌ಐ ಲೋಕೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಸಿಹೆಚ್‌ಸಿ ಗೋವರ್ಧನ್, ಮೋಹನ್ ಕುಮಾರ್, ಪ್ರಶಾಂತ್ ಕುಮಾರ್ ಹಾಗೂ ಮಹಿಳಾ ಪೊಲೀಸ್ ಸಿಬ್ಬಂದಿ ಗೀತಾ ಅಂಚಿನಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮುತ್ತತ್ತಿಯ ಕಾವೇರಿ ನದಿ ಸ್ಥಳದಲ್ಲಿ ನಿರಂತರವಾಗಿ ಇಂತಹ ಅಪಾಯಕಾರಿ ಘಟನೆಗಳು ನಡೆಯುತ್ತಲೇ ಇವೆ. ಆದರೂ ಪ್ರವಾಸಿಗರು ಎಚ್ಚರಿಕೆ ಫಲಕಗಳನ್ನು ನಿರ್ಲಕ್ಷಿಸಿ ನೀರಿಗಿಳಿಯುವುದು ಇಂತಹ ದುರಂತಗಳಿಗೆ ಕಾರಣವಾಗುತ್ತಿದೆ. ದೇವರ ದರ್ಶನ, ಬೀಗರ ಔತಣ ಕೂಟಕ್ಕೆ ಬಂದ ಸಂಭ್ರಮದಲ್ಲಿದ್ದ ಕುಟುಂಬವೊಂದು ಈಗ ಮಸಣ ಸೇರಿರುವುದು ಮೃತರ ಕುಟುಂಬದಲ್ಲಿ ಶೋಕದ ಛಾಯೆ ಮೂಡಿಸಿದೆ. ಈ ಸಂಬಂಧ ಹಲಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕ್ರೀಡಾ ಸಾಧನೆಗಾಗಿ ಎನ್‌ಐಇ ಮೈಸೂರಿಗೆ 1.25 ಲಕ್ಷ ನಗದು ಪ್ರಶಸ್ತಿ



ಎನ್‌ಐಇ ಕ್ರೀಡಾ ಸಮಿತಿ ಸದಸ್ಯರಾದ ಶ್ರೀಮತಿ ಪ್ರತಿಭಾ ಬಿ.ಎಸ್., ದೈಹಿಕ ಶಿಕ್ಷಣ ನಿರ್ದೇಶಕಿ ಶ್ರೀಮತಿ ಕಾವ್ಯಾ ಆರ್., ವಿಟಿಯು ಕುಲಪತಿ ಡಾ. ವಿದ್ಯಾಶಂಕರ ಅವರಿಂದ ನಗದು ಪ್ರಶಸ್ತಿಯ ಚೆಕ್ ಸ್ವೀಕರಿಸುತ್ತಿರುವುದು. ಈ ವೇಳೆ ವಿಟಿಯು ಕುಲಸಚಿವರಾದ ಪ್ರೊ.ಪ್ರಸಾದ್ ಬಿ.ರಾಂಪುರೆ, ಹಣಕಾಸು ಅಧಿಕಾರಿ ಡಾ.ಪ್ರಶಾಂತ ನಾಯಕ್ ಜಿ., ಹಾಗೂ ನಿರ್ದೇಶಕರು, ದೈಹಿಕ ಶಿಕ್ಷಣ, ಡಾ. ರಾಜೇಶ್ ವೈ.ಎಚ್. ಉಪಸ್ಥಿತರಿದ್ದರು.

ಮೈಸೂರು, ಜೂ. 24–ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ವು ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಹಾಗೂ ಅತ್ಯುತ್ತಮ ಸಾಧನೆ ತೋರಿದ ಅಗ್ರ 10 ಕಾಲೇಜುಗಳಿಗೆ ಪ್ರತಿ ವರ್ಷ ನಗದು ಪ್ರಶಸ್ತಿಯನ್ನು ನೀಡುತ್ತದೆ.

2024–25ನೇ ಸಾಲಿನ ವಿಟಿಯು ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ 552 ಅಂಕಗಳನ್ನು ಗಳಿಸಿದ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಸಂಸ್ಥೆಯು ರೂ. 1.25 ಲಕ್ಷ ನಗದು ಪ್ರಶಸ್ತಿಗೆ ಭಾಜನವಾಗಿದೆ. ಈ ಪ್ರಶಸ್ತಿಯನ್ನು 2026ರ ಜೂನ್ 19ರಂದು ಬೆಳಗಾವಿಯ ವಿಟಿಯು ಆವರಣದಲ್ಲಿ ನಡೆದ ಸಮಾರಂಭದಲ್ಲಿ ವಿತರಿಸಲಾಯಿತು.


2024–25ನೇ ಸಾಲಿನಲ್ಲಿ ಮೈಸೂರು ವಿಭಾಗದಿಂದ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಏಕೈಕ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎನ್‌ಐಇ ಪಾತ್ರವಾಗಿದೆ. ಎನ್‌ಐಇ ಸಂಸ್ಥೆಯು ವಿಟಿಯು ಮೈಸೂರು ವಿಭಾಗ ಹಾಗೂ ರಾಜ್ಯಮಟ್ಟದ ಅಂತರ ಕಾಲೇಜು ಕ್ರೀಡಾಕೂಟಗಳಲ್ಲಿ ಚದುರಂಗ, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್, ಯೋಗ, ಥ್ರೋಬಾಲ್, ಸಾಫ್ಟ್‌ಬಾಲ್, ಬೇಸ್‌ಬಾಲ್, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್ ಹಾಗೂ ಖೋ–ಖೋ ಸ್ಪರ್ಧೆಗಳಲ್ಲಿ ಅತ್ಯುತ್ತಮ ಸಾಧನೆ ಪ್ರದರ್ಶಿಸಿದೆ. ಸಂಸ್ಥೆಯ ಒಟ್ಟು 20 ವಿದ್ಯಾರ್ಥಿಗಳು ವಿವಿಧ ಕ್ರೀಡಾ ವಿಭಾಗಗಳಲ್ಲಿ ವಿಟಿಯು ತಂಡಗಳನ್ನು ಪ್ರತಿನಿಧಿಸಿ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿ ಬ್ಯಾಸ್ಕೆಟ್‌ಬಾಲ್–2, ವಾಲಿಬಾಲ್ –1, ಸಾಫ್ಟ್‌ಬಾಲ್–5, ಕ್ರಿಕೆಟ್–1, ಹಾಕಿ–2 ಬೇಸ್‌ಬಾಲ್–3, ಹ್ಯಾಂಡ್‌ಬಾಲ್–2, ಟೆನಿಸ್–1, ವೇಟ್‌ಲಿಫ್ಟಿಂಗ್–2, ವುಶು–1 ಭಾಗವಹಿಸಿದ್ದಾರೆ.

ರಘು ಕೌಟಿಲ್ಯಗೆ ಅಭಿನಂದನೆ...




ವಿಧಾನಪರಿಷತ್ ನೂತನ ಸದಸ್ಯ ರಘು ಆರ್.ಕೌಟಿಲ್ಯ ಅವರನ್ನು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ, ಹಿರಿಯ ಮುಖಂಡ ಜಗದೀಶ್ ಗೌಡ, ಮೈಸೂರು ಜಿಲ್ಲಾ ಗ್ರಾಮಾಂತರ ಪರಿಶಿಷ್ಟ ಪಂಗಡ ವಿಭಾಗದ ಪ್ರಧಾನ ಕಾರ್ಯದರ್ಶಿ ಡಿ.ಮಹೇಶ ನಾಯಕ, ಕಾಯಕ ಸಮುದಾಯದ ಮುಖಂಡ ಧರ್ಮೇಂದ್ರ ಸನ್ಮಾನಿಸಿದರು.

ಸಿಪಿಕೆ, ಜಯಚಂದ್ರರಾಜು, ಸಜಗೌಗೆ ಜೂ.28ರಂದು ಪ್ರಶಸ್ತಿ ಪ್ರದಾನ



ಡಾ.ಸಿಪಿಕೆ



ಜಯಚಂದ್ರರಾಜು



ಸತೀಶ್ ಜವರೇಗೌಡ

ಮೈಸೂರು, ಜೂ. 24–ಆತ್ರೇಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಪಂಪ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಹಾಗೂ ದಕ್ಷ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಪಿ.ಜಯಚಂದ್ರ ರಾಜು ಅವರಿಗೆ 'ನಾಡ ಕೀರ್ತಿ ಪ್ರಶಸ್ತಿ', ಸಾಹಿತಿ ಹಾಗೂ ಸಂಘಟಕ ಟಿ.ಸತೀಶ್ ಜವರೇಗೌಡ (ಸಜಗೌ) ಅವರಿಗೆ 'ಕನ್ನಡ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭವು ಜೂ.28ರಂದು ಮಧ್ಯಾಹ್ನ 2.30 ಗಂಟೆಗೆ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಗುಣವಂತ ಮಂಜು ತಿಳಿಸಿದ್ದಾರೆ.

ಅಂದು ನಗರದ ಹೂಟಗಳ್ಳಿಯಲ್ಲಿರುವ ದಕ್ಷ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭವನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಬೈರಿ ಉದ್ಘಾಟಿಸುವರು. ಹಿರಿಯ ಸಾಹಿತಿ ಎಸ್. ಅಕ್ಬರ್ ಪಾಷ ಅಧ್ಯಕ್ಷತೆ ವಹಿಸುವರು. ಅಬಕಾರಿ ಇಲಾಖೆ ಮಂಡ್ಯ ಜಿಲ್ಲೆಯ ಉಪ ಆಯುಕ್ತ ಬಿ.ಆರ್. ಹಿರೇಮಠ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಟಿ ಭೂಮಿಕಾ, ಗಾಯಕಿ ಜಯಂತಿ ಭಟ್, ಪಿಡಿಓ ಕೆ.ಎಸ್.ಸತೀಶ್‌ಕುಮಾರ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಗೌಡಯ್ಯ, ದಕ್ಷ ಕಾಲೇಜಿನ ಕಾರ್ಯದರ್ಶಿ ಸೋನಿಯಾ ಉಮಾಪತಿ, ಪ್ರಾಂಶುಪಾಲ ಎಂ.ಅಭಿಷೇಕ್, ಪ್ರಗತಿಪರ ರೈತ ಪುಟ್ಟಸ್ವಾಮಿಗೌಡ ಭಾಗವಹಿಸುವರು.

ಇದೇ ಸಂದರ್ಭದಲ್ಲಿ ದಕ್ಷ ಕಾಲೇಜಿನ ವಿದ್ಯಾರ್ಥಿಗಳಿಂದ 'ಕೃತಕ ಬುದ್ಧಿಮತ್ತೆ' ಕುರಿತು ವಿಚಾರ ಮಂಡನೆ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ 'ನಾರಿಶಕ್ತಿ ಪ್ರಶಸ್ತಿ' ಸೇರಿದಂತೆ ವಿವಿಧ ಪ್ರಶಸ್ತಿಗಳ ಪ್ರದಾನ ನಡೆಯಲಿದೆ. ಸಮಾರಂಭದ ಬಳಿಕ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಹೆತ್ತವರ ಮಹತ್ವ, ಅವರ ಜೀವನ ಮೌಲ್ಯಗಳನ್ನು ಸಾರುವ ಡಾ. ಗುಣವಂತ ಮಂಜು ನಿರ್ದೇಶನದ 'ಅನುರಾಗ' ಕಿರುಚಿತ್ರ ಪ್ರದರ್ಶನವೂ ನಡೆಯಲಿದೆ.

ಪ್ರತಿ ಹನಿ ಅವಶ್ಯ, ಪ್ರತಿ ಮಗು ಅಮೂಲ್ಯ

ಜೂ.28ರಿಂದ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ

ಮೈಸೂರು, ಜೂ.24(ಎಂಕೆ)– 'ಪ್ರತಿ ಹನಿ ಅವಶ್ಯ, ಪ್ರತಿ ಮಗು ಅಮೂಲ್ಯ' ಎಂಬ ಧ್ಯೇಯದೊಂದಿಗೆ' ಜೂ.28ರಿಂದ ಜು.1ರವರೆಗೆ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ನಡೆಯಲಿದ್ದು, ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಮಟ್ಟದ ಲಸಿಕಾ ಕಾರ್ಯಪಡೆ ಸಭೆ ನಡೆಸಿದ ಅವರು, ಜೂ.28ರಂದು ಲಸಿಕಾ ಕೇಂದ್ರಗಳಲ್ಲಿ ಹಾಗೂ ಜೂ.29ರಿಂದ ಜು.1ರವರೆಗೆ ಮನೆ ಮನೆಗೆ ಭೇಟಿ ನೀಡಿ ಪೋಲಿಯೋ ಲಸಿಕೆ ಹಾಕಲಾಗುವುದು. ಪೋಲಿಯೋ ಮುಕ್ತ ಸಮಾಜವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಅಭಿಯಾನವನ್ನು ಶೇ.100 ರಷ್ಟು ಯಶಸ್ವಿಗೊಳಿಸುವಂತೆ ಸೂಚಿಸಿದರು.



ಮೈಸೂರು ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಲಸಿಕಾ ಕಾರ್ಯಪಡೆ ಸಭೆಯನ್ನು ಪಲ್ಸ್ ಪೋಲಿಯೋ ಅಭಿಯಾನದ ಪೋಸ್ಟರ್ ಅನ್ನು ಡಿಸಿ ಜಿ.ಲಕ್ಷ್ಮೀಕಾಂತ್‌ರೆಡ್ಡಿ ಬಿಡುಗಡೆ ಮಾಡಿದರು.

ನಿರಂತರ ವಿದ್ಯುತ್ ಪೂರೈಕೆ: ಚೆಸ್ಕಾಂ ವತಿಯಿಂದ ಪೋಲಿಯೋ ಲಸಿಕೆಯನ್ನು ಸುರಕ್ಷಿತವಾಗಿಡಲು ಹಾಗೂ ಶೀತಲ ಐಸ್ ಪ್ಯಾಕ್‌ಗಳನ್ನು ಕಾಯ್ದುಕೊಳ್ಳಲು ಜೂನ್ 26ರಿಂದ ಜುಲೈ 2 ರವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಇದೇ ವೇಳೆ ಜಿಲ್ಲಾಧಿಕಾರಿ ಸೂಚನೆ ನೀಡಿದರು.

6 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ನಿಯೋಜನೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ಯಶಸ್ವಿಗೊಳಿಸಲು ಜಿಲ್ಲಾದ್ಯಂತ ವ್ಯಾಪಕ ಸಿದ್ಧತೆ ಮಾಡಿಕೊಂಡಿದ್ದು, 1,641 ಬೂತ್, 1396 ಎಚ್‌ಆರ್‌ಎ ಸೈಟ್ ಮತ್ತು 51 ಮೊಬೈಲ್ ಮತ್ತು ಟ್ರಾನ್ಸಿಟ್ ತಂಡಗಳನ್ನು ರಚಿಸಿದ್ದು, 328 ಮೇಲ್ವಿಚಾರಕರ ಜೊತೆಗೆ 6772 ಲಸಿಕೆ ನೀಡುವ ಸಿಬ್ಬಂದಿಯನ್ನು ನೇಮಿಸಲಾಗಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಪಲ್ಸ್ ಪೋಲಿಯೋ ಅನುಷ್ಠಾನ ಅಧಿಕಾರಿ ಡಾ.ಸಿರಾಜ್‌ಅಹಮದ್ ಇದ್ದರು.

> 2026ನೇ ಸಾಲಿನ ರಾಷ್ಟ್ರೀಯ ಲಸಿಕಾ ದಿನದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಒಟ್ಟು 2,19,521 ಮಕ್ಕಳಿಗೆ ಲಸಿಕೆ ನೀಡುವ ಮಹತ್ತರ ಗುರಿ ಹೊಂದಲಾಗಿದೆ. ಜಿಲ್ಲೆಯ ಒಟ್ಟು 7,78,059 ಮನೆಗಳನ್ನು ತಲುಪಲು, ನಗರಸಭೆ, ಪುರಸಭೆ ಹಾಗೂ ವಿಶೇಷವಾಗಿ ಮೈಸೂರು ನಗರದಲ್ಲಿ ಲಸಿಕಾ ಪ್ರಮಾಣ ಕುಂಠಿತವಾಗದಂತೆ ತಡೆಯಲು ಪ್ರತ್ಯೇಕ ನೋಡಲ್ ಅಧಿಕಾರಿಗಳನ್ನು ನೇಮಿಸಿ ಕ್ರಿಯಾ ಯೋಜನೆ ರೂಪಿಸಬೇಕು.
>
> –ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ

ನಾಲ್ವಡಿ ಕೃಷ್ಣರಾಜರ ಕಾರ್ಯ ಅಜರಾಮರ

ಶಾಸಕ ಶ್ರೀವತ್ಸ ಅಭಿಮತ



ವಿವಿಧ ಕ್ಷೇತ್ರದ ಸಾಧಕರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಜೂ. 24– ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಾಡಿದ ಶಾಶ್ವತ ಕೆಲಸಗಳಿಂದ ಕನ್ನಡ ನಾಡಿನ ಅಭಿವೃದ್ಧಿ ನೂರ್ಮಡಿಯಾಗಿದೆ ಎಂದು ಶಾಸಕ ಟಿ ಎಸ್ ಶ್ರೀವತ್ಸ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಪಾತಿ ಫೌಂಡೇಶನ್ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 142ನೇ ಜಯಂತ್ಯೋತ್ಸವದ ಪ್ರಯುಕ್ತ ಆಯೋಜಿಸಿದ್ದ ರಸಮಂಜರಿ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರದ ಸಾಧಕರಾದ ಡಾ.ಚಂದ್ರಶೇಖರ್ (ಯೋಗ ಹಾಗೂ ವೈದ್ಯಕೀಯ ಕ್ಷೇತ್ರ), ಯೋಗ ಪ್ರಕಾಶ್ (ಯೋಗ), ಸೀಮಾ(ಯೋಗ), ಡಾ.ಪಿ.ಎಂ.ಗಣೇಶ್‌ಕುಮಾರ್ (ಕ್ರೀಡೆ), ಎಸ್.ವಿ.ವೆಂಕಟೇಶಯ್ಯ(ಯೋಗ), ಡಾ.ಕಾವ್ಯ ಎಸ್(ವೈದ್ಯಕೀಯ), ಲಯನ್ ಕೆ.ಎನ್.ಸುರೇಶ್ (ಧಾರ್ಮಿಕ), ಸುಮ ರಾಜ್‌ಕುಮಾರ್ (ನಿರೂಪಣೆ) ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಕೃಷ್ಣರಾಜ ಒಡೆಯರ್ ಅವರು ಮಹಾರಾಜರಾಗಿದ್ದರೂ ಅಧಿಕಾರದ ವ್ಯಾಪ್ತಿಯನ್ನು ವಿಕೇಂದ್ರೀಕರಿಸಿ ಪ್ರಜೆಗಳು ಸಹ ಅಧಿಕಾರದಲ್ಲಿ ಒಳಗೊಳ್ಳುವಂತೆ ಮಾಡಿದರು. ನಾಡಿಗೆ ಸಾಹಿತ್ಯ ಪರಿಷತ್ತಿನ ಕೊಡುಗೆ ನೀಡಿದರು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ರಾಜಪ್ರಭುತ್ವದ ಪ್ರತಿನಿಧಿಯಾಗಿದ್ದರೂ ಪ್ರಜಾಪ್ರಭುತ್ವದ ಹಿತಾಸಕ್ತಿಗೆ ಮಿಗಿಲಾಗಿ ರಾಜ್ಯಭಾರ ಮಾಡಿದ ಮಹಾನ್ ವ್ಯಕ್ತಿ. ಅವರು ನಿರ್ಮಿಸಿದ ಶಾಲೆ, ಕಾಲೇಜು, ಆಸ್ಪತ್ರೆ, ಅಣೆಕಟ್ಟು, ಹಾಗೂ ನಾಲ್ವಡಿ ಕೊಡುಗೆಗಳನ್ನು ಅವರು ಸ್ಮರಿಸಿದರು

ಈ ಸಂದರ್ಭದಲ್ಲಿ ವಿಷ್ಣು ಗ್ರೂಪ್ಸ್ ಚಂದನ ಶ್ರೀನಿವಾಸ ಅವರಿಂದ ರಸಮಂಜರಿ ಕಾರ್ಯಕ್ರಮ ನೆರವೇರಿತು

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಾತಿ ಫೌಂಡೇಶನ್ ಅಧ್ಯಕ್ಷ ಎಂಡಿ ಪಾರ್ಥಸಾರಥಿ, ಉದ್ಯಮಿ ಕುಮಾರ್ ಆರಾಧ್ಯ, ಸಹಕಾರಿ ರತ್ನ ಸಿ.ವಿ.ಪಾರ್ಥಸಾರಥಿ, ಸುರೇಶ್ ಗೋಲ್ಡ್, ಟಿಎಸ್ ಅರುಣ್, ಗಾಯಕ ಕೃಷ್ಣಮೂರ್ತಿ, ಚಂದನ ಶ್ರೀನಿವಾಸ್, ಬಸವರಾಜ್, ಮಹದೇವ ಹಾಗೂ ಇನ್ನಿತರರು ಹಾಜರಿದ್ದರು.

ಇಂದು ಪ್ರೊ.ಸದಾಶಿವರಿಗೆ ಅಭಿನಂದನೆ

ಮೈಸೂರು, ಜೂ.24(ಎಂಕೆ)– ಸೇವೆಯಿಂದ ನಿವೃತ್ತಿಯಾಗುತ್ತಿರುವ ಮೈಸೂರು ವಿಶ್ವವಿದ್ಯಾನಿಲಯ ಇತಿಹಾಸ ಅಧ್ಯಯನ ವಿಭಾಗದ ಪ್ರೊ.ಕೆ.ಸದಾಶಿವ ಅವರಿಗೆ ಬೀಳ್ಕೊಡುಗೆ ಮತ್ತು ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಗುರುವಾರ (ಜೂ.25)ರಂದು ಬೆಳಗ್ಗೆ 10.30ಕ್ಕೆ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಭಿನಂದನಾ ಸಮಿತಿಯ ಡಾ.ಪ್ರಮೀಳಾ ದೇವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಶಿವಮೊಗ್ಗ ಕುವೆಂಪು ವಿವಿ ಕುಲಸಚಿವ ಪ್ರೊ.ಆರ್.ತಿಮ್ಮರಾಯಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ, ಕೆಪಿಎಸ್‌ಸಿ ಸದಸ್ಯೆ ಪ್ರೊ.ಕಾವಲಮ್ಮ, ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಇತಿಹಾಸ ಪ್ರಾಧ್ಯಾಪಕ ಪ್ರೊ.ಕೆ.ಸದಾಶಿವ ನಿವೃತ್ತಿ ಹಿನ್ನಲೆಯಲ್ಲಿ ಅವರಿಗೆ ಗೌರವ ಸಲ್ಲಿಸಲು ಈ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಸಾಮಾಜಿಕ ಸಮಸ್ಯೆ ಬಗ್ಗೆ ಹೆಚ್ಚು ಗಮನ ಹರಿಸಿ, ವಿದ್ಯಾರ್ಥಿಗಳು ಆ ನಿಟ್ಟಿನಲ್ಲಿ ಸಂಶೋಧನೆ ಮಾಡಲು ಪ್ರೇರೇಪಿಸಿದ್ದಾರೆ ಎಂದು ಹೇಳಿದರು. ಈ ವೇಳೆ ಪುಷ್ಪಲತಾ, ಅನಿತಾ, ಪುನೀತ್ ಸುದ್ದಿಗೋಷ್ಠಿಯಲ್ಲಿದ್ದರು.

ಜ್ಯೋತಿನಗರದ ಜನಸಂಪರ್ಕ ಸಭೆ ಮರು ನಿಗದಿ

ಮೈಸೂರು,ಜೂ.24– ಜ್ಯೋತಿನಗರ ಉಪವಿಭಾಗ ಕಛೇರಿಯಲ್ಲಿ ಜೂ.29 ರಂದು ನಡೆಸಲು ಉದ್ದೇಶಿಸಲಾಗಿದ್ದ 1ನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಆಡಳಿತಾತ್ಮಕ ಕಾರಣಗಳಿಂದ ಜೂ.25ರಂದು ಬೆಳಗ್ಗೆ 11 ಗಂಟೆಗೆ ಮರು ನಿಗದಿ ಮಾಡಲಾಗಿದೆ. ಆದುದರಿಂದ ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಜ್ಯೋತಿನಗರ ಉಪವಿಭಾಗದಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

ಮೈಸೂರು ಮಹಾನಗರ ಯೋಜನೆಯಲ್ಲಿ ನೀಲಿ–ಹಸಿರು ವಲಯ ರಕ್ಷಣೆಗೆ ಆದ್ಯತೆ ಅವಶ್ಯ

ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಮತ

ಮೈಸೂರು,ಜೂ.24(ಎಂಟಿವೈ)– ಹಸಿರು ವಲಯದ ಬಲವರ್ಧನೆ ಹಾಗೂ ಪಾದಚಾರಿ ಸ್ನೇಹಿ ಮಾರ್ಗ ಅಭಿವೃದ್ಧಿ 'ಮೈಸೂರು ಮಹಾ ನಗರ ಯೋಜನೆ'ಯಲ್ಲಿ ಅತ್ಯಗತ್ಯ ಮಾನದಂಡವಾಗಿದೆ ಎಂದು ಪ್ರಾದೇಶಿಕ ಆಯುಕ್ತ, ಮೈಸೂರು ನಗರಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿಶ್ವವಿದ್ಯಾಲಯದ ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ನಗರ ಪ್ರದೇಶಗಳಲ್ಲಿ ಬ್ಲೂ–ಗ್ರೀನ್ ನೆಟ್‌ವರ್ಕ್ ಸುಧಾರಿಸುವ ತಂತ್ರಗಳು' ಕುರಿತ ಕಾರ್ಯಾಗಾರಕ್ಕೆ ಪ್ರಾದೇಶಿಕ ಆಯುಕ್ತ, ಮೈಸೂರು ಮಹಾನಗರಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಚಾಲನೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯದ ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ನಗರ ಪ್ರದೇಶಗಳಲ್ಲಿ ಬ್ಲೂ–ಗ್ರೀನ್ ನೆಟ್‌ವರ್ಕ್ ಸುಧಾರಿಸುವ ತಂತ್ರಗಳು' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೀಲಿ, ಹಸಿರು ವಲಯದ ಉಳಿವಿನೊಂದಿಗೆ ನಗರಗಳನ್ನು ಸುಸ್ಥಿರವಾಗಿಸುವ ಚಿಂತನೆಯು ಜನರ ವೈಯಕ್ತಿಕ ನಡವಳಿಕೆ ಭಾಗವಾಗಬೇಕು. ಬ್ಲೂ– (ನೀರು) ಮತ್ತು ಗ್ರೀನ್–(ಹಸಿರು), ಈ ಎರಡು ಮೂಲಗಳು ನಗರದ ಬೆಳವಣಿಗೆಯಿಂದ ಅಪಾಯ ಎದುರಿಸುತ್ತಿವೆ. ಮೈಸೂರು ಈಗ ತ್ವರಿತ ವಿಸ್ತರಣೆ, ಸಾರಿಗೆ ಒತ್ತಡ, ಉದಯೋನ್ಮುಖ ಸವಾಲುಗಳಿಗೆ ಸಾಕ್ಷಿಯಾಗುತ್ತಿದೆ. ಹಾಗಾಗಿ ಭವಿಷ್ಯ ಯೋಜನೆಯು ನೈಸರ್ಗಿಕ ವ್ಯವಸ್ಥೆಗಳನ್ನು ಸಂಯೋಜಿಸುವಂತಹ ತಂತ್ರ ಹೊಂದಿರಬೇಕು ಎಂದರು.

ನಗರಗಳು ಆರ್ಥಿಕ ಬೆಳವಣಿಗೆಯ ಎಂಜಿನ್‌ಗಳಾಗಿದ್ದು, ಇದನ್ನು ರೂಪಿಸುವಲ್ಲಿ ವೈಜ್ಞಾನಿಕ, ಹವಾಮಾನ ಪ್ರಜ್ಞೆಯ ಯೋಜನೆ ಮುಖ್ಯ. ಮೈಸೂರು ನಗರ ಪಾಲಿಕೆಯು ಸೌರ ಫಲಕಗಳ ಅಳವಡಿಕೆ, ತ್ಯಾಜ್ಯ ನಿರ್ವಹಣಾ ವ್ಯವಸ್ಥೆ, ಜೈವಿಕ ಅನಿಲ ಘಟಕಗಳು, ಮಳೆ ನೀರು ಕೊಯ್ಲು ಸೌಲಭ್ಯಗಳ ಅಳವಡಿಕೆಗೆ ಪ್ರೋತ್ಸಾಹಿಸುತ್ತಿದೆ ಎಂದು ತಿಳಿಸಿದರು.

ತ್ಯಾಜ್ಯದಿಂದ ಇಂಧನ: ಶೂನ್ಯ ತ್ಯಾಜ್ಯ ಕಾರ್ಯಕ್ರಮದ ಮೂಲಕ 'ಹಸಿರು ವಿವಾಹ'ಗಳನ್ನು ಉತ್ತೇಜಿಸಲಾಗುತ್ತಿದೆ. ಇದಲ್ಲದೆ, ಪಾಲಿಕೆಯು ತ್ಯಾಜ್ಯದಿಂದ ಇಂಧನ ಉತ್ಪಾದಿಸಲು ಸುಮಾರು ಏಳು ಎಕರೆ ಭೂಮಿಯನ್ನು ಗುರುತಿಸಿ ಯೋಜನೆ ಆರಂಭಿಸುತ್ತಿದೆ. ನೀಲಿ–ಹಸಿರು ಕಾರಿಡಾರ್‌ಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಜನರನ್ನು ಪ್ರೋತ್ಸಾಹಿಸಲು 'ಹಸಿರು ಟ್ಯಾಗ್' ಕ್ರಮ ಜಾರಿಗೆ ತಂದಿದ್ದು, 33 ಅರ್ಜಿಗಳು ಬಂದಿವೆ ಎಂದರು.

ಕಾರ್ಯಾಗಾರಕ್ಕೆ ಇನ್ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನರ್ಸ್ ಇಂಡಿಯಾ (ಐಟಿಪಿಐ) ಪ್ರಾದೇಶಿಕ ಚಾಪ್ಟರ್ ಸಹಯೋಗ ನೀಡಿತ್ತು. ಐಟಿಪಿಐ ಮೈಸೂರು ಕೇಂದ್ರ ಸಂಚಾಲಕ ಬಿ.ಶಂಕರ್, ಶಾಲೆಯ ನಿರ್ದೇಶಕ ಪ್ರೊ. ಹೆಚ್.ಎಸ್.ಕುಮಾರ್, ಪ್ರೊ.ಪ್ರಮೋದ್ ಎಂ.ಗವಾರಿ, ಎಸ್.ಬಿ. ಹೊನ್ನೂರ್, ಪ್ರೊ.ಹೆಚ್.ಎಸ್.ಕುಮಾರ, ಪ್ರೊ.ಹೆಚ್.ಎನ್.ನಾಗೇಂದ್ರ, ಪ್ರೊ.ಎನ್. ಶ್ರೀಧರನ್ ಇನ್ನಿತರರು ಉಪಸ್ಥಿತರಿದ್ದರು.

ನವಗ್ರಹ, ಪಂಚಮುಖಿ ಆಂಜನೇಯಸ್ವಾಮಿ ಪ್ರತಿಷ್ಠಾಪನೆ ಜೂ.27ಕ್ಕೆ



ಮೈಸೂರು, ಜೂ.24– ಮೈಸೂರಿನ ಗೋಕುಲಂ ಮೊದಲ ಹಂತದ 1ನೇ ಮುಖ್ಯ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಜೂ.27ರಂದು ಶನಿವಾರ ನೂತನ ನವಗ್ರಹ ಹಾಗೂ ಪಂಚಮುಖಿ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 5.30ರಿಂದ 6.15 ರೊಳಗೆ ಸಲ್ಲುವ ಶುಭ ಮಿಥುನ ಲಗ್ನ ಪುಷ್ಕರಾಂಶದಲ್ಲಿ ಕಳಾಕರ್ಷಣ ಹೋಮಾದಿಗಳು, ನಂತರ 11 ಗಂಟೆಗೆ ಪೂರ್ಣಾಹುತಿ ನಂತರ ವಿಗ್ರಹಗಳಿಗೆ ಕುಂಬಾಭಿಷೇಕ, ಮಧ್ಯಾಹ್ನ 12.30ಕ್ಕೆ ಅಭಿಜಿನ್ ಮುಹೂರ್ತದಲ್ಲಿ ಮಹಾ ಮಂಗಳಾರತಿ, ಪ್ರತಿಷ್ಠಿತ ದೇವರ ದರ್ಶನ ಭಾಗ್ಯ, ನಂತರ ತೀರ್ಥಪ್ರಸಾದ ವಿನಿಯೋಗ ವಿರುತ್ತದೆ. ದೇವರ ದರ್ಶನ ಭಾಗ್ಯಕ್ಕೆ ಆಗಮಿಸುವ ಭಕ್ತಾದಿಗಳಿಗೆ ಭೋಜನ ವ್ಯವಸ್ಥೆ ಏರ್ಪಡಿಸಲಾಗಿರುತ್ತದೆ. ಭಕ್ತಾದಿಗಳು ಪೂಜಾ ಸಮಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ದೇಶ – ವಿದೇಶ


ಹೊರಗಿದ್ದರೆ ಆಪತ್ತೆಂದು ದಾಂಧಲೆ ಮಾಡಿ ಜೈಲು ಸೇರಿದ ರೌಡಿಶೀಟರ್



ಹೈದರಾಬಾದ್: ಹೊರಗಿದ್ದರೆ ಜೀವಕ್ಕೆ ಆಪತ್ತು ಎಂಬ ಭಯದಿಂದ ರೌಡಿಶೀಟರ್, ಬೇಕಂತಲೇ ಹೋಟೆಲ್‌ನಲ್ಲಿ ದಾಂಧಲೆ ಮಾಡಿ ಜೈಲು ಸೇರಿರುವ ಘಟನೆ ಹೈದರಾಬಾದ್‌ನಲ್ಲಿ ವರದಿಯಾಗಿದೆ.


ಅಗಪುರ ಪ್ರದೇಶದ ರೌಡಿ ಶೀಟರ್ ಶೇಖ್ ಅಸ್ಲಾಂ ಇತ್ತೀಚೆಗೆ ತನ್ನ ವಿರೋಧಿಗಳಿಂದ ಜೀವಾಪಾಯವಿದೆ ಎಂದು ತೀವ್ರ ಭಯಭೀತನಾಗಿದ್ದ. ಹೊರ ಹೋದರೆ ಯಾವುದೇ ಸಮಯದಲ್ಲಿ ತನ್ನ ಮೇಲೆ ದಾಳಿ ಮಾಡಬಹುದೆಂದು ಜೈಲಿನಲ್ಲಿರುವುದೇ ಸುರಕ್ಷಿತ ಎಂದು ನಿರ್ಧರಿಸಿ, ಕಳೆದ ವಾರದಿಂದ ಸ್ಥಳೀಯ ಪೊಲೀಸ್ ಠಾಣೆಗೆ ತೆರಳಿ ತನ್ನನ್ನು ಜೈಲಿಗೆ ಕಳುಹಿಸುವಂತೆ ಕೇಳುತ್ತಿದ್ದ. ಆದರೆ, ಯಾವುದೇ ಅಪರಾಧ ಮಾಡದವರನ್ನು ಬಂಧಿಸಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಪೊಲೀಸರು ಆತನನ್ನು ವಾಪಸ್ ಕಳುಹಿಸಿದ್ದರು. ಹೇಗಾದರೂ ಜೈಲು ಸೇರಬೇಕೆಂದು ಅಸ್ಲಾಂ, ಮಂಗಳವಾರ ಸಂಜೆ ಅಗಪುರದ ಚೆರ್ಕಂಡಿಲ್ ಪ್ರದೇಶದಲ್ಲಿರುವ ಕೇಂದ್ರ ಹೋಟೆಲ್ ಮತ್ತು ಬೇಕರಿಗೆ ನುಗ್ಗಿ, ಉದ್ದೇಶಪೂರ್ವಕವಾಗಿ ಅಲ್ಲಿನ ಸಿಬ್ಬಂದಿಯೊಂದಿಗೆ ಜಗಳವಾಡಿ, ಅಡುಗೆ ಪಾತ್ರೆಗಳು ಮತ್ತು ಗ್ಯಾಸ್ ಸಿಲಿಂಡರ್‌ಗಳನ್ನು ರಸ್ತೆಗೆ ಎಸೆದು ದಾಂಧಲೆ ನಡೆಸಿದ್ದ. ಪೊಲೀಸರು ಅಸ್ಲಾಂನನ್ನು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ. ಈತನ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ 13 ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ ಎನ್ನಲಾಗಿದೆ.

ನೀರವ್ ಮೋದಿಗೆ ಲಂಡನ್ ಕೋರ್ಟ್‌ನಿಂದ ಆಘಾತ; ಬ್ಯಾಂಕ್ ಆಫ್ ಇಂಡಿಯಾ ಪರ ತೀರ್ಪು



ಲಂಡನ್: ಕೋಟ್ಯಾಂತರ ರೂಪಾಯಿ ಬ್ಯಾಂಕ್ ಹಗರಣ ನಡೆಸಿ ಭಾರತದಿಂದ ಪರಾರಿಯಾಗಿರುವ ವಜ್ರದ ವ್ಯಾಪಾರಿ ನೀರವ್ ಮೋದಿಗೆ ಲಂಡನ್ ನ್ಯಾಯಾಲಯದಿಂದ ದೊಡ್ಡ ಆಘಾತ ಎದುರಾಗಿದ್ದು, ಬ್ಯಾಂಕ್ ಆಫ್ ಇಂಡಿಯಾ ದಾಖಲಿಸಿದ್ದ ಸಾಲ ವಸೂಲಾತಿ ಪ್ರಕರಣದಲ್ಲಿ ಬ್ಯಾಂಕ್ ಪರವಾಗಿ ತೀರ್ಪು ಬಂದಿದೆ. ನೀರವ್ ಮೋದಿ ಬ್ಯಾಂಕಿಗೆ ಬರೋಬ್ಬರಿ 10.7 ಮಿಲಿಯನ್ ಡಾಲರ್(100 ಕೋಟಿ ರೂಪಾಯಿಗೂ ಹೆಚ್ಚು) ಹಣವನ್ನು ಮರುಪಾವತಿಸಬೇಕು ಎಂದು ನ್ಯಾಯಾಲಯ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಜುಲೈ 2012ರಲ್ಲಿ, ಬ್ಯಾಂಕ್ ಆಫ್ ಇಂಡಿಯಾ ನೀರವ್ ಮೋದಿಯ ಫೈರ್‌ಸ್ಟಾರ್ ಗ್ರೂಪ್‌ನ ದುಬೈ ಮೂಲದ ಕಂಪನಿಗೆ ಭಾರಿ ಮೊತ್ತದ ಸಾಲ ನೀಡಿತ್ತು. ಆಗಸ್ಟ್ 2013ರಲ್ಲಿ ನೀರವ್ ಮೋದಿ, ಒಂದು ವೇಳೆ ಕಂಪನಿ ಸಾಲ ತೀರಿಸದಿದ್ದರೆ ತನ್ನ ವೈಯಕ್ತಿಕ ಆಸ್ತಿಯಿಂದ ಸಾಲ ಮರುಪಾವತಿಸುವುದಾಗಿ ವೈಯಕ್ತಿಕ ಗ್ಯಾರಂಟಿ ದಾಖಲೆಗೆ ಸಹಿ ಹಾಕಿದ್ದರು. 2018 ರಲ್ಲಿ ಹಗರಣ ಬಯಲಾದಾಗ ಬ್ಯಾಂಕ್ ತನ್ನ ಹಣವನ್ನು ವಾಪಸ್ ಕೇಳಿತ್ತು. ಸದ್ಯ ಲಂಡನ್ ಜೈಲಿನಲ್ಲಿರುವ ನೀರವ್ ಮೋದಿ, ಪ್ರಕರಣದಿಂದ ತಪ್ಪಿಸಿಕೊಳ್ಳಲು ಹೂಡಿದ ಮೂರು ತಂತ್ರಗಳನ್ನು ನ್ಯಾಯಮೂರ್ತಿಗಳು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ.

ಅಧಿವೇಶನ ಸಿನಿಮಾ ಥಿಯೇಟರ್ ಅಲ್ಲ; ಸಿಎಂ ವಿಜಯ್‌ಗೆ ವಿಪಕ್ಷಗಳು ಟಾಂಗ್



ಚೆನ್ನೈ: ತಮಿಳುನಾಡು ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ, ರಾಜ್ಯಪಾಲರ ಭಾಷಣಕ್ಕೆ ಧನ್ಯವಾದ ಸಲ್ಲಿಸಿದ ಸಿಎಂ ಜೋಸೆಫ್ ವಿಜಯ್ ಕೊನೆಯಲ್ಲಿ ಮಾಡಿರುವ ಕೈಸನ್ನೆ ಬಗ್ಗೆ ವಿಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಜೋಸೆಫ್ ವಿಜಯ್ ಅಧಿವೇಶನವನ್ನು ಸಿನಿಮಾ ಥಿಯೇಟರ್ ಮಾಡಿಕೊಂಡಿದ್ದಾರೆ. ಬೇಕಾಬಿಟ್ಟಿ ಡೈಲಾಗ್ ಹೊಡೆಯುವುದು, ಅಭಿನಯ ಮಾಡುವುದನ್ನು ಈಗ ನಿಲ್ಲಿಸಬೇಕು. ಇದರಿಂದ ಕಲಾಪದ ಸಮಯ ವ್ಯರ್ಥವಾಗುತ್ತದೆ ಹಾಗೂ ಜನರ ಕಷ್ಟಗಳ ಪರಿಹಾರ ವಿಳಂಬವಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ವಿಜಯ್ ಸಂಸತ್ತಿನಲ್ಲಿ ತೋರಿದ ವರ್ತನೆ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಇನ್ನು ಇದಕ್ಕೆ ರಾಜ್ಯಪಾಲರು ಹೇಗೆ ಅನುಮತಿ ನೀಡಿದರು. ವಿಜಯ್ ಅವರ ಭಾಷಣ ಸಿಎಂನ ಮಾತಿಗಿಂತ ಸಿನಿಮಾ ಶೂಟಿಂಗ್ ಎನ್ನಿಸುತ್ತದೆ ಎಂದು ಡಿಎಂಕೆ ಪಕ್ಷ ಆಕ್ರೋಶವನ್ನು ಹೊರಹಾಕಿದೆ. ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಡಿಎಂಕೆ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ನಡೆಸಿದ್ದ ಸೀಟ್ ಹಂಚಿಕೆ ಸಭೆ ಮುಗಿಸಿ ಹೊರಬಂದ ಅಂದಿನ ಸಿಎಂ ಎಂ.ಕೆ.ಸ್ಟಾಲಿನ್ 'ಎಲ್ಲಾ ಫಿನಿಶ್' ಎಂಬರ್ಥದಲ್ಲಿ ಮಾಡಿದ್ದ ಕೈಸನ್ನೆಯನ್ನೇ ವಿಜಯ್ ಅನುಕರಣೆ ಮಾಡಿ ಕೌಂಟರ್ ಕೊಟ್ಟಿದ್ದಾರೆ ಎನ್ನುವುದು ರಾಜಕೀಯ ವಿಶ್ಲೇಷಣೆಯಾಗಿದೆ.


ಎಐ ಲಿಂಗಭೇದ, ಜನಾಂಗೀಯ ವಾದ ಕಲಿಯುತ್ತಿದೆ: ಯುಎನ್ ಎಚ್ಚರಿಕೆ



ವಾಷಿಂಗ್ಟನ್: ಕೃತಕ ಬುದ್ಧಿಮತ್ತೆ(ಎಐ) ಲಿಂಗಭೇದ ಮತ್ತು ಜನಾಂಗೀಯ ವಾದವನ್ನು ಕಲಿಯುತ್ತಿದೆ ಎಂದು ವಿಶ್ವಸಂಸ್ಥೆ(ಯುಎನ್) ಎಚ್ಚರಿಸಿರುವುದಾಗಿ ವರದಿಯಾಗಿದೆ.

ಸಂಶೋಧಕರು 133 ಎಐ ವ್ಯವಸ್ಥೆಗಳನ್ನು ಅಧ್ಯಯನ ಮಾಡಿದ್ದು, ಸುಮಾರು ಅರ್ಧದಷ್ಟು ಅಂದರೆ ಶೇ.44ರಷ್ಟು ಎಐ ಮಾಡ್ಯೂಲ್‌ಗಳು ಲಿಂಗ ಪಕ್ಷಪಾತವನ್ನು ತೋರಿವೆ. ಇವು ಮಹಿಳೆಯರನ್ನು ಕೀಳಾಗಿ ಕಾಣುವ ಪುರುಷ ಅಹಂಕಾರವನ್ನು ಅಳವಡಿಸಿಕೊಂಡಿವೆ ಎನ್ನಲಾಗಿದೆ. ದೊಡ್ಡ ಭಾಷಾ ಮಾದರಿಗಳು ಪುರುಷರನ್ನು ವ್ಯವಹಾರ, ನಾಯಕತ್ವ ಮತ್ತು ವೃತ್ತಿಜೀವನದ ಯಶಸ್ಸಿಗೆ ಸಂಪರ್ಕಿಸುವಾಗ, ಮನೆ, ಕುಟುಂಬ ಮತ್ತು ಮಕ್ಕಳ ಆರೈಕೆಯೊಂದಿಗೆ ಮಹಿಳೆಯರನ್ನು ಪದೇ ಪದೇ ಸಂಯೋಜಿಸಿವೆ. ಕೆಲವು ಸಂದರ್ಭಗಳಲ್ಲಿ ಎಐ ವ್ಯವಸ್ಥೆಗಳು ಪುರುಷರಿಗೆ ಅಧೀನರಾಗಿ ಚಿತ್ರಿಸುವ ಪ್ರತಿಕ್ರಿಯೆಗಳನ್ನು ಸೃಷ್ಟಿಸಿವೆ ಎಂದು ಯುಎನ್ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ. ಇಮೇಲ್‌ಗಳನ್ನು ಬರೆಯಲು, ಪ್ರಸ್ತುತಿಗಳನ್ನು ರಚಿಸಲು, ವಿಷಯವನ್ನು ರಚಿಸಲು ಮತ್ತು ಜನರ ಪ್ರಶ್ನೆಗಳಿಗೆ ಉತ್ತರಿಸಲು ಎಐ ಹೆಚ್ಚಾಗಿ ಬಳಸಲ್ಪಡುತ್ತಿರುವುದರಿಂದ, ತಾರತಮ್ಯದ ಅಲ್ಗಾರಿದಮ್‌ಗಳ ಮೂಲಕ ಅಸಮಾನತೆಗಳನ್ನು ಬಲಪಡಿಸಲಾಗುತ್ತಿದೆ ಎಂದು ವಿಶ್ವಸಂಸ್ಥೆ ಗಮನ ಸೆಳೆದಿದೆ.

ಡಾಬಾ, ಹೆದ್ದಾರಿಗಳ ಕೆಲ ಚಹಾ ಅಂಗಡಿಗಳಲ್ಲಿ ದೋಡಾ ಬಳಕೆ!



ಜಾರ್ಖಂಡ್: ದೀರ್ಘಕಾಲದ ಪ್ರಯಾಣದ ಬಳಲಿಕೆಗೆ ಚಾಲಕರು ಸೇವಿಸುವ ಚಹಾದಲ್ಲಿ ಗಸಗಸೆ ಸಿಪ್ಪೆ ಅಥವಾ ದೋಡಾವನ್ನು ಬೆರೆಸಲಾಗುತ್ತಿದೆ ಎಂಬ ಆತಂಕಕಾರಿ ಪ್ರವೃತ್ತಿ ಬೆಳಕಿಗೆ ಜಾರ್ಖಂಡ್ ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ಪಲಮು ಜಿಲ್ಲೆಯಲ್ಲಿ ನಡೆದ ಈ ಕ್ರಮವು ಜಾರ್ಖಂಡ್‌ನಿಂದ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ದೆಹಲಿ ಮತ್ತು ರಾಜಸ್ಥಾನದವರೆಗೆ ವ್ಯಾಪಿಸಿರುವ ಉಪ ಉತ್ಪನ್ನವನ್ನು ಮಾದಕ ವಸ್ತುವಾಗಿ ಬಳಕೆ ಮಾಡುತ್ತಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಢಾಬಾ ಅಥವಾ ಹೆದ್ದಾರಿ ತಿನಿಸುಗಳಲ್ಲಿ ನೀಡಲಾಗುವ ಚಹಾದ ಮೇಲೆ ಹೆಚ್ಚಿನ ನಿಗಾ ಇಡಲಾಗುತ್ತಿದೆ. ಗಸಗಸೆ ಸಿಪ್ಪೆಯನ್ನು ಒಣಗಿಸಿ ಸಂಗ್ರಹಿಸಿ, ನಂತರ ಅದನ್ನು ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್‌ಗೆ ಸಾಗಿಸುತ್ತಾರೆ. ಇದನ್ನು ಪುಡಿ ಮಾಡಿ ದೇಶೀಯ ಬಳಕೆಗೆ ಹಾಗೂ ಹೆದ್ದಾರಿಯಲ್ಲಿ ಚಹಾ ಅಂಗಡಿಗಳಲ್ಲಿ ಬಳಸಲು ಮಾರಾಟ ಮಾಡಲಾಗುತ್ತದೆ. ಜಾರ್ಖಂಡ್‌ನಲ್ಲಿ ಪ್ರತಿ ಕೆಜಿಗೆ 1,500 ರೂ.ಗೆ ಖರೀದಿಸಿ ನಂತರ ಯುಪಿ, ಹರಿಯಾಣ ಮತ್ತು ಪಂಜಾಬ್‌ನಲ್ಲಿ ಪ್ರತಿ ಕೆಜಿಗೆ 7ರಿಂದ 8 ಸಾವಿರಕ್ಕೆ ಮಾರಾಟ ಮಾಡಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ದೋಡಾವನ್ನು ಚಹಾ ಅಥವಾ ಮಸಾಲೆಯಂತೆ ಬಳಸುವುದು ಅಪಾಯಕಾರಿ. ಒಮ್ಮೆ ಇದರ ವ್ಯಸನಿಯಾದರೆ ಅಭ್ಯಾಸವನ್ನು ಬಿಡುವುದು ದೊಡ್ಡ ಸವಾಲು ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಮಿತ್ರ ಗುರುವಾರ 25 ಜೂನ್ 2026

ಮನೆಯ ಅಂಗಳಕ್ಕೂ ದಾಳಿಯಿಡುತ್ತಿರುವ ಕಾಡಾನೆ



ಕಾಫಿ ತೋಟಗಳಿಂದ ಮನೆಯ ಅಂಗಳಕ್ಕೂ ದಾಳಿಯಿಡುತ್ತಿರುವ ಕಾಡಾನೆ

ಮಡಿಕೇರಿ, ಜೂ.24–ಕಾಫಿ ತೋಟಗಳ ಒಳಗಿನಿಂದ ಮನೆಯ ಅಂಗಳಕ್ಕೆ ಕಾಡಾನೆಗಳು ಬರುತ್ತಿರುವ ಘಟನೆಗಳು ಇದೀಗ ಜಿಲ್ಲೆಯ ಕೆಲ ಭಾಗಗಳಿಂದ ವರದಿಯಾಗುತ್ತಿದೆ. 2 ದಿನಗಳ ಹಿಂದೆ ನಾಪೋಕ್ಲು ಗ್ರಾಮದ ನಿವಾಸಿ ಬಿದ್ದಂಡ ಹರೀಶ್ ಎಂಬವರ ಮನೆಯ ಅಂಗಳಕ್ಕೂ ಕಾಡಾನೆ ನಾಯಿಗಳನ್ನು ಅಟ್ಟಿಸಿಕೊಂಡು ಬಂದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಹರೀಶ್ ತಮ್ಮ ಕಾಫಿ ತೋಟದ ನಡುವೆ ಮನೆ ಹೊಂದಿದ್ದು, ಎರಡು ಡ್ಯಾಷ್ ಹೌಂಡ್ ತಳಿಯ ಶ್ವಾನಗಳನ್ನು ಸಾಕುತ್ತಿದ್ದಾರೆ. ಜೂ. 22ರ ಸಂಜೆ 5 ಗಂಟೆ ಸಮಯದಲ್ಲಿ ಕಾಡಾನೆಯೊಂದು ಕಾಫಿ ತೋಟದಲ್ಲಿ ಅಲೆದಾಡುತ್ತಿತ್ತು. ಕಾಡಾನೆಯ ಸುಳಿವು ಅರಿತ ಶ್ವಾನಗಳು ಕಾಫಿ ತೋಟದ ಕಡೆ ತೆರಳಿ ಬೊಗಳ ತೊಡಗಿವೆ. ಈ ವೇಳೆ ಕುಪಿತಗೊಂಡ ಕಾಡಾನೆ ಏಕಾಏಕಿ ಶ್ವಾನಗಳ ಮೇಲೆ ದಾಳಿ ನಡೆಸಲು ಮುಂದಾಗಿ ತೋಟದ ಒಳಗಿನಿಂದ ಹೊರ ಬಂದು ನಾಯಿಗಳನ್ನು ಅಟ್ಟಾಡಿಸಿದೆ. ಕುಳ್ಳ ತಳಿಯ ಡ್ಯಾಷ್ ಹೌಂಡ್ ಶ್ವಾನಗಳು ಕಾಡಾನೆಯ ಕಾಲಿನ ಅಡಿಯಿಂದ ಕೂದಲು ಎಳೆಯ ಅಂತರದಲ್ಲಿ ತಪ್ಪಿಸಿಕೊಂಡು ಅಪಾಯ ದಿಂದ ಪಾರಾಗಿವೆ. ಬಳಿಕ ಮನೆಯಿಂದ ಹೊರ ಬಂದ ಹರೀಶ್ ಅವರು ಬೊಬ್ಬಿಟ್ಟು ಕಾಡಾನೆಯನ್ನು ಓಡಿಸಿದ್ದಾರೆ.

ಈ ಎಲ್ಲಾ ದೃಶ್ಯಗಳು ಅವರ ಮನೆಯ ಮುಂಭಾಗದಲ್ಲಿದ್ದ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿವೆ. ಕಾಫಿ ತೋಟಗಳ ಒಳಗೆ ಕಾಡಾನೆಗಳ ಸಂಚಾರದಿಂದ ಗ್ರಾಮಸ್ಥರು ಈಗಾಗಲೇ ಭೀತಿಗೆ ಒಳಗಾಗಿದ್ದಾರೆ. ಈ ಭಯದ ಪರಿಸ್ಥಿತಿಯ ನಡುವೆಯೇ ಇದೀಗ ಕಾಡಾನೆ ಮನೆಯ ಅಂಗಳಕ್ಕೂ ಲಗ್ಗೆ ಇಡುತ್ತಿರುವುದು ಮನೆ ಮಂದಿಯನ್ನು ಆತಂಕಕ್ಕೆ ದೂಡಿದೆ. ಅರಣ್ಯ ಇಲಾಖೆ ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಜನ ಜಾಗೃತಿ ಜನಾಂದೋಲನಕ್ಕೆ ಹಿಂದೂ ಮಲೆಯಾಳಿ ಸಮಾಜ ಬೆಂಬಲ

ಮಡಿಕೇರಿ, ಜೂ.24–ಕುಶಾಲನಗರದಲ್ಲಿ ನಡೆದಿರುವ ಲವ್ ಜಿಹಾದ್ ಮತ್ತು ಮತಾಂತರ ಪ್ರಕರಣಗಳನ್ನು ಕೊಡಗು ಹಿಂದೂ ಮಲೆಯಾಳಿ ಸಮಾಜ ತೀವ್ರವಾಗಿ ಖಂಡಿಸಿದ್ದು, ಹಿಂದೂ ಸುರಕ್ಷಾ ಸಮಿತಿಯಿಂದ ಜೂ.30 ರಂದು ಕುಶಾಲನಗರದಲ್ಲಿ ಹಮ್ಮಿಕೊಳ್ಳಲಾಗಿರುವ ಬೃಹತ್ ಜನ ಜಾಗೃತಿ ಜನಾಂದೋಲನಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದೆ.



ಹಿಂದೂ ಮಲೆಯಾಳಿ ಸಮಾಜದ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ನಿಸರ್ಗಧಾಮದ ವಾಣಿಜ್ಯ ಮಳಿಗೆಯೊಂದರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಿಂದೂ ವಿವಾಹಿತ ಮಹಿಳೆ ಮತ್ತು ಆಕೆಯ 9 ವರ್ಷದ ಮಗನನ್ನು ಬಲವಂತವಾಗಿ ಕೇರಳಕ್ಕೆ ಕರೆದೊಯ್ದು ಮತಾಂತರ ಮಾಡಿದ ಪ್ರಕರಣ ನಡೆದಿದೆ. ಇದನ್ನು ಹಿಂದೂ ಮಲೆಯಾಳಿ ಸಮಾಜ ತೀವ್ರವಾಗಿ ಖಂಡಿಸುತ್ತದೆ ಎಂದು ಸಮಾಜದ ಜಿಲ್ಲಾಧ್ಯಕ್ಷ ವಿ.ಎಂ. ವಿಜಯನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಪ್ರಾಪ್ತ ಬಾಲಕನಿಗೆ ಕಾನೂನು ಬಾಹಿರವಾಗಿ ಸುನ್ನತ್ ಮಾಡಿಸಿರುವ ಕ್ರಮ ಹಿಂಸಾತ್ಮಕವಾಗಿದೆ. ಈ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಪೋಕ್ಸೋ ಕಾಯಿದೆ ಅಡಿ ಯಲ್ಲಿ ಪ್ರಕರಣ ದಾಖಲಿಸಬೇಕು. ಘಟನೆ ನಡೆದ ಸ್ಥಳವನ್ನು ಪೊಲೀಸರು ಮಹಜರು ನಡೆಸಬೇಕು ಎಂದು ಆಗ್ರಹಿಸಿದರು.

ವರ್ಷದ ಹಿಂದೆ ಸೋಮವಾರಪೇಟೆ ನಿವಾಸಿ ಬೆಳಗಾವ್‌ನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದ ಪ್ರತಿಭಾನ್ವಿತ ಯುವಕನೋರ್ವ ಹಬ್ಬಕ್ಕೆ ಊರಿಗೆ ಬಂದು ಮರಳಿ ಬೆಳಗಾವಿಗೆ ತೆರಳಿದವನು ನಿಗೂಢವಾಗಿ ನಾಪತ್ತೆಯಾಗಿದ್ದಾನೆ. ಈ ಕುರಿತು ರಾಜ್ಯದ ಪೊಲೀಸ್ ಉನ್ನತಾಧಿಕಾರಿಗಳಿಗೂ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆ ಯುವಕ ಇಂದಿಗೂ ಪತ್ತೆಯಾಗಿಲ್ಲ. ಇಂತಹ ಹಿಂದೂ ಸಮಾಜದ ಮಕ್ಕಳನ್ನು ಬಳಸಿಕೊಂಡು ಉಗ್ರವಾದ ಚಟುವಟಿಕೆಗಳಿಗೆ ಬಳಸುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಕರಣಗಳನ್ನು ಎನ್‌ಐಎ ಮೂಲಕ ತನಿಖೆ ನಡೆಸಬೇಕು. ಮತಾಂತರ, ಲವ್ ಜಿಹಾದ್, ನಾಪತ್ತೆ ಪ್ರಕರಣಗಳ ಹಿಂದಿನ ಮೂಲಗಳ ಬಗ್ಗೆ ತನಿಖೆ ನಡೆಸುವ ಅಗತ್ಯವಿದೆ ಎಂದು ಒತ್ತಾಯಿಸಿದರು.

ಸಂಘದ ಉಪಾಧ್ಯಕ್ಷ ಟಿ.ಕೆ.ಸುಧೀರ್, 'ಪ್ರಮುಖರಾದ ಕೆ.ಆರ್.ವಾಸುದೇವ್, ಎನ್.ಸಿ. ಸುನೀಲ್, ಅಜೀಶ್‌ರವರಿದ್ದರು.

ಶಾಸಕರಿಂದ ಉದ್ಯಾನವನ ಉದ್ಘಾಟನೆ



ಕಾವೇರಿ ರೋಟರಿ ಉದ್ಯಾನವನ್ನು ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿದರು.

ಕುಶಾಲನಗರ: ರೋಟರಿ ಸಂಸ್ಥೆ ವತಿಯಿಂದ ನಿರ್ಮಿಸಲಾದ ನೂತನ ಕಾವೇರಿ ರೋಟರಿ ಉದ್ಯಾನವನ್ನು ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿದರು.

ರೋಟರಿ ಸುವರ್ಣ ಸಂಭ್ರಮದ ಅಂಗವಾಗಿ ಹಲವು ವೈವಿಧ್ಯಮಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಪೈಕಿ ಹಳೆಯ ಸೇತುವೆಯನ್ನು ಉದ್ಯಾನವನವನ್ನಾಗಿ ಪರಿವರ್ತಿಸುವ ಮೂಲಕ ಎಲ್ಲರ ಮನ ಆಕರ್ಷಣೆಗೊಳಿಸುವ ರೀತಿಯಲ್ಲಿ ಜನಮಾನಸದಲ್ಲಿ ನೆನಪಿನಲ್ಲಿ ಉಳಿಯುವಂತೆ ಮಾಡಿರುವುದು ಪ್ರಶಂಸನೀಯ ಎಂದರು. ಸಾರ್ವಜನಿಕರು ಇದನ್ನು ಒಳ್ಳೆಯ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದರು.

ರೋಟರಿ ಅಧ್ಯಕ್ಷ ಮನು ಪೆಮ್ಮಯ್ಯ ಮಾತನಾಡಿ, ಮೂಲೆಗುಂಪಾಗಿದ್ದ ಪುರಾತನ ಸೇತುವೆಯನ್ನು ಉದ್ಯಾನವನವಾಗಿ ಪರಿವರ್ತಿಸಿದ ಪರಿಯನ್ನು ವಿವರಿಸಿ, ಶಾಸಕರು, ದಾನಿಗಳ ಸಹಕಾರದಿಂದ ಒಂದು ಅತ್ಯುನ್ನತ ಯೋಜನೆ ರೂಪಿಸಿರುವುದು ಸಾರ್ಥಕತೆ ತಂದಿದೆ ಎಂದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ವಿ.ಪಿ. ಶಶಿಧರ್, ವಕೀಲರ ಸಂಘದ ಅಧ್ಯಕ್ಷ ನಾಗೇಂದ್ರ ಬಾಬು ಮಾತನಾಡಿದರು.

ಜಿಪಂ ಮಾಜಿ ಅಧ್ಯಕ್ಷ ಕೆ.ಪಿ. ಚಂದ್ರಕಲಾ, ಎಸ್‌ಎಲ್‌ಎನ್ ಸಂಸ್ಥೆಯ ಸಾತಪ್ಪನ್, ಪುರಸಭೆ ಮುಖ್ಯಾಧಿಕಾರಿ ಗಿರೀಶ್, ರೋಟರಿ ಸಂಸ್ಥೆ ಸಹಾಯಕ ಗವರ್ನರ್ ಉಲ್ಲಾಸ್ ಕೃಷ್ಣ, ಕಾರ್ಯದರ್ಶಿ ಹೆಚ್.ಪಿ. ಮಂಜುನಾಥ್, ಪದಾಧಿಕಾರಿಗಳು, ವಿವಿಧ ಸಂಘಸಂಸ್ಥೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಸಾವಯವ ಗೊಬ್ಬರ ಬಳಕೆಗೆ ಹೆಚ್ಚಿನ ಆದ್ಯತೆ ನೀಡಿ



ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿ ಡಾ. ಪ್ರಭಾಕರ್ ಮಾತನಾಡಿದರು.

ನಾಪೋಕ್ಲು, ಜೂ.24 (ದುಗ್ಗಳ)–ರೈತರು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ಸಾವಯವ ಗೊಬ್ಬರಕ್ಕೆ ಹೆಚ್ಚಿನ ಆದ್ಯತೆ ನೀಡುವುದರ ಮೂಲಕ ಹೆಚ್ಚಿನ ಇಳುವರಿ ಪಡೆಯಬೇಕು ಎಂದು ಗೋಣಿಕೊಪ್ಪಲು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಕೆ.ವಿ ಪ್ರಭಾಕರ್ ತಿಳಿಸಿದ್ದಾರೆ.

ಇಲ್ಲಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಬುಧವಾರ ಕೃಷಿ ಇಲಾಖೆ ವತಿಯಿಂದ ಬೀಜೋಪಚಾರ ಆಂದೋಲನ ಮತ್ತು ಸುರಕ್ಷಿತ ಕೀಟನಾಶಕ ಬಳಕೆ ತರಬೇತಿಯಲ್ಲಿ ಮಾತನಾಡಿದ ಅವರು, ರಾಸಾಯನಿಕ ಗೊಬ್ಬರದ ಬೆಲೆ ದಿನದಿಂದ ದಿನಕ್ಕೆ ಏರುತ್ತಿದೆ. ಅದ್ದರಿಂದ ರೈತರು ಈ ಗೊಬ್ಬರಗಳ ಬಳಕೆ ಕಡಿಮೆ ಮಾಡಿ ಸಾವಯವ ಗೊಬ್ಬರಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಎರೆಹುಳ ಗೊಬ್ಬರವನ್ನು ಗದ್ದೆಗೆ ನೀಡಬೇಕಾಗಿದೆ ಅವಲಂಬಿತ ಕೃಷಿಯನ್ನು ನಿಲ್ಲಿಸಿ ಸ್ವಾವಲಂಬಿತ ಕೃಷಿಗೆ ಒತ್ತು ನೀಡಬೇಕಾಗಿದೆ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದ್ದು ರೈತರು ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಅಪ್ಪಂಗಲದ ತೋಟಗಾರಿಕೆ ಜೀವಶಾಸ್ತ್ರ ವಿಜ್ಞಾನಿ ಡಾ. ಗಾಯತ್ರಿ ಮಾತನಾಡಿ, ಬೆಳೆಗಾರರಿಗೆ ತೋಟಗಾರಿಕಾ ಬೆಳೆಗಳಿಗೆ ತಗಲುವ ಕೀಟ ಬಾಧೆ ಹಾಗೂ ಔಷಧೋಪಚಾರ, ಗೊಬ್ಬರದ ಬಳಕೆ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿದರು. ಅಧ್ಯಕ್ಷತೆಯನ್ನು ಕೃಷಿಕ ಕುಲ್ಲೇಟಿರ ಅರುಣ್ ಬೇಬ ವಹಿಸಿದ್ದರು. ಕೃಷಿಕ ಮುಕ್ಕಾಟಿರ ಹರೀಶ್ ತರಬೇತಿಯನ್ನು ಉದ್ಘಾಟಿಸಿದರು.

ನಾಪೋಕ್ಲು ಹೋಬಳಿ ವ್ಯಾಪ್ತಿಯ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಕರಡ ಗ್ರಾಮದಲ್ಲಿ ಮನೆ ಕುಸಿದು ಹಾನಿ

ನಾಪೋಕ್ಲು, ಜೂ.24–ಗಾಳಿ ಮಳೆಗೆ ಮನೆ ಕುಸಿದು ಬಿದ್ದರೂ ಕುಟುಂಬ ಸದಸ್ಯರು ಪ್ರಾಣಾಪಾಯದಿಂದ ಪಾರಾದ ಘಟನೆ ಕರಡ ಗ್ರಾಮದಲ್ಲಿ ಜರುಗಿದೆ.

ಕರಡ ಗ್ರಾಮದ ಕೇಮಲೆಕಾಡು ನಿವಾಸಿ ಎಚ್.ಎ. ಮಂಜುನಾಥ್ ವಾಸವಾಗಿದ್ದ ಮನೆ ಗಾಳಿ ಮಳೆಯಿಂದಾಗಿ ಮನೆಯ ಒಂದು ಭಾಗದ ಮಣ್ಣಿನ ಗೋಡೆ ಕುಸಿದು ಬಿದ್ದು ನಷ್ಟ ಸಂಭವಿಸಿದೆ. ಮನೆಯಲ್ಲಿದ್ದ ಮಂಜುನಾಥ್ ಹಾಗೂ ಅವರ ಪತ್ನಿ ಮಂಜುಳಾ ಮಗ ರಕ್ಷಿತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಂದಾಯ ಪರಿವೀಕ್ಷಕ ರವಿಕುಮಾರ್ ಗ್ರಾಮಲೆಕ್ಕಿಗರಾದ ಅಮೃತ ಸಿಬ್ಬಂದಿ ಸಂಜಯ್ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರು.


ರಸ್ತೆಯ ದುರವಸ್ಥೆ



ಪೊನ್ನಂಪೇಟೆ ಮಾರ್ಗವಾಗಿ ಕೇರಳಕ್ಕೆ ಹೋಗುವ ಸ್ಟೇಟ್ ಹೈವೇ ನಡಿಕೇರಿ ಬಳಿ ಎರಡು ತಿಂಗಳಿಂದ ಮೋರಿ ಕಾಮಗಾರಿ ನಡೆಯುತ್ತಿದ್ದು, ಪೂರ್ಣಗೊಳಿಸದೆ ವಾಹನಗಳು ಸಂಚಾರಕ್ಕೆ ತೊಂದರೆ ಆಗುತ್ತಿದ್ದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಮಾತ್ರ ನಿರ್ಲಕ್ಷ್ಯ ತಾಳಿದ್ದಾರೆ.

'ನೈಸರ್ಗಿಕ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಕೊಡಗಿನ ಬಾಲಕನ ಸಾಧನೆ

ವಿರಾಜಪೇಟೆ: ಬೆಂಗಳೂರು ಯೂನಿವರ್ಸಿಟಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ನೈಸರ್ಗಿಕ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಸಾಧಕ ಪ್ರಜ್ವಲ್ ವಿ.ಎಂ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದರು.



ಇಲ್ಲಿನ ಗಾಂಧಿ ನಗರ ನಿವಾಸಿಗಳಾದ ಪಿ.ಎಮಂಜುನಾಥ್ ಹಾಗೂ ಸಂತ ಅನ್ನಮ್ಮ ಕಾಲೇಜಿನ ಉಪನ್ಯಾಸಕಿ ಅಶ್ವಿನಿ ದಂಪತಿಯ ಪುತ್ರನಾಗಿರುವ ಇವರು ಸಂತ ಅನ್ನಮ್ಮ ಕಾಲೇಜಿನಲ್ಲಿ 2ನೇ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. 13 ರಿಂದ 19 ವರ್ಷ ವಯೋಮಾನದ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ತೆಲುಗರ ಬೀದಿಯ ರೀಶೆಪ್ ಫಿಟ್ನೆಸ್ ಜಿಮ್ ಮಾಲೀಕರು ಹಾಗೂ ತರಬೇತುದಾರರಾಗಿರುವ ಲಕ್ಷ್ಮೀಶ್ ಮತ್ತು ಮೈಸೂರಿನ ಅರ್ನಾಲ್ಡ್ ಫಿಟ್ನೆಸ್ ಸೆಂಟರ್ ತರಬೇತುದಾರ ರವಿ ಅವರು ಪ್ರಜ್ವಲ್‌ಗೆ ತರಬೇತಿ ನೀಡಿ ಮಾರ್ಗದರ್ಶನ ಮಾಡಿದ್ದರು.

ಸ್ಟೆರಾಯ್ಡ್ ಮುಕ್ತ, ಶುದ್ಧ ಆಹಾರ ಮತ್ತು ಕಠಿಣ ಪರಿಶ್ರಮದ ಮೂಲಕ ದೇಹದಾರ್ಢ್ಯ ಸಾಧಿಸುವ ನೈಸರ್ಗಿಕ ದೇಹದಾರ್ಢ್ಯ ಕ್ಷೇತ್ರದಲ್ಲಿ ಪಿಯುಸಿ ಓದುತ್ತಲೇ ಇಂತಹ ಅಂತರರಾಷ್ಟ್ರೀಯ ವೇದಿಕೆ ಏರಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯ ಪ್ರಜ್ವಲ್ ಅವರ ಸಾಧನೆಗೆ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಪೊಲೀಸರಿಂದ ಬೃಹತ್ ಜಾಗೃತಿ ಜಾಥಾ



ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಪೊಲೀಸರಿಂದ ಬೃಹತ್ ಜಾಗೃತಿ ಜಾಥಾ ನಡೆಸಿದರು.

ವಿರಾಜಪೇಟೆ: ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ಪೊಲೀಸ್ ಹಾಗೂ ಪಟ್ಟಣ ಪೊಲೀಸ್ ಠಾಣೆ ವತಿಯಿಂದ ನಗರದ ಮುಖ್ಯ ರಸ್ತೆಗಳಲ್ಲಿ ಬೃಹತ್ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ನಗರ ಠಾಣೆ ಅಧಿಕಾರಿ ಎಚ್.ಎಸ್. ಪ್ರಮೋದ್ ಕುಮಾರ್ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ದ್ವಿಚಕ್ರ ವಾಹನ ಸವಾರರು ಹಾಗೂ ನಗರದ ಆಟೋ ಚಾಲಕರು ಭಾಗವಹಿಸಿ, ಮಾದಕ ವಸ್ತುಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಜಾಥಾದಲ್ಲಿ ಪಾಲ್ಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ "ಮಾದಕದ್ರವ್ಯಗಳು ಕೇವಲ ಒಬ್ಬ ವ್ಯಕ್ತಿಯ ಜೀವನವನ್ನಷ್ಟೇ ಅಲ್ಲ, ಇಡೀ ಕುಟುಂಬ ಮತ್ತು ಸಮಾಜವನ್ನು ದುರ್ಬಲಗೊಳಿಸುತ್ತವೆ. ಮಾದಕ ವ್ಯಸನದ ಬಲೆಗೆ ಬೀಳದಂತೆ ಯುವಜನರು ಎಚ್ಚರ ವಹಿಸಬೇಕು. ನಿಮ್ಮ ಅಮೂಲ್ಯ ಸಮಯ ವನ್ನು ಕ್ರೀಡೆ, ಶಿಕ್ಷಣ ಮತ್ತು ಆರೋಗ್ಯಕರ ಹವ್ಯಾಸಗಳಿಗೆ ಮೀಸಲಿಡಿ. ಮಾದಕ ಮುಕ್ತ ಸಮಾಜ ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ" ಎಂದು ಕರೆ ನೀಡಿದರು.

ಜಿಲ್ಲಾ ಪೊಲೀಸ್ ಇಲಾಖೆಯು "ಮಾದಕ ಮುಕ್ತ ಕೊಡಗು" ಅಭಿಯಾನದ ಭಾಗವಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಾದಕ ವಸ್ತುಗಳ ಮಾರಾಟ, ಸಾಗಾಣಿಕೆ, ಬಳಕೆ ಕಂಡು ಬಂದಲ್ಲಿ ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಸೂಚಿಸಲಾಯಿತು.

ಸಂವಿಧಾನದ ಆಶಯದಂತೆ ಸಿದ್ದರಾಮಯ್ಯ ರಾಜೀನಾಮೆ

ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಅನಿಸಿಕೆ

ಚಾಮರಾಜನಗರ, ಜೂ.24–ಸಂವಿಧಾನದ ಆಶಯದಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ನುಡಿದಂತೆ ನಡೆದುಕೊಂಡರು ಎಂದು ಶಾಸಕ ಹೆಚ್.ಎಂ.ಗಣೇಶ ಪ್ರಸಾದ್ ಹೇಳಿದರು.

ತಾಲೂಕಿನ ಕೆರೆಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಅವರ ಕಂಚಿನ ಪುತ್ಥಳಿ ಅನಾವರಣ ಮತ್ತು 135ನೇ ಜಯಂತೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾ.ಪಂ, ತಾ.ಪಂ, ಜಿ.ಪಂ, ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ಹಿಂದು–ಮುಂದು ನೋಡುವ ಈ ಕಾಲಘಟ್ಟದಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್ ಹೇಳಿದ ತಕ್ಷಣವೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮೇರು ವ್ಯಕ್ತಿತ್ವವನ್ನು ಮೆರೆದರು ಎಂದು ಶ್ಲಾಘಿಸಿದರು.



ಕೆರೆಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಅವರ ಕಂಚಿನ ಪುತ್ಥಳಿಯನ್ನು ಶಾಸಕರಾದ ಹೆಚ್.ಎಂ.ಗಣೇಶಪ್ರಸಾದ್, ದರ್ಶನ್ ಧ್ರುವನಾರಾಯಣ್ ಅನಾವರಣ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನದ ಮೂಲಕ ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಒತ್ತು ನೀಡಿದರು. ಅವರ ಆಶಯದಂತೆ ಪ್ರತಿಯೊಬ್ಬರೂ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ದಾರಿ ತೋರಿಸುವಷ್ಟು ಕೆಲಸ ಮಾಡಬೇಕು ಎಂದರು.

ಸಾನಿಧ್ಯ ವಹಿಸಿದ ಮೈಸೂರಿನ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿ, ಇಡೀ ವಿಶ್ವವೇ ಅಂಬೇಡ್ಕರ್ ಅವರತ್ತ ತಿರುಗಿ ನೋಡುತ್ತಿದೆ. ಇಂತಹ ಸಂದರ್ಭಗಳಲ್ಲಿ ಕೆರೆಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಕಂಚಿನ ಪುತ್ಥಳಿ ಅನಾವರಣ ಮಾಡಿರುವುದು ತುಂಬಾ ಸಂತಸವಾಗಿದೆ. ಅಂಬೇಡ್ಕರ್ ಫ್ಲೆಕ್ಸ್, ಪುತ್ಥಳಿ ಹಾಕಬೇಡಿ ಎಂದು ಅವಮಾನಿಸುವವರು ಭಯೋತ್ಪಾದಕರು, ದೇಶ ದ್ರೋಹಿಗಳು ಎಂದರು.

ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು, ಜಿ.ಪಂ ಮಾಜಿ ಸದಸ್ಯ ನವೀನ್ ಕೆರೆಹಳ್ಳಿ, ಮಾತನಾಡಿದರು. ಜಿ.ಪಂ ಸದಸ್ಯ ಬೊಮ್ಮಾಯಿ, ರೇವಣ್ಣ, ತಾ.ಪಂ ಮಾಜಿ ಸದಸ್ಯ ಎಂ.ಸಿ.ರವಿಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಕೆರೆಹಳ್ಳಿ ರೇವಣ್ಣ, ಗೋಪಾಲ್ ಹೊರೆಯಾಲ, ನಿವೃತ್ತ ಶಿಕ್ಷಕ ಕೆ.ಎಂ.ಮಹದೇವಯ್ಯ, ಗುತ್ತಿಗೆದಾರ ಕೆ. ರೇವಣ್ಣ, ಗ್ರಾ.ಪಂ ಮಾಜಿ ಅಧ್ಯಕ್ಷ ರಾಜ ಕುಮಾರ, ಮಹಾ ಒಕ್ಕೂಟದ ಅಧ್ಯಕ್ಷ ಆರ್.ಕೆಂಪರಾಜು, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್, ಗುತ್ತಿಗೆದಾರ ಸುಕುಮಾರ್, ಪಿಎಸಿಸಿ ಬ್ಯಾಂಕ್‌ನ ಇಓ ಆರ್. ರಾಜೇಂದ್ರ ಕುಮಾರ್, ಡಾ. ನಾಗೇಶ್, ಅಜಯ್ ಶಂಭು, ಕೆರೆಹಳ್ಳಿ ಮಹಾದೇವಸ್ವಾಮಿ, ಯಜಮಾನ ಗುರು ಮಲ್ಲೇಗೌಡ, ಮಲ್ಲೇಶ್, ಸಿದ್ದರಾಜು ನಾಯಕ, ಮಹಾದೇವಸ್ವಾಮಿ, ಮಂಡ್ಯ ಶಿವಣ್ಣ ಯಜಮಾನರಾದ ಶಿವಣ್ಣ, ರಾಮಚಂದ್ರ ಪಾಪಣ್ಣ ಬಸವರಾಜು, ಲಿಂಗರಾಜು, ಗುರುಸಿದ್ದಯ್ಯ, ನಾಗರಾಜು, ಮಹದೇವಸ್ವಾಮಿ, ನಾಗ ರಾಜು, ಶಂಕರ್, ರವಿಚಂದ್ರ, ಮಂಜು ಪ್ರಸಾದ್, ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ನ್ಯಾಯಾಲಯಕ್ಕೆ ಬಾಂಬ್ ಕರೆ; ಕೆಲಕಾಲ ಆತಂಕದ ವಾತಾವರಣ

ಚಾಮರಾಜನಗರ, ಜೂ.24–ಬಾಂಬ್ ಬೆದರಿಕೆಯ ಹುಸಿ ಕರೆಗಳು ಇತ್ತೀಚೆಗೆ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ನಿನ್ನೆ ಕೊಡಗಿನಲ್ಲಿ ಇಂಥ ಹುಸಿ ಬೆದರಿಕೆ ಘಟನೆ ನಡೆದ್ದರೆ, ಇಂದು ಚಾ.ನಗರದಲ್ಲಿ ನಡೆದಿದೆ.

ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಕೆಲ ಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು. ತಪಾಸಣೆ ಬಳಿಕ ಇದೊಂದು ಹುಸಿಬಾಂಬ್ ಬೆದರಿಕೆ ಎಂಬುದು ದೃಢವಾಯಿತು. ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಜಿಲ್ಲಾ ನ್ಯಾಯಾಲಯದ ಅಧಿಕೃತ ಇ-ಮೇಲ್ ಐಡಿಗೆ ಬುಧವಾರ ಸಂಜೆ 4 ಗಂಟೆಗೆ ಬಾಂಬ್ ಬೆದರಿಕೆ ಸಂಬಂಧಿಸಿದ ಇ-ಮೇಲ್ ಸಂದೇಶ ಬಂದಿದೆ.



ಬಾಂಬ್ ತಜ್ಞರ ತಂಡ ಶೋಧನಾ ಕಾರ್ಯದಲ್ಲಿ ನಿರತರಾಗಿರುವುದು.

ನ್ಯಾಯಾಲಯದ ಸಿಬ್ಬಂದಿ ನ್ಯಾಯಾಧೀಶರು ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸ್ ಇಲಾಖೆ, ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ತಂಡಗಳು ನ್ಯಾಯಾಲಯದ ಸಂಕೀರ್ಣದ ಒಳ ಹಾಗೂ ಹೊರಾಂಗಣದಲ್ಲಿ ಸಂಜೆ 6ರವರೆಗೆ ತೀವ್ರ ಶೋಧ ನಡೆಸಿತು. ಆದರೆ, ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ.

ಸುರಕ್ಷತೆಯ ದೃಷ್ಟಿಯಿಂದ ನ್ಯಾಯಾಲಯದ ಆವರಣಕ್ಕೆ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ, ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು.ಇದರಿಂದ ಕಾರ್ಯ ಕಲಾಪಗಳ ಮೇಲೂ ಪರಿಣಾಮ ಬೀರಿತು.

ಹೆಚ್ಚಿನ ಭದ್ರತೆಯನ್ನು ನಿಯೋಜಿಸಲು ಆಗ್ರಹ

ಸಾರ್ವಜನಿಕರಲ್ಲಿ ಭಯವನ್ನು ಉಂಟು ಮಾಡುವ ಉದ್ದೇಶದಿಂದ ಕಿಡಿಗೇಡಿಗಳು ಈ ರೀತಿ ಬೆದರಿಕೆಯನ್ನು ಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ನ್ಯಾಯಾಲಯಕ್ಕೆ ಹೆಚ್ಚಿನ ಭದ್ರತೆಯನ್ನು ನಿಯೋಜಿಸಬೇಕು. ಜನರಲ್ಲಿ ಉಂಟಾಗಿರುವ ಭಯ, ಆತಂಕವನ್ನು ಹೋಗಲಾಡಿಸಬೇಕು ಎಂದು ಜಿಲ್ಲಾ ವಕೀಲರ ಸಂಘದ ರಾಮಸಮುದ್ರ ಪುಟ್ಟಸ್ವಾಮಿ ಒತ್ತಾಯಿಸಿದರು.

ಉಚಿತ ಬ್ಯಾಗ್, ನೋಟ್‌ಬುಕ್, ವಾಟರ್ ಬಾಟಲ್ ವಿತರಣೆ



ಅರಳಿಕಟ್ಟೆ ಗ್ರಾಮದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್ ಮತ್ತು ನೋಟ್ ಬುಕ್ ವಿತರಿಸಲಾಯಿತು

ಬೇಗೂರು,ಜೂ.24–ಸಮೀಪದ ಅರಳಿ ಕಟ್ಟೆ ಗ್ರಾಮದ ಶ್ರೀ ಗಂಗಾಧರೇಶ್ವರ ಅನುದಾನಿತ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಬೆಂಗಳೂರಿನ ನೆರಳು ಶ್ಯಾಡೋ ಚಾರಿಟಿಬಲ್‌ಟ್ರಸ್ಟ್ ಬ್ಯಾಗ್ ನೋಟ್‌ಬುಕ್, ವಾಟರ್‌ಬಾಟಲ್ ಉಚಿತವಾಗಿ ವಿತರಿಸಿತು


ಸಂಸ್ಥೆಯ ಟ್ರಸ್ಟಿ ಹರಿಚರಣ್ ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ನೋಟ್ ಬುಕ್‌ಗಳನ್ನು ವಿತ್ತರಿಸಿ ಮಾತನಾಡಿ ಇಂದಿನ ಯುವ ಜನಾಂಗ ಹಾಗೂ ವಿದ್ಯಾರ್ಥಿಗಳು ಸಂಸ್ಕೃತಿ ಸಂಸ್ಕಾರವನ್ನು ಕಲಿಯಬೇಕು ತಂದೆ–ತಾಯಿ ಹಾಗೂ ಗುರು ಹಿರಿಯರನ್ನು ಗೌರವಿಸಬೇಕು ಎಂದರು.

ಶಿಕ್ಷಕರು ಹೇಳಿಕೊಡುವ ಪಾಠವನ್ನು ಅಂದೇ ಅಭ್ಯಾಸ ಮಾಡುವ ಮೂಲಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಶಾಲೆಗೆ ಹಾಗೂ ತಂದೆ–ತಾಯಿಗೆ ಹೆಸರು ತರುವಂತಹ ವಿದ್ಯಾರ್ಥಿಗಳಾಗಿ ಹಾಗೂ ನೀವು ಹುಟ್ಟಿ ಬೆಳೆದ ಸ್ಥಳವನ್ನು ಎಂದಿಗೂ ಮರೆಯಬೇಡಿ ಎಂದು ಕಿವಿ ಮಾತು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ವೀರಭದ್ರ ಸ್ವಾಮಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ನವೀನ್ ಹಾಗೂ ಅನುದಾನಿತಾ ಪ್ರೌಢಶಾಲೆಯಸಹಶಿಕ್ಷಕ ನಾಗರಾಜು, ಶಿವಕುಮಾರ್, ಮನೋಜ್ ಕುಮಾರ್, ರಾಜೇಶ್, ಮಂಜುಳಾ, ಗುರುಸ್ವಾಮಿ ದೈಹಿಕ ಶಿಕ್ಷಕ ನಾಗರಾಜು, ಮಹಾದೇವನಾಯಕ್, ಮಂಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು

ಚಿಕ್ಕಬಸವ ನಿಧನ

ಕೊಳ್ಳೇಗಾಲ, ಜೂ.24–ತಾಲೂಕಿನ, ಮಧುವನಹಳ್ಳಿ ಗ್ರಾಮದಲ್ಲಿ ವಾಸವಿದ್ದ ಚಿಕ್ಕಬಸವ(77) ಬುಧವಾರ ಹೃದಯ ಸಂಬಂಧಿ ಕಾಯಿಲೆಯಿಂದ ನಿಧನ ಹೊಂದಿದರು.



ಮೃತರು ಪತ್ನಿ, ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ 2 ಗಂಟೆಗೆ ತಮ್ಮ ಸ್ವಗ್ರಾಮವಾದ ಮಧುವನಹಳ್ಳಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಆನ್‌ಲೈನ್ ರಾಷ್ಟ್ರೀಯ ಚಿತ್ರಕಲಾ ಸ್ಪರ್ಧೆಯಲ್ಲಿ ಎಂಸಿಎಸ್ ವಿದ್ಯಾರ್ಥಿಗಳ ಸಾಧನೆ

ಚಾಮರಾಜನಗರ: ಐಸೆಟ್ ಸ್ವಯಂ ಸೇವಾ ಸಂಸ್ಥೆಯು ನಡೆಸಿದ ಆನ್‌ಲೈನ್ ರಾಷ್ಟ್ರೀಯ ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ಎಂಸಿಎಸ್ ಪಬ್ಲಿಕ್ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಕೀರ್ತನಾ ಹೆಚ್. ಆರ್., ಸ್ಪರ್ಧೆಯಲ್ಲಿ, ರಾಜ್ಯಕ್ಕೆ ಮೊದಲಿಗರಾಗಿ ಪ್ರಥಮ ಸ್ಥಾನ ಪಡೆದರೆ, 8ನೇ ತರಗತಿ ತನುಷ್ಕಾ 5 ಉತ್ತಮ ಪ್ರಶಸ್ತಿಗಳಲ್ಲಿ ಒಂದನ್ನು ಪಡೆದು ಕರ್ನಾಟಕಕ್ಕೆ ಹೆಮ್ಮೆ ತಂದು ಶಾಲೆಗೆ ಕೀರ್ತಿ ತಂದಿದ್ದಾರೆ.

ಕಾಡಾನೆ ಕಳೇಬರ ಪತ್ತೆ



ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವನ್ಯಜೀವಿ ವಲಯ ವ್ಯಾಪ್ತಿಯ ಕಾರೆಪಾಳ್ಯ ಗಸ್ತಿನ ಸಮೀಪ ಅರಣ್ಯ ಪ್ರದೇಶದಿಂದ ಸುಮಾರು 50 ಮೀಟರ್ ದೂರದಲ್ಲಿರುವ ಕಾಫಿ ತೋಟದಲ್ಲಿ ಕಾಡಾನೆ ಕಳೇಬರ ಪತ್ತೆಯಾಗಿದೆ.

ಮೃತ ಆನೆಯು ಸುಮಾರು 25 ವರ್ಷ ವಯಸ್ಸಿನ ಗಂಡಾನೆಯಾಗಿದ್ದು, ಮೇಲ್ನೋಟಕ್ಕೆ ಇತರೆ ಆನೆಗಳೊಂದಿಗಿನ ಕಾದಾಟದಿಂದ ಗಾಯಗೊಂಡು ಮೃತಪಟ್ಟಿರಬಹುದೆಂದು ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಬಿಆರ್‌ಟಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪಶು ವೈದ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹೆಚ್ಚಿನ ಪರಿಶೀಲನೆಗಾಗಿ ಮೃತ ಆನೆಯ ಅಂಗಾಂಗ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಸರ್ಕಾರಿ ಶಾಲೆಗಳಿಗೆ ದಿಢೀರ್ ಭೇಟಿ



ಮಧುವನಹಳ್ಳಿಯಲ್ಲಿ ಹಾಲಿನ ಪೌಡರ್ ಅವಧಿಯನ್ನು ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ನಂಜುಂಡಯ್ಯ ಪರಿಶೀಲಿಸಿದರು

ಕೊಳ್ಳೇಗಾಲ: ತಾಲೂಕಿನ ಸತ್ತೇಗಾಲ ಹ್ಯಾಂಡ್‌ಪೋಸ್ಟ್, ಮಧುವನಹಳ್ಳಿ, ಕಾಮಗೆರೆ, ಕಣ್ಣೂರು ಸೇರಿದಂತೆ ಹಲವು ಸರ್ಕಾರಿ ಶಾಲೆಗಳಿಗೆ ದಿಢೀರ್ ಭೇಟಿ ನೀಡಿದ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಆರ್.ನಂಜುಂಡಯ್ಯ ಭೇಟಿ ನೀಡಿ ಮಕ್ಕಳಿಗೆ ಅಡುಗೆ ತಯಾರಿಸುವ ವೇಳೆ ಗುಣಮಟ್ಟದಿಂದ ಕೂಡಿದ ಶುಚಿ–ರುಚಿಯಾದ ಆಹಾರ ತಯಾರಿಸಿ ನೀಡಬೇಕು. ಸ್ವಚ್ಛತೆಗೆ ಕಾಪಾಡಿಕೊಂಡು, ಸುರಕ್ಷತಾ ಕ್ರಮವಹಿಸಬೇಕು ಎಂದು ಮುಖ್ಯ ಶಿಕ್ಷಕರು, ಅಡುಗೆ ಸಿಬ್ಬಂದಿಗಳಿಗೆ ಸೂಚಿಸಿದರು

ಹೊಸ ಅಣಗಳ್ಳಿ, ಸರಗೂರು, ಧನಗೆರೆ, ಹ್ಯಾಂಡ್ ಪೋಸ್ಟ್, ಸತ್ತೇ ಗಾಲ, ಶಿವನ ಸಮುದ್ರ ಸೇರಿದಂತೆ ಹಲವು ಶಾಲೆಗಳಿಗೆ ಭೇಟಿ ನೀಡಿ ಆಹಾರ ಪದಾರ್ಥಗಳ ಗುಣಮಟ್ಟ, ದಾಸ್ತಾನು ಕೊಠಡಿಗಳನ್ನು ಪರಿಶೀಲಿಸಿದರು. ಹಲವು ಶಾಲೆಗಳಲ್ಲಿ ಬಿಸಿಯೂಟದ ರುಚಿಯನ್ನು ಸ್ವತಃ ಮಕ್ಕಳೊಂದಿಗೆ ಕುಳಿತು ಊಟ ಮಾಡಿ ಪರೀಕ್ಷಿಸುವ ಮೂಲಕ ಮುಂದಿನ ದಿನಗಳಲ್ಲೂ ಮಕ್ಕಳಿಗೆ ಗುಣಮಟ್ಟದ ಆಹಾರ ಪದಾರ್ಥ ತಯಾರಿಸಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಹಾರ ಧಾನ್ಯಗಳನ್ನು ಸುರಕ್ಷಿತವಾಗಿಟ್ಟುಕೊಳ್ಳುವಂತೆ. ತೊಗರಿ ಬೇಳೆ ಹಾಗೂ ಎಣ್ಣೆಯನ್ನು ಸಕಾಲದಲ್ಲಿ ಸರ್ಕಾರ ನಿಯಮ ಪಾಲಿಸಿ, ಯಾವುದೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಿ ಸಂಬಂಧಿಸಿದ ಶಿಕ್ಷಕರುಗಳಿಗೆ ಹಾಗೂ ಬಿಸಿಯೂಟ ತಯಾರಿಕ ಸಿಬ್ಬಂದಿಗಳಿಗೆ ಸೂಚಿಸಿದರು. ಅಲ್ಲದೆ ಆಹಾರ ತಯಾರಿಕೆ ವೇಳೆ ಅಡುಗೆ ಸಿಬ್ಬಂದಿಗಳು ಸುರಕ್ಷಿತವಾಗಿ ಕಾರ್ಯ ನಿರ್ವಹಿಸಬೇಕು, ಆಮೂಲಕ ಸರ್ಕಾರದ ಮಹಾತ್ವಾಕಾಂಕ್ಷೆಯ ಬಿಸಿ ಯೂಟ ಯೋಜನೆಯನ್ನು ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು ಎಂದು ಸೂಚಿಸಿದರು.

ಎಂ.ಎನ್.ಅನುಚೇತ್ ವಾರ್ತಾ ಇಲಾಖೆ ಆಯುಕ್ತ



ಬೆಂಗಳೂರು, ಜೂ.24– ಡಿಐಜಿಪಿ(ನೇಮಕಾತಿ) ಆಗಿದ್ದ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾಗಿ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ. ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಇಂದು(ಜೂ.24) ಅಧಿಸೂಚನೆ ಹೊರಡಿಸಲಾಗಿದ್ದು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ವಹಿಸಲಾಗಿದೆ.

ತಂದೆ-ತಾಯಿಯೊಂದಿಗೆ ಯುವತಿ ಆತ್ಮಹತ್ಯೆ ಪ್ರಕರಣ

ಕಾನೂನು ಕ್ರಮದ ವರದಿ ಕೇಳಿದ ರಾಜ್ಯ ಮಹಿಳಾ ಆಯೋಗ

ಮೈಸೂರು,ಜೂ.24(ಪಿಎಂ)– ತಿ.ನರಸೀಪುರ ತಾಲೂಕಿನ ಹಳೇ ಕೆಂಪಯ್ಯನ ಹುಂಡಿ ಗ್ರಾಮದಲ್ಲಿ ಯುವತಿ ರಕ್ಷಿತಾ ತನ್ನ ತಂದೆ ಮತ್ತು ತಾಯಿಯೊಂದಿಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿರುವ ಪ್ರಕರಣ ಸಂಬಂಧ ವಿಚಾರಣೆ ನಡೆಸಿ, ಕಾನೂನು ಕ್ರಮ ಕೈಗೊಂಡು ವರದಿಯನ್ನು ನೀಡಬೇಕೆಂದು ರಾಜ್ಯ ಮಹಿಳಾ ಆಯೋಗವು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಪತ್ರ ಮುಖೇನ ಕೋರಿದೆ.

ಅದೇ ಗ್ರಾಮದ ಉಲ್ಲಾಸ್‌ಗೌಡ ಎಂಬಾತ, ರಕ್ಷಿತಾರ ಕೆಲವು ಫೋಟೋಗಳನ್ನು ಇಟ್ಟುಕೊಂಡು ಕಿರುಕುಳ ನೀಡಿದ್ದು, ಇದರಿಂದ ಮಾನಸಿಕವಾಗಿ ನೊಂದ ರಕ್ಷಿತಾ, ಉಲ್ಲಾಸ್‌ಗೌಡನ ಹೆಸರನ್ನು ಡೆತ್‌ನೋಟ್‌ನಲ್ಲಿ ಬರೆದಿಟ್ಟು, ತನ್ನ ತಂದೆ–ತಾಯಿಯೊಂದಿಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ರಕ್ಷಿತಾ ಕುಟುಂಬದ ಈ ದುರಂತ ಸಾವಿಗೆ ರಾಜ್ಯ ಮಹಿಳಾ ಆಯೋಗವು ತೀವ್ರ ಸಂತಾಪ ಸೂಚಿಸಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ.

ಆದ್ದರಿಂದ ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ, ಉಲ್ಲಾಸ್‌ಗೌಡ ಎಂಬಾತನ ವಿರುದ್ಧ ಕಾನೂನು ಕ್ರಮ ಕೈಗೊಂಡು ವರದಿ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಸಲ್ಲಿಸಲು ಕೋರಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಲಕ್ಷಾಂತರ ರೂ. ಮೌಲ್ಯದ 45 ಗ್ರಾಂ ಚಿನ್ನದ ಬಿಸ್ಕೆಟ್ ಕಳ್ಳತನ

ಮನೆ ಕೆಲಸದಾಕೆ ಮೇಲೆ ಮಾಲೀಕರ ಅನುಮಾನ

ಮೈಸೂರು,ಜೂ.24(ಪಿಎಂ)– ಮನೆಯ ಬೀರುವಿನಲ್ಲಿಟ್ಟಿದ್ದ ಲಕ್ಷಾಂತರ ರೂ. ಮೌಲ್ಯದ ಒಟ್ಟು 45 ಗ್ರಾಂನ ಚಿನ್ನದ ಬಿಸ್ಕೆಟ್ ಕಳ್ಳತನವಾಗಿರುವ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಕನಕದಾಸನಗರದ ಪ್ರಮುರ್ ಅಡೋನಿಸ್ ಅಪಾರ್ಟ್‌ಮೆಂಟ್‌ನ ಮನೆಯೊಂದರಲ್ಲಿ ಈ ಕಳ್ಳತನ ನಡೆದಿದೆ. ಈ ಸಂಬಂಧ ಮನೆ ಮಾಲೀಕ ಹಿತೇಶ್ ನೀಡಿದ ದೂರಿನನ್ವಯ ಜೂ.23ರಂದು ಎಫ್‌ಐಆರ್ ದಾಖಲಾಗಿದೆ.

ನಾನು 7 ವರ್ಷಗಳಿಂದ ಚೈನಾದಲ್ಲಿ ಬಿಸಿನೆಸ್ ಮಾಡಿಕೊಂಡಿದ್ದು, ಆಗಾಗ್ಗೆ ಕನಕದಾಸನಗರದ ನನ್ನ ಮನೆಗೆ ಬಂದು ಹೋಗುತ್ತೇನೆ. ಮನೆಯಲ್ಲಿ ನನ್ನ ಪತ್ನಿ ಮತ್ತು ಚಿಕ್ಕ ಮಕ್ಕಳು ವಾಸವಾಗಿದ್ದಾರೆ. ಜೂ.10ರಂದು ನನ್ನ ಪತ್ನಿ ಕಾರ್ಯಕ್ರಮವೊಂದಕ್ಕೆ ಹೋಗಲು ಚಿನ್ನದ ಆಭರಣಗಳ ಧರಿಸುವ ಸಲುವಾಗಿ ಮನೆಯ ಬೀರುವನ್ನು ತೆಗೆದಾಗ ನಾನು ಬೀರುವಿನಲ್ಲಿ ಇಟ್ಟಿದ ಚಿನ್ನದ ಬಿಸ್ಕೆಟ್‌ಗಳು ಇರಲಿಲ್ಲ. ಮನೆಯಲ್ಲಿ ಹುಡುಕಾಡಿದರೂ ಸಿಕ್ಕಿಲ್ಲ ಎಂದು ಹಿತೇಶ್ ದೂರಿನಲ್ಲಿ ತಿಳಿಸಿದ್ದಾರೆ.

ನಾನು ಚೈನಾಗೆ ಹೋದಾಗಿನಿಂದ ಮನೆ ಕೆಲಸದ ಶಾಂತಿಯನ್ನು ಬಿಟ್ಟು ನಮ್ಮ ಮನೆಗೆ ಯಾರೂ ಬಂದಿಲ್ಲ ಎಂದು ನನ್ನ ಪತ್ನಿ ತಿಳಿಸಿದ್ದು, ಆದ್ದರಿಂದ ನಮ್ಮ ಮನೆಯ ಬೀರುವಿನಲ್ಲಿ ಇಟ್ಟಿದ್ದ ಚಿನ್ನದ ಬಿಸ್ಕೆಟ್‌ಗಳನ್ನು ಶಾಂತಿ ಕಳ್ಳತನ ಮಾಡಿರುವ ಅನುಮಾನವಿದೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ನೇಮಕ



ಮೈಸೂರು, ಜೂ.24– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ಮೈಸೂರು ನಗರ ಘಟಕದ ಉಪಾಧ್ಯಕ್ಷರಾಗಿ ಬಿಜೆಪಿ ಮುಖಂಡ ಎಂ.ಉಮೇಶ್ ಕುಮಾರ್ ರವರನ್ನು ನೇಮಕ ಮಾಡಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23


ತಕ್ಷಣ ಬೇಕಾಗಿದೆ
ಸಂಸ್ಕೃತ ಉಪನ್ಯಾಸಕರು - 1 Post (Post Graduate)
ಸಹಾಯಕ ಹಾಸ್ಟೆಲ್ ವಾರ್ಡನ್ - 1 Post (Any Degree)
Part Time ಹುದ್ದೆಗೆ ಬೇಕಾಗಿದ್ದಾರೆ
91089 82242

ಸೈಟ್ ಮಾರಾಟಕ್ಕಿದೆ
30x40 ಈಸ್ಟ್ ಫೇಸಿಂಗ್ ಭೀಮ ಅಶ್ವಿನಿ ಲೇಔಟ್, ಮಂಡಕಳ್ಳಿ ಏರ್‌ಪೋರ್ಟ್ ಹತ್ತಿರ, ನಿಯರ್ ಶ್ರೀನಗರ, ಸಂಪರ್ಕಿಸಿ.
9845713284
9141353309

COMMERCIAL SITE FOR SALE
50X80 WEST FACE
BRAHAMANANDHA SAGARA PHASE-I, 60 FEET ROAD,
MUDA APPROVED CONTACT :
8861220989
OPPOSITE TO ST. JOSEPH CENTRAL SCHOOL, ILVALA.

SITE FOR SALE
1) 20X30 N/F HUNSUR ROAD, 18 LAKHS
2) 30X60 N/F HUNSUR ROAD, 45 LAKHS
3) 30X40 N/F HUNSUR ROAD, 19 LAKHS
CONTACT : VIJAYA PROPERTIES
9986004007
8722337733
(AGENTS WELCOME)

100% NEEM WOOD
FACTORY FINISH DOORS & FRAMES
@ DEPOT RATES



10 YEARS WARRANTY
www.ssbuildmart.com
9901291267
9845426862

ಟೀಚರ್ಸ್ ಟ್ರೈನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ?
SSLC ಪಾಸ್ PUC, Degree ಪಾಸ್/ಫೇಲ್!
NURSERY TEACHERS TRAINING
PRIMARY TEACHERS TRAINING
ಟ್ರೈನಿಂಗ್ ನಂತರ ತಕ್ಷಣ ಕೆಲಸ, ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ ನಿಮ್ಮ ವಿದ್ಯಾಭ್ಯಾಸದ ಜೊತೆಗೆ ಈ ಕೋರ್ಸ್ ಸಹಿತ ಮಾಡಬಹುದು, ವಿವರಗಳಿಗೆ watsapp
9113980741



ಸ್ಕೂಲ್, ಕಾಲೇಜ್ ಯೂನಿಫಾರಂ
ಬ್ಲೇಜರ್ ರೂ.1300
ಲ್ಯಾಬ್ ಏಪ್ರಾನ್ ರೂ. 300
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

HOUSE FOR RENT
ಮನೆ ಬಾಡಿಗೆ ವಿದ್ಯಾರಣ್ಯಪುರಂ, ಜೆ.ಪಿ.ನಗರ, ದಟ್ಟಗಳ್ಳಿ, ಶ್ರೀರಾಂಪುರ, ಕುವೆಂಪುನಗರ, ರಾಮಕೃಷ್ಣನಗರ ಸುತ್ತಮುತ್ತ
9902506368

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ವೃದ್ಧಾಶ್ರಮ
ಹಿರಿಯ ನಾಗರಿಕರು, ಹಾಸಿಗೆ ಹಿಡಿದವರು, ಅಂಗವಿಕಲರು ಮತ್ತು ಪಾರ್ಶ್ವವಾಯು ಪೀಡಿತ ರೋಗಿಗಳಿಗೆ. ವೈದ್ಯಕೀಯ ಸೌಲಭ್ಯಗಳೊಂದಿಗೆ ಸಹಾನುಭೂತಿಯ ಆರೈಕೆ. ಪೌಷ್ಟಿಕ ಆಹಾರ ಮತ್ತು ಮನೆಯ ವಾತಾವರಣವನ್ನು ನೀಡುತ್ತೇವೆ.
CALL : 9110455297/9591557126

ಗ್ರಾವೆಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ, 5 ಗುಂಟೆ, 20 ಗುಂಟೆ, ಬೇಕಾದವರು ಸಂಪರ್ಕಿಸಿ:
Mob: 7259407518

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನರ್ ಕೆಲಸಕ್ಕೆ ಮತ್ತು ಅಡಿಕೆತೋಟದಲ್ಲಿ ಕೆಲಸ ಮಾಡಲು ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ: 81234 50066

ಎಸ್.ಟಿ.ಜಿ ಪದವಿ ಪೂರ್ವ ಕಾಲೇಜು,
ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್
(ಆದ್ಯತೆ: ಮಂಡ್ಯ ಜಿಲ್ಲೆಯವರಿಗೆ)
ಸಂಪರ್ಕಿಸಿ: 9742474243
ESI / PF ಸೌಲಭ್ಯವಿರುತ್ತದೆ

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
Tally A/c Assistant / Office Boy / Home Care Female, need at Mysore for Healthcare Business to take care of Tally entry / office work / dispatches. Also need female who can take care of old age female at home. Part time person also ok. Contact:
Mob: 8884645218
Send CV to myfamilycustomercare@gmail.com

COMMERCIAL SITE FOR SALE
Location: Sathgalli B Zone, Near VTU College Size: 50x80 Prime location suitable for commercial development and investment. Contact:
Mob: 9986621579

ಪೆಸ್ಟ್ ಕಂಟ್ರೋಲ್ ಸರ್ವೀಸ್
ಪಾರ್ಟ್ ಟೈಂನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1. ಸಾಯಂಕಾಲ: 4 ರಿಂದ ರಾತ್ರಿ 8.
Mob: 9845364533

FLAT FOR RENT
Anarghya Elegance, Flat No. 1, Ground Floor, near Nanjumalige Circle, 3 BHK, Hosabandikeri 2nd Cross, No. 2438, Mysore. Pref. Vegetarians. Contact:
Mob: 9900954297

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ, ಕೆಲಸದಲ್ಲಿ ಅನುಭವ ಇರಬೇಕು. (ಎಸೆಸೆಲ್ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45 ರ ಒಳಗೆ). Contact
8105522314, 8310098788

ಸೈಟು ಬೇಕಾಗಿದೆ
* ವರುಣ JSS ಬಡಾವಣೆ
* ಸರ್ಕಾರಿ ನೌಕರರ ಬಡಾವಣೆ
* ಇಂಡಸ್ ಬಡಾವಣೆ I and IInd
* ಬ್ಯಾಂಕರ್ಸ್ ಬಡಾವಣೆ
ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob: 9686071750

FOR SALE
20x30, 30x40 Sites Available @ Bogadi.
20x30,20x35, 30x40 Sites @ Bogadi,Rainbow School
30x50, 40x60, 50x80 Sites Near RT Nagar, Defence Apartments
2&3 BHK Apartments, With All Amenities @ Ramkrishna Nagar.
4 BHK New Duplex House @ Vidyaranya Puram
95386 90359, 90359 90359

FOR RENT
Furnished Clinic only for Doctors.
Vivekanandanagar, Mysore
Mob: 7892684673

SITES FOR SALE
Near MIT College Near Mysore-Bangalore highway Very good location.
Call 73538 76555

HIRING
* Marketing Executive
* Billing Executive * Lab Technician * Secretary (Typist).
* Housekeeping * Security
Location: Bhanavi Hospital
Contact: 9972982665
Email: siddalingayya.hr@bhanavihospital.com

WANTED
AIRTEL SALES EXECUTIVE PART TIME/ FULL TIME SALARY UP TO 20000
9591501305

ಶಿಕ್ಷಕರು ಬೇಕಾಗಿದ್ದಾರೆ
ಅರುಣೋದಯ ವಿದ್ಯಾಸಂಸ್ಥೆ, ದೇವಲಾಪುರ
01. PUC, D.Ed - 04 ಹುದ್ದೆ
02. BA, B.Ed - 04 ಹುದ್ದೆ
03. B.Sc, B.Ed(PCM) - 02 ಹುದ್ದೆ
04. B.Sc, B.Ed(CBZ) - 02 ಹುದ್ದೆ
05. PUC, C.P.Ed - 01 ಹುದ್ದೆ
ನೇರ ಸಂದರ್ಶನ ದಿನಾಂಕ : 27-06-2026ರಂದು ಶನಿವಾರ ಬೆಳಿಗ್ಗೆ 10 ಗಂಟೆಗೆ ಮೂಲ ದಾಖಲಾತಿಯೊಂದಿಗೆ ಕಛೇರಿಯಲ್ಲಿ ಹಾಜರಿರುವುದು.
ಅರುಣೋದಯ ವಿದ್ಯಾಸಂಸ್ಥೆ, ದೇವಲಾಪುರ
9108914692



V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

AVAILABLE FOR RENT
ARANYA VEG RESTAURANT
SARASWATHIPURAM, FUNCTION HALL CAN ACCOMODATE 200 MEMBERS AND LANN WITH ALL FACILITIES WITH FOOD OR WITHOUT FOOD CONTACT:
7019923393
9964934898

ARYAN ASSOCIATES
TAX, ACCOUNTS & FINANCIAL CONSULTANTS
Services Offered: Financial Statement Preparation, Income Tax Returns, GST Registration & Returns, TDS, PF & ESI Registration & Returns, Accounting & Bookkeeping Services, Commercial Tax Case Handling, Business Registration & Compliance, Project Report Preparation, Home Loan Assistance & Documentation, Mortgage Loan Assistance, Business Loan Assistance, Contact Number
8553050040

ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್, ಓದಲು ಬರೆಯಲು ಗೊತ್ತಿರುವ ಪುರುಷರು, ರೇಸ್ ಕೋರ್ಸ್ ಹತ್ತಿರ, ದೇವೇಗೌಡ ಸರ್ಕಲ್, ಹಿನಕಲ್, ಹೆಬ್ಬಾಳ್ ಮತ್ತು ಜಯಲಕ್ಷ್ಮಿಪುರಂ, ವೇತನ 12 ರಿಂದ 14 ಸಾವಿರ ಇಎಸ್‌ಐ, ಪಿಎಫ್ ಕಡಿತದ ನಂತರ
9900481819
9972945905

ಶಿಕ್ಷಕಿಯರು ಬೇಕಾಗಿದ್ದಾರೆ
B.Sc, B.Ed, D.Ed, (Science and Maths), A.V.S ಪಬ್ಲಿಕ್ ಸ್ಕೂಲ್, ಜಯಪುರ, ಮೈಸೂರು
9663577578
9739162162

ಜಮೀನು ಮಾರಾಟಕ್ಕಿದೆ
ಒಂದು ಎಕರೆ 40 ಲಕ್ಷಗಳು (ಗೇಟ್ ವಿತ್ ಫೆನ್ಸಿಂಗ್ ಆಗಿದೆ) ಗುಂಡ್ಲುಪೇಟೆ K.S.R.T.C ಬಸ್ ಸ್ಟ್ಯಾಂಡ್‌ನಿಂದ 7 K.M.
9731401898

SITE FOR SALE
(40X68) "PRAGMA LAYOUT" N/F MUDA APPROVED (NEAR CENTRAL ST. JOSEPH SCHOOL, MYS-HUNSUR, BYPASS ROAD, N.J. HOSPITAL ROAD, 65 LAKHS
9538839926

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ, ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18500 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಬೇಕಾಗಿದ್ದಾರೆ
ರಾತ್ರಿ ಪಾಳಿಯ ಕೆಲಸಕ್ಕೆ ನುರಿತ ಭಟ್ಟರು & ಸಹಾಯಕರು ಬೇಕಾಗಿದ್ದಾರೆ. ಭಟ್ಟರಿಗೆ ದಿನಕೂಲಿಯಂತೆ 800/- ರೂ ದಿನಕ್ಕೆ & ಸಹಾಯಕರಿಗೆ ದಿನಕ್ಕೆ 500/- ರೂಗಳಂತೆ ನೀಡಲಾಗುವುದು. & ಹಗಲು ಪಾಳಿ ಕೆಲಸಕ್ಕೆ ಸಹಾಯಕರು ಬೇಕಾಗಿದ್ದಾರೆ.
9538774926

ತಕ್ಷಣ ಬೇಕಾಗಿದ್ದಾರೆ
ಅಡಕನಹಳ್ಳಿ, ಹಿಮ್ಮಾವು, ನಂಜನಗೂಡು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, ಸಂಬಳ : 19500 (8 hrs Duty) ESI, PF ಊಟ ತಿಂಡಿ ಸೌಲಭ್ಯವಿರುತ್ತದೆ.
9620667819

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗೆ ಸಂಬಳ : 27,000/-(26 ದಿನಗಳು) ESI, PF , ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ (DMLT) ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

ಸೈಟ್ ಬೇಕಾಗಿದೆ
ನಿರ್ಮಾಣ ಬಡಾವಣೆ, ಬಸವೇಶ್ವರ ಬಡಾವಣೆ, 30x40, 30x50, 60x40 ರಾಘವೇಂದ್ರ ಮಠದ ಹತ್ತಿರ. T Narasipura road
8971936090

SITE FOR SALE
30X40 EAST FACING VIJAYANAGARA 4TH STAGE DISH LAYOUT, ATTACHED NPS SCHOOL 80 FT ROAD ATTACHED OWNER
8073389870
9945225752

ತಕ್ಷಣ ಬೇಕಾಗಿದ್ದಾರೆ
ಬನ್ನಿಮಂಟಪ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : 20500 +W/0(8 hrs) ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

ಕಾರು ಬೇಕಾಗಿದೆ
(ಸೆಕೆಂಡ್ ಹ್ಯಾಂಡ್ ಕಾರು) 5 ಲಕ್ಷದ ಒಳಗೆ
Mob: 96860 71750

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
ವಯಸ್ಸು: 18 – 25 ವರ್ಷ
ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ
Salary 12,000/- + Petrol Alliance
99011 63200
97435 65907

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮನೆ ಮಾರಾಟಕ್ಕಿದೆ
2ನೇ ಮೇನ್, ವಿದ್ಯಾರಣ್ಯಪುರಂ, 5ನೇ ಕ್ರಾಸ್, ಮೈಸೂರು. ರಾಮಲಿಂಗೇಶ್ವರ ದೇವಸ್ಥಾನ ಹತ್ತಿರ. ಸೈಜು: 63x40.
Mob: 9902441338

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ, ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
9916905188

SITE FOR SALE
30X50 & 30X40 BOGADI ROAD J J ENCLAVE SOURISH LAYOUT
9740088990

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ದ್ವಿಚಕ್ರ ವಾಹನದ ಶೋರೂಂ ಗೆ,
* Sales Executive (Freshers also welcome) Male and Female.
ಕೂಡಲೇ ಸಂಪರ್ಕಿಸಿ:
Mob: 9980751999

TUITION CENTRE 1ST TO 9TH STD
CBSE/ICSE/STATE/OLYMPIAD MATHS COACHING ALL SUBJECTS M.SC MATHEMATICS FACULTY, OPT FOR MATHS SUBJECT ONLY. MORNING/EVENING BATCH IS AVAILABLE, ADDRESS : RAMAKRISHNA NAGAR, II BLOCK
7975087002
8561642345

SITES FOR SALE
Near Vajmangala, T. Narasipura Road & Near Upkar Layout, Hunsur
8123387555 / 7259348777

SVM HOMES-BUILDERS
HOME CONSTRUCTION START AT RS. 1675/-
9945676765

ಡ್ರೈವರ್ಸ್ ಬೇಕಾಗಿದ್ದಾರೆ
ಗೂಡ್ ವೆಹಿಕಲ್‌ಗೆ ಡ್ರೈವರ್ ವೇತನ 15000/– ರಿಂದ 20,000/– ಮತ್ತು ಟೈಲರ್‌ಗಳು ಬೇಕಾಗಿದ್ದಾರೆ
8884179981

WANTED
ADMIN EXECUTIVE - 15 POST (FEMALE ONLY, FRESHER, SSLC/PUC) MARKETING OFFICER- 6 POST (PUC/DEGREE, FRESHER) TELE EXECUTIVE - 5 POST
6364012493

ಕೇರಳ ಪ್ರವಾಸ
ಒಟ್ಟು 04 ದಿನಗಳು, ಪ್ರವಾಸ ದಿನಾಂಕ: ಜುಲೈ 11,12, 13, 14, ವೀಕ್ಷಿಸುವ ಸ್ಥಳಗಳು, ಆಲಪೆ, ಅನಂತ ಪದ್ಮನಾಭ ದೇವಸ್ಥಾನ, ಕೊಚ್ಚಿನ್ ಮರೆಯನ್ ಡ್ರೈವ್, ಗುರುವಾಯೂರು, ಜಟಾಯು ಅರ್ಥ ಸೆಂಟರ್, ಕೋವಲಂ ಬೀಚ್, ಎಲಿಫೆಂಟ್ ಕ್ಯಾಂಪ್, ಹತ್ತಿರಪಲ್ಲಿ ವಾಟರ್ ಫಾಲ್, * ಫ್ಯಾಮಿಲಿಗೆ ಪ್ರತ್ಯೇಕ ರೂಮ್ ವ್ಯವಸ್ಥೆ ಇರುತ್ತದೆ. * ಊಟ ತಿಂಡಿ ವ್ಯವಸ್ಥೆ ಇರುತ್ತದೆ ಎಲ್ಲ ಮೇಲಿನ ಸವಲತ್ತುಗಳು ಸೇರಿ ಒಟ್ಟರಿಗೆ ರೂ.9,000/– ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
7022271023

ಹುದ್ದೆಗಳು :
1. ಮೇಲ್ವಿಚಾರಕ/ಮ್ಯಾನೇಜರ್
2. ಹೌಸ್‌ಕೀಪಿಂಗ್, 3. ಸೆಕ್ಯೂರಿಟಿ– ದಿನ ಮತ್ತು ರಾತ್ರಿ ಪಾಳಿಗೆ
ಹೊಸದಾಗಿ ನಿರ್ಮಾಣವಾಗಿರುವ ಶ್ರೀ ವಾಸವಿ ನಾಗರೇಶ್ವರ ದೇವಸ್ಥಾನ, ವಿಜಯನಗರ 2ನೇ ಹಂತ, ಕೆಇಬಿ ಆಫೀಸ್ ಪಕ್ಕ, ಮೈಸೂರು
ಶಿವಕುಮಾರ್ :
8150833434

ಸದ್ಗುರು ಮ್ಯಾರೇಜಸ್
ನಿಮಗೆ ಮದುವೆಯಾಗುತ್ತಿಲ್ಲವೇ? ಚಿಂತಿಸಬೇಡಿ, ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ
9448229184
7899625268

CHANGE OF NAME
I, H.P PUSHPA, W/o H.N Nagendra, residing at Door No.84, Vontikoppal Railway Colony, Yadavagiri, Mysuru-570020, Karnataka State, have changed my name from H.P PUSHPA to "PUSHPAVATHI. H.P" on my own free will sworn in before Notary C.R. SEETHARAM, Mysore vide affidavit Date: 08.06.2026, Place: Mysuru
Sd/- Pushpavathi H.P

CHANGE OF NAME
I, NASIR PASHA, S/O ANWAR PASHA, residing at Door No.62, KSRTC Block, Hanumantha Nagar, Bannimantap Extension, Bannimantap, Mysore- 570015, Karnataka State, have changed my name from NASIR PASHA to "NAZEER PASHA" on my own free will sworn in before Notary C.R. SEETHARAM, Mysore vide affidavit Date: 24.06.2026, Place: Mysuru,
Sd/- Nazeer pasha

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ಕರುಣ ಟ್ರಸ್ಟ್, ನಿರಾಶ್ರಿತರ ಮಾನಸಿಕ ಅಸ್ವಸ್ಥರ ವಸತಿ ತಾಣದಲ್ಲಿ ಅಡಿಗೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಊಟ, ವಸತಿ, ಸೌಲಭ್ಯ ಇರುತ್ತದೆ. (ಪುರುಷರಿಗೆ ಮಾತ್ರ), ಸಂಪರ್ಕಿಸಿ
9449599562
9141470575

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ.
1. ಕಿಚನ್ ಸೂಪರ್‌ವೈಸರ್ –2
2. ವೈಟರ್ಸ್ –3, 3. ಕೌಂಟರ್ ಬಾಯ್ಸ್ –6
4. ಸೌತ್ ಇಂಡಿಯನ್ ಅಸಿಸ್ಟೆಂಟ್– 1
5. ಹೌಸ್ ಕೀಪಿಂಗ್ ಲೇಡಿಸ್– 10
6. ತರಕಾರಿ ಕಟಿಂಗ್ಸ್
7022287389
9110878578

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ
VASANTHA BUILDERS
8151035074
9035012579

ತಕ್ಷಣ ಬೇಕಾಗಿದ್ದಾರೆ
ಶ್ರೀ ರಂಗ ಭಾರತ್ ಗ್ಯಾಸ್ ಏಜೆನ್ಸಿ ಬೋಗಾದಿಗೆ *(ಆಟೋ ಹೊಂದಿರುವ) ಗ್ಯಾಸ್ ಡೆಲಿವರಿ ಬಾಯ್ಸ್/BOYS
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
* ಮಹಿಳಾ ಕಛೇರಿ ಸಿಬ್ಬಂದಿ
* ಗೋಡೌನ್‌ನಲ್ಲಿ ಕೆಲಸ
9341384442

ಬೇಕಾಗಿದ್ದಾರೆ
* ಕಂಪ್ಯೂಟರ್‌ನಲ್ಲಿ ಕೆಲಸ ಮಾಡಿ 2 ವರ್ಷಗಳ ಅನುಭವವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
* ಯರಗನಹಳ್ಳಿ, ವಿದ್ಯಾನಗರ, ಆಲನಹಳ್ಳಿ ಲೇಔಟ್, ಸಿದ್ಧಾರ್ಥ ಲೇಔಟ್, ನಜರ್‌ಬಾದ್, ಕುರುಬಾರಹಳ್ಳಿಯಲ್ಲಿರುವವರಿಗೆ ಮೊದಲ ಆದ್ಯತೆ.
* ರಿಟೈರ್ಡ್, ಹೌಸ್‌ವೈಫ್, ಸೆಲ್ಫ್ ಎಂಪ್ಲಾಯೀಸ್‌ಗೆ ಪಾರ್ಟ್‌ಟೈಂ ಬಿಸಿನೆಸ್ ಆಪರ್ಚುನಿಟಿ ಇದೆ.
9902062957
7795712847

ಶ್ರೀ ಗೌರೀಶಂಕರ ಟ್ರಾವೆಲ್ಸ್
1–8–2026 (3 ದಿನ): ಕಾಮಾಕ್ಯ ಶಕ್ತಿಪೀಠ, ಉಮಾನಂದ, ಬ್ರಹ್ಮಪುತ್ರ ಇತ್ಯಾದಿ.
26–7–26 (1 ದಿನ): ಇಶಾ ಫೌಂಡೇಷನ್, ಘಾಟಿ ಸುಬ್ರಮಣ್ಯ, ಕೋಟಿಲಿಂಗ
5–9–2026 (3 ದಿನ): ಭೀಮಾಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ.
3–10–26 (3 ದಿನ): ಭುವನೇಶ್ವರ್, ಪುರಿ, ಕೊನಾರ್ಕ್ ಇತ್ಯಾದಿ
24–10–26 (4 ದಿನ): ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್. (ವಿಮಾನ, ಬಸ್, ಊಟ, ರೂಂ)
Mob: 9620002114

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ಗಿರಿಜಾ ಕಲ್ಯಾಣ

ದೇವ ದಂಪತಿ ವಿವಾಹ ಕಣ್ತುಂಬಿಕೊಂಡ ಭಕ್ತರು

ನಂಜನಗೂಡು, ಜೂ.24– ದಕ್ಷಿಣಕಾಶಿ ನಂಜನಗೂಡಿನ ನಂಜುಂಡೇಶ್ವರನ ಸನ್ನಿಧಿಯಲ್ಲಿ ಪಾರ್ವತಿ ಮತ್ತು ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣ ಮಹೋತ್ಸವ ಬುಧವಾರ ರಾತ್ರಿ ವಿಜೃಂಭಣೆಯಿಂದ ಜರುಗಿತು.

ಕಲ್ಯಾಣೋತ್ಸವದ ಮೊದಲನೇ ದಿನ ಮಂಗಳವಾರ ವರಪೂಜೆ ಕಾರ್ಯಕ್ರಮ, ಪ್ರಾರಂಭದಲ್ಲಿ ಅರಿಶಿನ ಕುಂಕುಮ ಹಾಗೂ ಎಣ್ಣೆಯನ್ನು ದೇವಾಲಯದ ರಥ ಬೀದಿಯಲ್ಲಿ ಮೆರವಣಿಗೆ ಮಾಡಿ ಇದೇ ಅರಿಶಿನ ಕುಂಕುಮವನ್ನು ರಥ ಬೀದಿಗಳಲ್ಲಿನ ಮನೆಯವರಿಗೆ ನೀಡಿ ದೇವ ದಂಪತಿಗಳ ಮದುವೆಗೆ ಆಹ್ವಾನ ನೀಡಲಾಯಿತು. ನಂತರ ರಾತ್ರಿ 8 ಗಂಟೆಗೆ ಶ್ರೀಕಂಠೇಶ್ವರನಿಗೆ ವರಪೂಜೆ ನಡೆಸಲಾಯಿತು.

ಬುಧವಾರ ದೇವಾಲಯದ ಪ್ರಧಾನ ಆಗಮಿಕ ಅರ್ಚಕ ನಾಗಚಂದ್ರ ದೀಕ್ಷಿತ್ ಅವರ ನೇತೃತ್ವದಲ್ಲಿ ಬೆಳಗ್ಗೆ 9 ಗಂಟೆಗೆ ಸ್ವಾಮಿಗೆ ಅನುಜ್ಞಾಪೂರ್ವಕ ಕನ್ನಡಿ ಕಳಶ ಅಂಕುರಾರ್ಪಣ ಪೂರ್ವಕ ಮಂಗಳ ಸ್ನಾನ, 12 ಗಂಟೆಗೆ ನಾಂದಿ ಗೃಹಯಜ್ಞ ನಡೆಸಲಾಯಿತು. ಸಂಜೆ 6 ಗಂಟೆ ವೇಳೆಗೆ ದೇವಾಲಯದಿಂದ ಸರ್ವ ಅಲಂಕಾರ ಭೂಷಿತವಾದ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ದೇವಾಲಯದ ಪ್ರಾಂಗಣದ ಸುತ್ತ ಮೆರವಣಿಗೆ ಮಾಡುವ ಮೂಲಕ ಕಾಶಿಯಾತ್ರೆ ನಡೆಸಲಾಯಿತು. ಮೆರವಣಿಗೆಯಲ್ಲಿ ಪಂಚ ವೀರಗಾಸೆ, ಪೂಜಾ ಕುಣಿತ, ಗಾರುಡಿ ಗೊಂಬೆ, ನಂದಿ ಧ್ವಜ, ಬೀಸು ಕಂಸಾಳೆ, ಮಂಗಳ ವಾದ್ಯ ತಂಡಗಳು ಉತ್ಸವಕ್ಕೆ ರಂಗು ತಂದವು.

ನಂತರ ಹಸಿರು ಚಪ್ಪರ ಹಾಕಿದ್ದ ದೇವಾಲಯದ ವಸಂತ ಮಂಟಪದಲ್ಲಿ ಸಂಜೆ 6–45ರಿಂದ 7.15 ಗಂಟೆಯೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಪಾರ್ವತಿ



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ನಡೆಯಿತು.

ಅಮ್ಮನವರು ಹಾಗೂ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ ಮೂರ್ತಿಗಳನ್ನು ಕಲ್ಯಾಣ ಮಹೋತ್ಸವಕ್ಕಾಗಿ ಸಿದ್ಧಗೊಂಡಿದ್ದ ಮಂಟಪದಲ್ಲಿ ಇರಿಸಿ ಸಂಬಂಧ ಮಾಲಾ ನಿರೀಕ್ಷಣಾ ಪೂರ್ವಕ ಕಲ್ಯಾಣ ಮಂಟಪ ಪ್ರವೇಶ ನಂತರ ಧಾರಾ ಮಹೋತ್ಸವ, ಅಕ್ಷತಾರೋಹಣ ಕಾರ್ಯ ನೆರವೇರಿಸಿದ ಬಳಿಕ ಪಾರ್ವತಿಯನ್ನು ವಿಷಕಂಠನೆನಿಸಿರುವ ನಂಜುಂಡೇಶ್ವರನಿಗೆ ಧಾರೆ ಎರೆಯುವ ಮೂಲಕ ಮದುವೆ ಕಾರ್ಯ ನೆರವೇರಿಸಲಾಯಿತು. ನಂತರ ದೇವ ದಂಪತಿಗಳನ್ನು ಹಸೆಮಣೆ ಗೇರಿಸಿ ಭಕ್ತರು ತಮ್ಮ ಭಕ್ತಿಯನ್ನು ಮೆರೆದರು.

ಇದೇ ವೇಳೆ ಗೌರವಪೂರ್ವಕವಾಗಿ ವಿವಾಹ ಮಹೋತ್ಸವದಲ್ಲಿ ಭಾಗಿಯಾಗಿದ್ದ ಮುತ್ತೈದೆಯರಿಗೆ ಅರಿಶಿನ, ಕುಂಕುಮ ಮತ್ತು ಅತಿಥಿಗಳಿಗೆ ಅಕ್ಕಿ, ತೆಂಗಿನ ಕಾಯಿ, ಬೇಳೆ, ಬೆಲ್ಲ, ಅರಿಶಿನ, ಕುಂಕುಮ ಹಾಗೂ ಬಳೆಯೊಂದಿಗೆ ಬಾಗಿನವನ್ನು ಸಾಂಕೇತಿಕವಾಗಿ ನೀಡಿ ಗೌರವಿಸಲಾಯಿತು. ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ವಸಂತ ಮಂಟಪದಲ್ಲಿ ಕಿಕ್ಕಿರಿದು ನೆರೆದಿದ್ದ ಭಕ್ತರು ಜಯ ಘೋಷಗಳನ್ನು ಕೂಗಿ ಗಿರಿಜಾ ಕಲ್ಯಾಣ ಮಹೋತ್ಸವವನ್ನು ಕಣ್ತುಂಬಿಕೊಂಡರು.

ಗಿರಿಜಾ ಕಲ್ಯಾಣ ಅಂಗವಾಗಿ ಮೈಸೂರು ಒಡೆಯರು ಹಾಗೂ ಟಿಪ್ಪು ಸುಲ್ತಾನ್ ನೀಡಿರುವ 44 ಬಗೆಯ ಜವಹಾರಿ ಆಭರಣಗಳಿಂದ ಉತ್ಸವ ಮೂರ್ತಿಗಳನ್ನು ಅಲಂಕರಿಸಲಾಗಿತ್ತು. ಸರ್ಕಾರದ ಖಜಾನೆಯಲ್ಲಿ ವಿಶೇಷ ಭದ್ರತೆಯಲ್ಲಿ ಇರಿಸಲಾದ ಈ ಅಮೂಲ್ಯವಾದ ಮುತ್ತು, ಪಚ್ಚೆ, ವಜ್ರ, ಹವಳ ಹಾಗೂ ನವರತ್ನಗಳಿಂದ ಕೂಡಿದ ಆಭರಣಗಳನ್ನು ದೇವಾಲಯದ ಸುಪರ್ದಿಗೆ ಪಡೆದು ಅಲಂಕಾರ ಮಾಡುವುದು ವಾಡಿಕೆ ಅಂತೆಯೇ. ಇಮ್ಮಡಿ ಕೃಷ್ಣರಾಜ ಒಡೆಯರ್ ಅವರು ನೀಡಿರುವ ಚಿನ್ನದ ರುದ್ರಾಕ್ಷಿ, ಬಿಲ್ವಪತ್ರೆ ಸರ, ತಂಗಮಣಿ, ರತ್ನ ಖಚಿತವಾದ ಉತ್ಸವ ಕವಚ, ಕೆಂಪಿನ ಕವಚ, ಪದಕದ ಸರಗಳು ಮುತ್ತಿನ ಸರಗಳು, ಸೂರ್ಯ ಬೊಟ್ಟು, ಚಂದ್ರ ಬೊಟ್ಟು, ಹಣೆ ಬೊಟ್ಟು, ತುರಾಯಿ, ಕಡಗ, ಕಾಲು ಕಡಗ, ಹವಣದ ಉಡುದಾರಗಳಿಂದ ಶ್ರೀಕಂಠೇಶ್ವರ ಸ್ವಾಮಿ ಮತ್ತು ಅಮ್ಮನವರ ಉತ್ಸವ ಮೂರ್ತಿಗಳನ್ನು ದೇವಾಲಯದ ಋತ್ವಿಕರು ಕ್ರಮಬದ್ಧವಾಗಿ ಸಿಂಗರಿಸಿ ಕಲ್ಯಾಣ ಮಹೋತ್ಸವಕ್ಕೆ ಅಣಿಗೊಳಿಸಲಾಗಿತ್ತು.

ಸರ್ವ ಅಲಂಕಾರ ಭೂಷಿತ ಶ್ರೀಕಂಠೇಶ್ವರ ಮತ್ತು ಪಾರ್ವತಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರುವ ಮೂಲಕ ಸಂಪನ್ನಗೊಂಡಿತು. ದೇವ ದಂಪತಿಗಳ ವಿವಾಹ ಮಹೋತ್ಸವದಲ್ಲಿ ಲಕ್ಷಾಂತರ ಜನ ಪಾಲ್ಗೊಂಡು ಭಕ್ತಿ ಪರವಶರಾಗಿ ಪುನೀತರಾದರು.

ಗಿರಿಜಾ ಕಲ್ಯಾಣದ 3ನೇ ದಿನವಾದ ಗುರುವಾರ ಉರುಟಣೆ, ಉಯ್ಯಾಲೋತ್ಸವ ನಡೆಸಿದರೆ, 4ನೇ ದಿನ ಶುಕ್ರವಾರ ಪಾಕಿನಿ ಉತ್ಸವ ನಡೆಸಲಾಗುತ್ತದೆ. 5ನೇ ದಿನ ಶನಿವಾರ ನಾಗಬಲಿ, ಶೇಷಹೋಮ, ನಾಗವಲ್ಲಿ, ಗಜಾರೋಹಣ ಹಾಗೂ ವಧೂವರರ ಗೃಹಪ್ರವೇಶಕ್ಕೆ ಆದ್ಯತೆ ನೀಡಲಾಗುತ್ತದೆ. 6ನೇ ದಿನ ಭಾನುವಾರ ವಿವಾಹಮಂಟಪದ ಕಂಬಗಳಿಗೆ ಪೂಜೆ ನೆರವೇರಿಸಿ ತೆಪ್ಪೋತ್ಸವ ಹಾಗೂ ಓಕಳಿ ಉತ್ಸವ ನಡೆಸಿ ಭಕ್ತರು ಸಂಭ್ರಮಿಸಿದರೆ 7ನೇ ದಿನ ಸೋಮವಾರ ಮತ್ತೆ ತೆಪ್ಪೋತ್ಸವದೊಂದಿಗೆ ಶ್ರೀಯವರ ಶಯನೋತ್ಸವವನ್ನೂ ನಡೆಸಿ ಈ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ತೆರೆ ಎಳೆಯಲಾಗುತ್ತದೆ.

ಮಲ್ಕುಂಡಿ; ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಆಗ್ರಹ



ನೀರು ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಮಲ್ಕುಂಡಿ, ಜೂ.24– ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಆಗ್ರಹಿಸಿ ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಖಾಲಿ ಬಿಂದಿಗೆ ಹಿಡಿದು ಜಮಾಯಿಸಿದ ಗ್ರಾಮಸ್ಥರು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ನಂತರ ಮಾತನಾಡಿದ ಪ್ರತಿಭಟನಾಕಾರರು, ಹಲ್ಲರೆ ಗ್ರಾಪಂ ವ್ಯಾಪ್ತಿಯ ಮಲ್ಕುಂಡಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಸರ್ಕಾರ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಗ್ರಾಪಂ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಗ್ರಾಮದಲ್ಲಿ 3 ಸಾವಿರ ಮಂದಿ ವಾಸಿಸುತ್ತಿದ್ದು, 2 ಹೆಡ್ ಟ್ಯಾಂಕ್ ಇದ್ದರೂ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಅಲ್ಲದೇ ಗ್ರಾಮದಲ್ಲಿ ಬೋರ್‌ವೆಲ್ ಇಲ್ಲದಿರುವುದರಿಂದ 2 ಕಿಮೀ ದೂರದಿಂದ ನೀರು ತರುವ ಅನಿವಾರ್ಯತೆ ಎದುರಾಗಿದೆ. ಗ್ರಾಮದಲ್ಲಿ ಬೋರ್‌ವೆಲ್ ಕೊರೆಸುವಂತೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಪ್ರಸ್ತುತ ವಾರಕ್ಕೊಮ್ಮೆ ನೀರು ಬಿಡುತ್ತಿದ್ದು, ನೀರಿಗಾಗಿ ಗ್ರಾಮಸ್ಥರು ಪರಿತಪಿಸುವಂತಾಗಿದೆ. ಹೀಗಾಗಿ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಕೊಡುವುದನ್ನು ಬಿಟ್ಟು ಸಮರ್ಪಕ ನೀರು ಪೂರೈಕೆ ಮುಂದಾಗಬೇಕು ಎಂದು ಒತ್ತಾಯಿಸಿದರು. ಈ ವೇಳೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಎಸ್‌ಸಿ, ಎಸ್ಟಿ ಸಭೆಯಲ್ಲಿ ಅನಾವರಣಗೊಂಡ ಸಮಸ್ಯೆಗಳು

ಹುಣಸೂರು, ಜೂ.24– ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣ ದುರ್ಬಳಕೆ, ಶಾಲಾ ಕಾಲೇಜು ಬಳಿ ಪುಂಡರ ಬೈಕ್ ವ್ಹೀಲಿಂಗ್, ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರದ ಕೊರತೆ ಅಧಿಕಾರಿಗಳ ಅಳಲು, ಪೊಲೀಸ್ ಠಾಣೆ ಆವರಣದಲ್ಲಿ ದಲ್ಲಾಳಿಗಳ ನ್ಯಾಯ ಪಂಚಾಯ್ತಿ ಕಟ್ಟೆ ಇದಕ್ಕೆ ಪೊಲೀಸರ ಸಹಕಾರ ಸೇರಿದಂತೆ ಹತ್ತಾರು ಸಮಸ್ಯೆಗಳು ನಗರದಲ್ಲಿ ನಡೆದ ಉಪವಿಭಾಗ ಮಟ್ಟದ ಎಸ್‌ಸಿ, ಎಸ್ಟಿ ಸಭೆಯಲ್ಲಿ ಅನಾವರಣಗೊಂಡವು.



ಉಪವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಚ್.ಡಿ.ಕೋಟೆ ಸೇರಿದಂತೆ ಉಪ ವಿಭಾಗ ಮಟ್ಟದ ಎಸ್‌ಸಿ, ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಸಮಿತಿ ಸದಸ್ಯ ಅಣ್ಣಯ್ಯ ನಾಯಕ ಮಾತನಾಡಿ ಸರ್ಕಾರದ ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣ ಎಸ್‌ಸಿ, ಎಸ್‌ಟಿ ಕಾರ್ಯಕ್ರಮಗಳಿಗೆ ಬಳಕೆಯಾಗದೆ ಬೇರೆ ಕಾರ್ಯಕ್ರಮಗಳಿಗೆ ಬಳಕೆ ಮಾಡಿದ್ದು, ಇದರಿಂದ ಸಮುದಾಯದ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣ ಯಾವ ಕಾರ್ಯಕ್ರಮಗಳಿಗೆ ಬಳಕೆಯಾಗಿದೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಮಾಹಿತಿ ನೀಡಬೇಕು ಎಂದು ಸಭಾಧ್ಯಕ್ಷರಿಗೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಅಧ್ಯಕ್ಷೆ ಎಸಿ ಕಾವ್ಯ ಈ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡುವುದಾಗಿ ಭರವಸೆ ನೀಡಿದರು.

ಪೊಲೀಸ್ ಠಾಣೆಗಳಲ್ಲಿ ದೌರ್ಜನ್ಯಕ್ಕೆ ಒಳಗಾದವರಿಂದ ದೂರು ಸ್ವೀಕರಿಸಿ ಪ್ರಕರಣ ದಾಖಲಿಸುವ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಬದಲು ಠಾಣಾವರಣದಲ್ಲಿ ದಲ್ಲಾಳಿಗಳ ಮೂಲಕ ನ್ಯಾಯ ಪಂಚಾಯಿತಿಗೆ ಪೊಲೀಸರೇ ಅವಕಾಶ ಕಲ್ಪಿಸಿಕೊಟ್ಟು ಉಳ್ಳವರಿಗೆ ಮಣೆ ಹಾಕುವ ಕೆಲಸವಾಗುತ್ತಿದೆ ಎಂದು ಆರೋಪಿಸಿದರು.

ಇದಕ್ಕುತ್ತರಿಸಿದ ಡಿವೈಎಸ್‌ಪಿ ರವಿ, ಇದನ್ನು ನಿಲ್ಲಿಸಲು ಠಾಣಾ ಆವರಣದಲ್ಲಿದ್ದ ಕ್ಯಾಂಟೀನ್ ತೆರವುಗೊಳಿಸಲಾಗಿದೆ. ಅಲ್ಲದೇ ಠಾಣೆ ಆವರಣದಲ್ಲಿ ಗುಂಪುಗೂಡಿ ನ್ಯಾಯ ಪಂಚಾಯ್ತಿಗೆ ಮುಂದಾಗುವುದನ್ನು ನಿಲ್ಲಿಸಲು ಠಾಣೆಗಳಿಗೆ ಸೂಚಿಸಲಾಗಿದೆ ಎಂದರು.

ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಶೌಚಾಲಯದ ನಿರ್ವಹಣೆ ಸರಿ ಇಲ್ಲದೆ ಗಬ್ಬೆದ್ದು ನಾರುತ್ತಿದ್ದರೂ ವಾರ್ಡನ್‌ಗಳು ಅತ್ತ ಮುಖ ಹಾಕದೆ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಸದಸ್ಯ ಹೆಚ್.ಡಿ.ಕೋಟೆಯ ನಾಗರಾಜ ನಾಯಕ ತಿಳಿಸಿದರು.

ಈ ಸಂಬಂಧ ಅಧ್ಯಕ್ಷರು 4 ತಾಲೂಕಿನ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಈ ವೇಳೆ ತಹಸೀಲ್ದಾರ್ ಮಂಜುನಾಥ್, ಸಮಾಜ ಕಲ್ಯಾಣ ಅಧಿಕಾರಿ ಭರತ್ ಸೇರಿದಂತೆ ಇನ್ನಿತರರಿದ್ದರು.

ದಲಿತರ ನಿವೇಶನ, ಮನೆಗಳ ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

ತಿ.ನರಸೀಪುರ, ಜೂ.24– ತಲಕಾಡು ಹೋಬಳಿ ಟಿ.ದೊಡ್ಡಪುರದಲ್ಲಿ 3 ತಲೆಮಾರುಗಳಿಂದ ವಾಸಿಸುತ್ತಿರುವ ದಲಿತರ ನಿವೇಶನ ಮತ್ತು ಮನೆಗಳನ್ನು ರಕ್ಷಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು ಟಿ.ದೊಡ್ಡಪುರದಲ್ಲಿ 140ಕ್ಕೂ ಹೆಚ್ಚು ಪ.ಜಾತಿಗೆ ಸೇರಿದ ಬಲಗೈ ಸಮುದಾಯದ ಕುಟುಂಬ ಹಲವು ದಶಕಗಳಿಂದ ನೆಲೆಸಿವೆ. ಗ್ರಾಮದ ಸರ್ವೇ ನಂ.459/1, 459/2 ಹಾಗೂ 459/3ರಲ್ಲಿ 2.16 ಎಕರೆ ಪ್ರದೇಶವನ್ನು ಸರ್ಕಾರ ಆಶ್ರಯ ಯೋಜನೆಯಡಿ ನಿವೇಶನಗಳಾಗಿ ಮಂಜೂರು ಮಾಡಿದ್ದು, 70ಕ್ಕೂ ಹೆಚ್ಚು ಕುಟುಂಬ ಮನೆ ನಿರ್ಮಿಸಿಕೊಂಡು ವಾಸಿಸುತ್ತಿವೆ. ಈ ಪೈಕಿ ಅನೇಕರು 50 ವರ್ಷಗಳಿಗೂ ಹೆಚ್ಚು ಕಾಲದಿಂದ ಅಲ್ಲಿಯೇ ನೆಲೆಸಿದ್ದು, ಈಗಾಗಲೇ 3 ತಲೆಮಾರುಗಳು ಇದೇ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡಿವೆ ಎಂದು ವಿವರಿಸಿದರು.



ದಸಂಸದಿಂದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಈ ಬಡಾವಣೆಗೆ ಸರ್ಕಾರ ರಸ್ತೆ, ಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಹಾಗೂ ಬೀದಿ ದೀಪ ಸೇರಿದಂತೆ ವಿವಿಧ ಮೂಲ ಸೌಕರ್ಯ ಒದಗಿಸಿದೆ. ಸರ್ಕಾರಿ ದಾಖಲೆಗಳ ಆಧಾರದ ಮೇಲೆ ಮನೆಗಳು ನಿರ್ಮಾಣವಾಗಿದ್ದು, ಜನರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು. ಆದರೆ ಇದೀಗ ಮತ್ತೊಂದು ಸಮುದಾಯದ ನಂಜಯ್ಯ ಬಿನ್ ಲೇ.ಬಸವರಾಜು ಎಂಬುವರು ಸರ್ವೇ ನಂ.459/2ರ ಜಮೀನು ತಮ್ಮ ಸ್ವಾಧೀನದ್ದು ಎಂದು ಪ್ರತಿಪಾದಿಸಿ ತಿ.ನರಸೀಪುರ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿರುವುದರಿಂದ ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದೆ ಎಂದು ದೂರಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ ದಲಿತ ಕುಟುಂಬಗಳ ಮನೆ ಹಾಗೂ ನಿವೇಶನಗಳಿಗೆ ಕಾನೂನುಬದ್ಧ ರಕ್ಷಣೆ ಒದಗಿಸಬೇಕು. ಭೂಸ್ವಾಧೀನ ಹಾಗೂ ನಿವೇಶನ ಮಂಜೂರಾತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಇಲ್ಲವಾದಲ್ಲಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಸಾವಿರಾರು ಜನರು ಹಸು, ಕರು, ದನ ಹಾಗೂ ಮೇಕೆಗಳೊಂದಿಗೆ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ದಸಂಸ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಬನ್ನಹಳ್ಳಿ ಹುಂಡಿ ಉಮೇಶ್, ನಾಗರಾಜಮೂರ್ತಿ, ಶಾಂತಕುಮಾರ್, ಮಾವಿನಹಳ್ಳಿ ಮಹದೇವಸ್ವಾಮಿ, ದೊಡ್ಡಪುರ ಪರಶಿವಮೂರ್ತಿ, ಗಂಗಾಧರಸ್ವಾಮಿ, ಲಿಂಗರಾಜು, ಪರಶಿವಮೂರ್ತಿ, ಕಾಳಯ್ಯ, ಶಿವನಂಜಯ್ಯ, ಮರಡಯ್ಯ, ಸುಂದರ, ಮಂಟೇಲಿಂಗಯ್ಯ, ಮಹದೇವ, ಸಿದ್ದರಾಜು, ಬಸವಣ್ಣ, ಹರ್ಷವರ್ಧನ, ಮಹಾದೇವಿ, ಶಿವಮ್ಮ, ರಾಜಮ್ಮ, ಭಾಗ್ಯಮ್ಮ, ಉಕ್ಕಲಗೆರೆ ರವಿಕುಮಾರ್, ಲಕ್ಷ್ಮೀಪುರ ಲಿಂಗರಾಜು, ತುರಗನೂರು ಲಕ್ಷಣ, ಆದಿಬೆಟ್ಟಹಳ್ಳಿ ಮಲ್ಲಯ್ಯ, ತುಂಬಲ ಅಶ್ವಥ್ ಮತ್ತಿತರರಿದ್ದರು.

ಜನಸಂಪರ್ಕ ಸಭೆ: ವಿದ್ಯುತ್ ಖಾಸಗೀಕರಣಕ್ಕೆ ರೈತರ ವಿರೋಧ

ತಿ.ನರಸೀಪುರ, ಜೂ.24– ವಿದ್ಯುತ್ ಕ್ಷೇತ್ರ ಖಾಸಗೀಕರಣಗೊಳಿಸುವ ಯಾವುದೇ ಪ್ರಯತ್ನವನ್ನು ರೈತ ಸಮುದಾಯ ಸಹಿಸುವುದಿಲ್ಲ. ಖಾಸಗಿ ಕಂಪನಿಗಳ ಕೈಗೆ ವಿದ್ಯುತ್ ವ್ಯವಸ್ಥೆ ಒಪ್ಪಿಸಿದರೆ ರೈತರು ಮತ್ತು ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಲಿದ್ದು, ಇದು ರೈತರ ಪಾಲಿಗೆ ಮರಣಶಾಸನವಾಗಲಿದೆ ಎಂದು ರೈತ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕಾಂ) ಕಚೇರಿಯಲ್ಲಿ ನಂಜನಗೂಡು ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಜಿ.ಎಂ.ಮಹೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯಲ್ಲಿ ರೈತರು ಖಾಸಗೀಕರಣದ ವಿರುದ್ಧ ಧ್ವನಿ ಎತ್ತಿದರು.



ಸಭೆಯಲ್ಲಿ ಸೆಸ್ಕಾಂ ಎಇಇ ವೀರೇಶ್ ಮಾತನಾಡಿದರು.

ರೈತ ಮುಖಂಡ ಕಿರಗಸೂರು ಶಂಕರ್ ಮಾತನಾಡಿ, ಟಾಟಾ ಪವರ್ ಸಂಸ್ಥೆ ವಿದ್ಯುತ್ ಕ್ಷೇತ್ರ ನಿರ್ವಹಣೆಗೆ ಸರ್ಕಾರಕ್ಕೆ ಸಲ್ಲಿಸಿರುವ ಮನವಿ ತಿರಸ್ಕರಿಸಬೇಕು. ಖಾಸಗಿ ಸಂಸ್ಥೆಗಳು ಸೇವೆಗಿಂತ ಲಾಭದ ಉದ್ದೇಶ ಹೊಂದಿದ್ದು, ವಿದ್ಯುತ್ ವ್ಯವಸ್ಥೆಯನ್ನು ಅವರ ವಶಕ್ಕೆ ನೀಡಿದರೆ ರೈತರ ಹಿತಾಸಕ್ತಿ ಸಂಪೂರ್ಣ ಹಾಳಾಗಲಿದೆ. ಈ ಕುರಿತು ರೈತರ ಆಕ್ಷೇಪಣೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ಅಧಿಕಾರಿಗಳು ಕಡ್ಡಾಯವಾಗಿ ತಲುಪಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ರೈತರು ಕೃಷಿ ಪಂಪ್ ಸೆಟ್‌ಗಳಿಗೆ ಅಳವಡಿಸಿರುವ ಸೋಲಾರ್ ವ್ಯವಸ್ಥೆಗಳ ನಿರ್ವಹಣೆ ಸಮರ್ಪಕವಾಗಿಲ್ಲ ಎಂದು ದೂರಿದರು. ಹಲವೆಡೆ ಸೋಲಾರ್ ಘಟಕಗಳು ಕಾರ್ಯ ನಿರ್ವಹಿಸದ ಕಾರಣ ಬಾಳೆ ಸೇರಿದಂತೆ ವಿವಿಧ ಬೆಳೆಗಳು ನೀರಿನ ಕೊರತೆಯಿಂದ ಒಣಗುತ್ತಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು. ಪಟ್ಟಣದಲ್ಲಿ ಅಪರಾಧ ತಡೆಗಾಗಿ ಅಳವಡಿಸಿರುವ ಸಿಸಿ ಕ್ಯಾಮರಾಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ಕಲ್ಪಿಸದಿರುವುದನ್ನು ಪ್ರಶ್ನಿಸಿದರು.

ಸೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ವೀರೇಶ್ ಮಾತನಾಡಿ, ತಾಲೂಕಿನಲ್ಲಿ 11,240 ಕೃಷಿ ಪಂಪ್ ಸೆಟ್‌ಗಳು ಅಧಿಕೃತವಾಗಿ ನೋಂದಾಯಿತವಾಗಿದ್ದು, ಅನಧಿಕೃತ ಪಂಪ್‌ಸೆಟ್‌ಗಳನ್ನು ಗುರುತಿಸಿ ಅಧಿಕೃತಗೊಳಿಸುವ ಕಾರ್ಯ ನಡೆಯುತ್ತಿದೆ. ತಾಲೂಕಿನಲ್ಲಿ ಅಳವಡಿಸಿರುವ 22 ಸೋಲಾರ್ ಘಟಕಗಳ ಪೈಕಿ ಹೆಚ್ಚಿನವು ಸುಸ್ಥಿತಿಯಲ್ಲಿದ್ದು, ಉಳಿದವುಗಳ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.


ರೈತ ಮುಖಂಡ ಸುಜ್ಜಲೂರು ಚಂದ್ರು ಮಾತನಾಡಿ, ಸರ್ಕಾರ ಅಪಾರ ಹಣ ವೆಚ್ಚ ಮಾಡಿ ನಿರ್ಮಿಸಿರುವ ವಿದ್ಯುತ್ ವ್ಯವಸ್ಥೆಯನ್ನು ಖಾಸಗಿ ಬಂಡವಾಳಶಾಹಿಗಳಿಗೆ ಒಪ್ಪಿಸುವುದು ಜನವಿರೋಧಿ ಕ್ರಮವಾಗಿದೆ. ರೈತರ ಹೋರಾಟ ಮತ್ತು ಮನವಿಯನ್ನು ಸರ್ಕಾರದ ಗಮನಕ್ಕೆ ತಂದು ಖಾಸಗೀಕರಣ ಪ್ರಕ್ರಿಯೆಯನ್ನು ಕೈಬಿಡುವಂತೆ ಒತ್ತಾಯಿಸಬೇಕು ಎಂದು ಹೇಳಿದರು.

ಪುರಸಭಾ ಮಾಜಿ ಸದಸ್ಯ ಎನ್.ಲೋಕೇಶ್ ಮಾತನಾಡಿ, ಶಂಭುದೇವನಪುರದ ಬಿ.ಗುರುಮಲ್ಲಪ್ಪ ಅವರು 2005ರಲ್ಲಿಯೇ ನೀರಾವರಿ ಪಂಪ್‌ಸೆಟ್ ಸಂಪರ್ಕಕ್ಕಾಗಿ ಹಣ ಪಾವತಿಸಿದ್ದರೂ, ಇಂದಿಗೂ ಆರ್.ಆರ್. ಸಂಖ್ಯೆ ನೀಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಕೂಡಲೇ ಸಂಪರ್ಕ ನೀಡಬೇಕು ಅಥವಾ ಬಡ್ಡಿ ಸಮೇತ ಹಣ ಹಿಂದಿರುಗಿಸಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ಜಂಗಲ್ ಕಟ್ಟಿಂಗ್ ತ್ವರಿತವಾಗಿ ಕೈಗೊಳ್ಳುವುದು. ಸೀಹಳ್ಳಿ ಗ್ರಾಮದ ವಿದ್ಯುತ್ ಕಂಬಗಳ ಸಮಸ್ಯೆ ಬಗೆಹರಿಸುವುದು ಸೇರಿದಂತೆ ವಿವಿಧ ಗ್ರಾಮಗಳ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಬಗ್ಗೆ ರೈತರು ಮನವಿ ಸಲ್ಲಿಸಿದರು. ಸಾರ್ವಜನಿಕರು ಹಾಗೂ ರೈತರು ನೀಡಿದ ಸಲಹೆ–ಸೂಚನೆಗಳನ್ನು ಪರಿಗಣಿಸಿ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಸಭೆಯಲ್ಲಿ ಸಹಾಯಕ ಇಂಜಿನಿಯರ್ ಚಂದ್ರಕಲಾ, ಕಿರಿಯ ಇಂಜಿನಿಯರ್‌ಗಳಾದ ಮಂಜು, ಗೀತಾ, ರಂಗಸ್ವಾಮಿ, ಫಿಯಾಜ್ ಪಾಷ, ನಾಗರಾಜು ಹಾಗೂ ರೈತ ಮುಖಂಡರಾದ ಕಿರಗಸೂರು ಪ್ರಸಾದ್ ನಾಯಕ್, ಬನ್ನಹಳ್ಳಿಹುಂಡಿ ಶಿವಕುಮಾರ್ ಸೇರಿದಂತೆ ಗ್ರಾಹಕರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಮೂಗೂರು ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ



ವಿಶ್ವ ಯೋಗ ದಿನಾಚರಣೆ ಅಂಗವಾಗಿ ಮೂಗೂರಿನ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಯಿತು. ಈ ವೇಳೆ ಶಾಲೆ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಕಚೇರಿ ಸಿಬ್ಬಂದಿ ವರ್ಗ ಸೇರಿದಂತೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ಇನ್ನಿತರರಿದ್ದರು.

ವೀಕೆಂಡ್ ಬಜಾರ್: ಮಳಿಗೆಗಳ ಬಾಡಿಗೆಗೆ ಅರ್ಜಿ ಆಹ್ವಾನ

ಮೈಸೂರು,ಜೂ.24– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದಿಂದ ಜು.11 ರಿಂದ ಸೆ.6ರವರೆಗೆ ವಾರದಲ್ಲಿ 2 ದಿನ ಅಂದರೆ ಶನಿವಾರ ಮತ್ತು ಭಾನುವಾರ 'ವೀಕೆಂಡ್ ಬಜಾರ್' ಆಯೋಜಿಸಲಾಗುತ್ತಿದೆ. ಸದರಿ ಬಜಾರ್‌ದಲ್ಲಿ ಸಣ್ಣ ಅಂಗಡಿ ಕರಕುಶಲಗಳ ಮಾರಾಟಕ್ಕೆ ಮಳಿಗೆಗಳು ಬಾಡಿಗೆಗೆ ಲಭ್ಯವಿದ್ದು, 100 ಮಳಿಗೆಗಳನ್ನು ಪ್ರಾಧಿಕಾರದಿಂದ ಖರೀದಿಸಿ ಆಯೋಜಿಸಲು ಸಾರ್ವಜನಿಕರು ಮತ್ತು ವ್ಯಾಪಾರಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯನ್ನು ಪ್ರಾಧಿಕಾರದ ಕಚೇರಿಯಲ್ಲಿ ಪಡೆದು ಜು.3ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಚೇರಿಯ ಇ ಮೇಲ್ exhibitionauthority@gmail.com ಅಥವಾ ಸಿಬ್ಬಂದಿ ನವೀನ್ ಕುಮಾರ್ ಮೊ: 8892855236 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೆಣ್ಣು ಮಕ್ಕಳು ಭಾವನೆಗಳ ಸಮತೋಲನದಲ್ಲಿಟ್ಟುಕೊಳ್ಳಿ



ಹೆಣ್ಣುಮಕ್ಕಳ ಜಾಗೃತಿ ಕಾರ್ಯಕ್ರಮ ನಡೆಯಿತು.

ಸರಗೂರು, ಜೂ.24– ಹೆಣ್ಣು ಮಕ್ಕಳು ಭಾವನೆಗಳನ್ನು ಸಮತೋಲನದಲ್ಲಿ ಇಟ್ಟುಕೊಂಡು ದೈಹಿಕ, ಮಾನಸಿಕ, ಭಾವನಾತ್ಮಕವಾಗಿ ಗಟ್ಟಿಗೊಳ್ಳಬೇಕು ಎಂದು ಹೆಣ್ಣುಮಕ್ಕಳ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸುಧಾ ತಿಳಿಸಿದರು.

ಇಲ್ಲಿಗೆ ಸಮೀಪದ ಎಂಎಂಕೆ ಕಾಲೇಜಿನಲ್ಲಿ ಹೆಣ್ಣು ಮಕ್ಕಳ ಹಿತರಕ್ಷಣಾ ಸಮಿತಿ ವತಿಯಿಂದ ನಡೆದ ಹೆಣ್ಣು ಮಕ್ಕಳ ಜಾಗೃತಿ (ಅರಿವು) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕವಾಗಿ ಗಟ್ಟಿಗೊಂಡಾಗ ಮಾತ್ರ ಏನಾದರೂ ಸಾಧಿಸಿ, ತಂದೆ ತಾಯಿ ಕನಸು ನನಸಾಗಿಸಲು ಸಾಧ್ಯ ಎಂದರು.

ಹೆಣ್ಣು ಮಕ್ಕಳಿಗೆ ಶಿಸ್ತು, ಸಂಯಮ, ಹಿರಿಯರನ್ನು ಗೌರವಿಸುವ ಮನೋಭಾವ ಇರಬೇಕು ಎಂದ ಅವರು, ಪ್ರತಿನಿತ್ಯ ನಾವು ಯೋಗ ಮಾಡುವುದನ್ನು ಅಭ್ಯಾಸ ಮಾಡಿಕೊಂಡರೆ ಮುಟ್ಟಿನ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಇಂದಿನ ನಮ್ಮ ಆಧುನಿಕ ಜೀವನ ಶೈಲಿಯಲ್ಲಿ ನಮ್ಮನ್ನು ಕಾಡುತ್ತಿರುವ PCOD, PCOC ಸಮಸ್ಯೆಗಳಿಗೆ ಯೋಗದ ಮುಖಾಂತರ ಪರಿಹಾರ ಕಂಡುಕೊಳ್ಳಿ ಎಂದು ಸಲಹೆ ನೀಡಿದರು.

ಯೋಗ ತರಬೇತುದಾರ ಪುಷ್ಪರಾಜ್ ವಿದ್ಯಾರ್ಥಿನಿಯರಿಗೆ ಯೋಗಾಭ್ಯಾಸ ಮಾಡಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಜಾನ್ ಬಾಸ್ಕೋ, ವಿರುಪಾಕ್ಷ, ಮಹೇಶ್, ಮೋಹನ್, ಪ್ರಸನ್ನ, ಅನಿಲ್, ವಿನಯ್, ಚಂದ್ರು, ಪ್ರವೀಣ್, ಸಿದ್ಧಾರ್ಥ, ಮಹಾದೇವಿ, ತನುಜ, ಸುಪ್ರಿಯ, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರಿದ್ದರು.

ಸಾಲಿಗ್ರಾಮ: ಸಾಲಬಾಧೆ ತಾಳಲಾರದೇ ರೈತ ಆತ್ಮಹತ್ಯೆ

● ಮಾಜಿ ಸಚಿವ, ಶಾಸಕರಿಂದ ಮೃತರ ಕುಟುಂಬಕ್ಕೆ ಸಾಂತ್ವನ ● ಮರಣೋತ್ತರ ಪರೀಕ್ಷೆ ವಿಳಂಬ: ಸಾ.ರಾ.ಮಹೇಶ್‌ರಿಂದ ತಹಸೀಲ್ದಾರ್ ತರಾಟೆಗೆ



ಪ್ರವೀಣ್

ಕೆ.ಆರ್.ನಗರ, ಜೂ.24– ಸಾಲಬಾಧೆ ತಾಳಲಾರದೇ ಯುವ ರೈತ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಾಲಿಗ್ರಾಮ ತಾಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಲೇ.ಕೃಷ್ಣೇಗೌಡರ ಪುತ್ರ ಪ್ರವೀಣ್ (40) ಆತ್ಮಹತ್ಯೆ ಮಾಡಿಕೊಂಡವರು. ಈತ ತನ್ನ 4 ಎಕರೆ ಜಮೀನಿನಲ್ಲಿ ತಂಬಾಕು ಬೆಳೆಯಲು ಸೋಮನಹಳ್ಳಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ಸಾಲ, ಕೈಸಾಲ ಸೇರಿದಂತೆ 13 ಲಕ್ಷ ರೂ. ಸಾಲ ಮಾಡಿದ್ದರು. ಆದರೆ ಕಷ್ಟಪಟ್ಟು ಬೆಳೆದ ತಂಬಾಕಿಗೆ ಉತ್ತಮ ಬೆಲೆ ಸಿಗದೇ ನಷ್ಟ ಅನುಭವಿಸಿದ್ದರು. ಅಲ್ಲದೇ ಸಾಲ ತೀರಿಸುವಂತೆ ಸಾಲಗಾರರ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ತನ್ನ ಜಮೀನಿನಲ್ಲಿದ್ದ ಬೇವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಮೃತನ ಸಹೋದರ ಪ್ರದೀಪ್ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಾಲಿ ಗ್ರಾಮ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಮರಣೋತ್ತರ ಪರೀಕ್ಷೆಗೆ ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ತಹಸೀಲ್ದಾರ್‌ಗೆ ಮಾಜಿ ಸಚಿವ ಸಾ.ರಾ. ಮಹೇಶ್ ತರಾಟೆ: ಮಂಗಳವಾರ ಸಂಜೆಯೇ ಶವವನ್ನು ಮರಣೋತ್ತರ ಪರೀಕ್ಷೆಗೆ ಕೆ.ಆರ್.ನಗರ ತಾಲೂಕು ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ತಂದರೂ ಬುಧವಾರ ಬೆಳಗ್ಗೆ 11 ಗಂಟೆಯಾದರೂ ಮರಣೋತ್ತರ ಪರೀಕ್ಷೆ ನಡೆಯದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಮಾಜಿ ಸಚಿವ ಸಾ.ರಾ.ಮಹೇಶ್ ತಹಸೀಲ್ದಾರ್ ರುಕೀಯಾ ಬೇಗಂ ಅವರನ್ನು ತರಾಟೆ ತೆಗೆದುಕೊಂಡರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಭೇಟಿ ನೀಡಿ ಪ್ರವೀಣ್ ಕುಟುಂಬಕ್ಕೆ ಸಾಂತ್ವನ ಹೇಳಿ ಮಾತನಾಡಿದ ಅವರು, ಸಾಲಿಗ್ರಾಮ ತಾಲೂಕು ಕೇಂದ್ರವಾದರೂ, ಕೆ.ಆರ್.ನಗರಕ್ಕೆ ಶವವನ್ನು ಯಾಕೆ ತಂದಿದ್ದೀರಿ. ಯಾರು ಶವ ತಂದಿದ್ದು, ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ಮಾಡಲು ಸಾಧ್ಯವಿಲ್ಲವೇ. ನಾನು ಶಾಸಕನಾಗಿದ್ದ ವೇಳೆ ಎಲ್ಲಾ ವ್ಯವಸ್ಥೆ ಮಾಡಿದ್ದೆ ಎಂದು ಸಾಲಿಗ್ರಾಮ ತಹಸೀಲ್ದಾರ್ ರುಕೀಯಾ ಬೇಗಂ ಅವರನ್ನು ತರಾಟೆ ತೆಗೆದುಕೊಂಡರು.



ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಶಾಸಕ ಡಿ.ರವಿಶಂಕರ್ ಚರ್ಚೆ ನಡೆಸಿದರು.

ಸಾಲಿಗ್ರಾಮ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿದ್ದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಶವವನ್ನು ಮರಣೋತ್ತರ ಪರೀಕ್ಷೆಗೆ 30 ಕಿಮೀ ದೂರದಿಂದ ಕೆ.ಆರ್.ನಗರಕ್ಕೆ ತಂದಿದ್ದಾರೆ. ಶವ ಪರೀಕ್ಷೆಗೆ ಇಲ್ಲಿಗೆ ತರಲು ಹೇಳಿದವರಾರು ಅವರನ್ನು ಸೇರಿದಂತೆ ಪೊಲೀಸರು ಹಾಗೂ ತಾಲೂಕು ಆರೋಗ್ಯಾಧಿಕಾರಿಯನ್ನು ಸ್ಥಳಕ್ಕೆ ಕರೆಸಿ, ಅಲ್ಲಿವರೆಗೆ ಶವ ತೆಗೆದುಕೊಂಡು ಹೋಗಲು ಬಿಡಲ್ಲ ಎಂದು ಪಟ್ಟು ಹಿಡಿದಾಗ ತಹಸೀಲ್ದಾರ್ ರುಕಿಯಾ ಬೇಗಂ ಅವರು ಸಾ.ರಾ. ಮಹೇಶ್ ಮನವೊಲಿಸಲು ಪ್ರಯತ್ನಿಸಿದರೂ ಸಾಧ್ಯವಾಗದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಶಾಸಕ ಡಿ.ರವಿಶಂಕರ್ ಚರ್ಚಿಸಿದರು.

ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿದ ಶಾಸಕ ರವಿಶಂಕರ್ ಬಳಿಕ ಸಾ.ರಾ. ಮಹೇಶ್ ಬಳಿ ತೆರಳಿ ಶವವನ್ನು ಸಾಲಿಗ್ರಾಮದಿಂದ ಕೆ.ಆರ್.ನಗರಕ್ಕೆ ತಂದಿರುವುದು ನನ್ನ ಗಮನಕ್ಕೆ ಬಂದಿದೆ. ಮುಂದೆ ಈ ರೀತಿ ಆಗದಂತೆ ಕ್ರಮ ವಹಿಸುತ್ತೇನೆ. ಇದಕ್ಕೆ ಯಾರು ಕಾರಣ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುತ್ತೇನೆ ಎಂದು ಮನವೊಲಿಸಿದರು.

ಬಳಿಕ ಮಾತನಾಡಿದ ಶಾಸಕರು ಆತ್ಮಹತ್ಯೆ ಮಾಡಿಕೊಂಡ ಯುವ ರೈತ ಪ್ರವೀಣ್ ಅವರ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲಾಗುವುದು. ಮುಂದಿನ ದಿನಗಳಲ್ಲಿ ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ಮಾಡಲು ಸಕಲ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಕೆ.ಎಲ್.ಜಗದೀಶ್, ಪಟ್ಟಣ ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಎಸ್‌ಐ ಸ್ವಾಮಿಗೌಡ, ಬೆಟ್ಟಹಳ್ಳಿ ಗ್ರಾಮಸ್ಥರು ಇದ್ದರು.

ಜು.1ರಿಂದ ಜಿಲ್ಲೆಯಾದ್ಯಂತ ಮುಂಗಾರು ಬೆಳೆ ಸಮೀಕ್ಷೆ
ತಿಂಗಳಲ್ಲಿ ಶೇ.100 ರಷ್ಟು ಸಾಧನೆಗೆ ಜಿಲ್ಲಾಧಿಕಾರಿ ಸೂಚನೆ

ಮೈಸೂರು,ಜೂ.24(ಎಂಟಿವೈ)– ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಬರಗಾಲದ ಮುನ್ಸೂಚನೆ ಇದ್ದು, ಜು.1 ರಿಂದ 31 ರವರೆಗೆ ನಡೆಯುವ ಮುಂಗಾರು ಬೆಳೆ ಸಮೀಕ್ಷೆಯಲ್ಲಿ ಲೋಪವಾಗದಂತೆ ಕಟ್ಟೆಚ್ಚರ ವಹಿಸಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸೂಚಿಸಿದ್ದಾರೆ.

ಮೈಸೂರು ಜಿ.ಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಬೆಳೆ ಸಮೀಕ್ಷೆ ಅನುಷ್ಠಾನ ಸಮಿತಿ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ, ದ್ವಿದಳಧಾನ್ಯಗಳಲ್ಲಿ ಆತ್ಮ ನಿರ್ಭರತೆ ಅಭಿಯಾನ, ಹಾಗೂ ಎಣ್ಣೆ ಕಾಳು ಅಭಿಯಾನ ಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪೂರ್ವ ಮುಂಗಾರು ಬೆಳೆ ಸಮೀಕ್ಷೆಯನ್ನು ನಿಗದಿತ ಅವಧಿಯೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು. ಜಿಲ್ಲೆಯಲ್ಲಿ ಒಟ್ಟು 9,96,708 ಪ್ಲಾಟ್‌ಗಳಿದ್ದು ಅವುಗಳ ಸಮೀಕ್ಷೆ ನಡೆಸಬೇಕಾಗಿದೆ. ಜಿಲ್ಲೆಯ ಒಟ್ಟು 1,301 ಗ್ರಾಮಗಳಲ್ಲಿ ಈ ಸಮೀಕ್ಷೆ ನಡೆಯಲಿದ್ದು, ಇದಕ್ಕಾಗಿ 1009 ಪಿ.ಆರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಪ್ರತಿ ಬಾರಿ ಸಮೀಕ್ಷೆಯು ಶೇ.94ರಿಂದ ಶೇ.96 ರಷ್ಟು ಮಾತ್ರ ಪ್ರಗತಿ ಕಾಣುತ್ತಿದ್ದು, ಕೆಲವೊಂದು ಭಾಗಗಳು ಕೈಬಿಟ್ಟು ಹೋಗುತ್ತಿವೆ. ಆದರೆ ಈ ಬಾರಿ ಶೇ.1ರಷ್ಟು ಸಮೀಕ್ಷೆ ಬಾಕಿ ಉಳಿದರೂ 9 ಸಾವಿರ ರೈತರು ಯೋಜನೆಯಿಂದ ವಂಚಿತರಾಗುತ್ತಾರೆ. ಬರಗಾಲ ಘೋಷಣೆಯಾಗಿ ರೈತರಿಗೆ ಪರಿಹಾರ ನೀಡಬೇಕಾದ ಸಂದರ್ಭದಲ್ಲಿ ಬೆಳೆ ಸಮೀಕ್ಷೆಯ ಆಧಾರದ ಮೇಲೆಯೇ ಪರಿಹಾರ ವಿತರಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ರೈತರು ಸಮೀಕ್ಷೆಯಿಂದ ಹೊರಗುಳಿಯಬಾರದು ಎಂದು ತಿಳಿಸಿದರು.

ಸಮೀಕ್ಷೆ ಕಾರ್ಯಕ್ಕೆ ಸರಿಯಾಗಿ ಸ್ಪಂದಿಸದೆ ನಿಷ್ಕ್ರಿಯರಾಗಿರುವ ಅಥವಾ ಕೊನೆ ಕ್ಷಣದಲ್ಲಿ ಕೈಕೊಡುವ ಪಿ.ಆರ್‌ಗಳನ್ನು ಈಗಲೇ ಗುರುತಿಸಿ, ಅವರ ಜಾಗಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ವಹಿಸಲಾಗಿದೆ. ಈ ವಿಷಯದಲ್ಲಿ ತಹಸೀಲ್ದಾರ್‌ಗಳಿಗೂ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗುವುದು ಎಂದರು.

ಸೆಂಟ್ರಲ್ ಫ್ರೂಟ್ ಐಡಿ: ರಾಜ್ಯದಲ್ಲಿ ಫ್ರೂಟ್ ಐಡಿ ಇರುವಂತೆ ಸೆಂಟ್ರಲ್ ಫ್ರೂಟ್ ಐಡಿಯನ್ನು ಕ್ರಿಯೇಟ್ ಮಾಡಬೇಕಿದ್ದು, 50,194 ಸೆಂಟ್ರಲ್ ಫ್ರೂಟ್ ಐಡಿ ಬಾಕಿ ಇರುತ್ತದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ಪ್ರೋತ್ಸಾಹ ಧನ ನೀಡಲು ಸೆಂಟ್ರಲ್ ಫ್ರೂಟ್ ಐಡಿ ಅವಶ್ಯಕವಾಗಿದೆ. ಆದ್ದರಿಂದ ಆದ್ಯತೆಯ ಮೇಲೆ ಮಾಡಬೇಕು. ರಾಜ್ಯದ ಫ್ರೂಟ್ ಐಡಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 3,31,342, ಫ್ರೂಟ್ಸ್ ಐಡಿಗಳಿಗೆ ಆ್ಯಪ್‌ನಲ್ಲಿ ರೈತರ ಕೆಲವು ಪ್ಲಾಟ್‌ಗಳು ಮಾತ್ರ ನೊಂದಣಿಯಾಗಿದ್ದು, ಉಳಿದಿರುವ ಪ್ಲಾಟ್‌ಗಳನ್ನು ಫ್ರೂಟ್ಸ್ ಐಡಿಯಲ್ಲಿ ಸೇರ್ಪಡೆ ಮಾಡುವಂತೆ ಸೂಚನೆ ನೀಡಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಮಾತನಾಡಿ, ಈ ಬಾರಿ ಬರಗಾಲದ ಪರಿಸ್ಥಿತಿ ಇರುವುದರಿಂದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹೆಚ್ಚಿನ ರೈತರು ನೋಂದಾಯಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ ಕೆಲವು ದ್ವಿದಳ ಧಾನ್ಯಗಳ ವಿಮೆ ನೋಂದಣಿಗೆ ಅಂತಿಮ ದಿನ ಹತ್ತಿರವಿರುವುದರಿಂದ ಗ್ರಾಮ ಮಟ್ಟದಲ್ಲಿ ಆಟೋ ರಿಕ್ಷಾದಲ್ಲಿ ಪ್ರಚಾರ ಹಾಗೂ ಕರಪತ್ರಗಳ ಮೂಲಕ ವ್ಯಾಪಕ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಘಟಕಗಳಿಗೆ ಸಾಮಾನ್ಯ ವರ್ಗ ಹಾಗೂ ಎಸ್ಸಿ, ಎಸ್ಟಿ ಫಲಾನುಭವಿಗಳಿಗೆ ಸಬ್ಸಿಡಿ ನೀಡಲಾಗುತ್ತಿದ್ದು, ಇದರ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಎಸ್. ಯುಕೇಶ್ ಕುಮಾರ್ ಸೇರಿದಂತೆ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ಜಿ.ಪಂ. ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಬೆಳೆ ಸಮೀಕ್ಷೆ ಅನುಷ್ಠಾನ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಮುಂಗಾರು ಬೆಳೆ ಸಮೀಕ್ಷೆಯ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಲಾಸಿ ಪಾಳ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಬಾಲನ್ (ತ)	4 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಇಂದು ವರುಣ ಮಹೇಶ್ ಹುಟ್ಟುಹಬ್ಬ; ಸೇವಾ ಕಾರ್ಯಗಳೊಂದಿಗೆ ಆಚರಣೆ



ಮೈಸೂರು, ಜೂ.24– ಸಮಾಜ ಸೇವಕ, ಚಲನಚಿತ್ರ ನಿರ್ಮಾಪಕ, ಕೆಪಿಸಿಸಿ ಕಾರ್ಯದರ್ಶಿ, ಮೈಸೂರು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಿಕಾಸ ವೇದಿಕೆಯ ಅಧ್ಯಕ್ಷರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ನಿಕಟ ಪೂರ್ವ ಕೋಶಾಧ್ಯಕ್ಷ ಹಾಗೂ ವರುಣ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವರುಣ ಮಹೇಶ್ ಅವರ ಜನ್ಮ ದಿನದ ಪ್ರಯುಕ್ತ ಗುರುವಾರ (ಜೂ.24) ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮೈಸೂರು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಿಕಾಸ ವೇದಿಕೆ ವತಿಯಿಂದ ರಕ್ತದಾನ ಶಿಬಿರ, ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಶಾಲಾ ಬ್ಯಾಗ್ ವಿತರಣೆ, ಅನಾಥಾಶ್ರಮದ ಮಕ್ಕಳಿಗೆ ಊಟದ ವ್ಯವಸ್ಥೆ ಹಾಗೂ ಅಗತ್ಯ ವಸ್ತುಗಳ ವಿತರಣೆ ಸೇರಿದಂತೆ ಹಲವು ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದ್ದು, ಹುಟ್ಟುಹಬ್ಬ ಸಮಾರಂಭದ ವೇಳೆ ವಿವಿಧ ಗಣ್ಯರು, ಸಮಾಜಮುಖಿ ಸಂಘಟನೆಗಳ ಮುಖಂಡರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ವರುಣ ಮಹೇಶ್ ಅವರಿಗೆ ಶುಭಾಶಯಗಳನ್ನು ಕೋರಲಿದ್ದಾರೆ ಎಂದು ವೇದಿಕೆ ಪದಾಧಿಕಾರಿಗಳು ತಿಳಿಸಿದ್ದಾರೆ.

ಆಹಾರ ಸುರಕ್ಷತೆ ಕುರಿತು ಮುಂದುವರೆದ ಪರಿಶೀಲನೆ



ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದ ಆಹಾರ ಸುರಕ್ಷತಾ ಅಧಿಕಾರಿಗಳು.

ಮೈಸೂರು,ಜೂ.24(ಪಿಎಂ)– ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಆಹಾರ ಸುರಕ್ಷಾ ಅಧಿಕಾರಿಗಳ ತಂಡಗಳು ಮೈಸೂರು ನಗರ ಮತ್ತು ತಾಲೂಕು ವ್ಯಾಪ್ತಿಯಲ್ಲಿ ಸುರಕ್ಷತಾ ಕ್ರಮ ಅನುಸರಿಸುತ್ತಿರುವ ಸಂಬಂಧ ಆಹಾರೋದ್ಯಮಗಳು, ಬೀದಿಬದಿ ವ್ಯಾಪಾರ ಸ್ಥಳಗಳು ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಬುಧವಾರವೂ ಪರಿಶೀಲನೆ ಮುಂದುವರೆಸಿದವು.

ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಅಂಕಿತ ಅಧಿಕಾರಿ ಡಾ.ಎ.ಎನ್.ಕಾಂತರಾಜು ಅವರ ನೇತೃತ್ವದಲ್ಲಿ ಆಹಾರೋದ್ಯಮಗಳ ಪರಿಶೀಲನೆ ನಡೆಸಲಾಯಿತು. ಈ ವೇಳೆ ವಿವಿಧ ರೀತಿಯ ಒಟ್ಟು 27 ಆಹಾರೋದ್ಯಮಗಳಲ್ಲಿ ಪರಿಶೀಲಿಸಿ, ಈ ಪೈಕಿ ನಿಯಮ ಪಾಲನೆ ಮಾಡದ 9 ಆಹಾರ ಸಂಬಂಧಿತ ವಹಿವಾಟುಗಳಿಗೆ ನೋಟಿಸ್ ಜಾರಿಗೊಳಿಸಲಾಯಿತು. ಇದೇ ವೇಳೆ ತಪ್ಪಾಗಿ ಬ್ರ್ಯಾಂಡಿಂಗ್ ಮಾಡಿದ್ದಕ್ಕಾಗಿ ನಾಲ್ಕು ರೀತಿಯ ಆಹಾರ ಪದಾರ್ಥಗಳನ್ನು ವಶಕ್ಕೆ ಪಡೆಯಲಾಯಿತು. ಜೊತೆಗೆ 2 ಕೆಜಿಗೂ ಅಧಿಕ ಪ್ರಮಾಣದ ನಿಷೇಧಿತ ಹಾಗೂ ಬಿಸಾಡಿದ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಯಿತು.

ಕಲಬೆರಕೆ ಬಟಾಣಿ ವಶಕ್ಕೆ: ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮತ್ತೊಂದು ತಂಡ ಪರಿಶೀಲನೆ ನಡೆಸಿತು. ಶಂಕರ ಮಠದ ರಸ್ತೆ, ಕಾಳಿದಾಸ ರಸ್ತೆಯ ಆಹಾರೋದ್ಯಮ ಹಾಗೂ ಬೀದಿ ವ್ಯಾಪಾರಿಗಳು ಸೇರಿದಂತೆ ಒಟ್ಟು 24 ಸ್ಥಳಗಳಲ್ಲಿ ಮಂಗಳವಾರ ಸಂಜೆ 4ರಿಂದ ಬುಧವಾರ ಸಂಜೆ 4ರವರೆಗೆ ಪರಿಶೀಲನೆ ನಡೆಸಲಾಯಿತು. ಪರಿಶೀಲಿಸಿದ 21 ಬೀದಿ ಬದಿ ವ್ಯಾಪಾರಗಳಲ್ಲಿ 3ಕ್ಕೆ ನೋಟಿಸ್ ಜಾರಿಗೊಳಿಸಲಾಗಿದೆ.

ತಪ್ಪಾಗಿ ಬ್ರ್ಯಾಂಡ್ ಮಾಡಲಾದ ಮತ್ತು ಶಂಕಿತ ಕಲಬೆರಕೆ ಖೋವಾವನ್ನು 32 ಕೆಜಿಯಷ್ಟು ವಶಪಡಿಸಿಕೊಳ್ಳಲಾಯಿತು. ಇದರ ಮೌಲ್ಯವನ್ನು 8 ಸಾವಿರ ರೂ. ಎಂದು ಅಂದಾಜಿಸಲಾಗಿದೆ. ಅಲ್ಲದೆ, 1,300 ರೂ. ಮೌಲ್ಯದ 13 ಕೆಜಿಯಷ್ಟು ಕಲಬೆರಕೆ ಹಸಿರು ಬಟಾಣಿಯನ್ನು ವಶಪಡಿಸಿಕೊಳ್ಳಲಾಯಿತು.

ರಾಜ್ಯ ಸರ್ಕಾರದ ಗಮನ ಸೆಳೆದ 'ಸ್ಟಾರ್ ಆಫ್ ಮೈಸೂರ್' ಜಾಲತಾಣದ ವರದಿ

ಮೈಸೂರು,ಜೂ.24(ಪಿಎಂ)– ಚಾಮುಂಡಿಬೆಟ್ಟದ ದೇವಸ್ಥಾನ ಹಾಗೂ ಇಲ್ಲಿನ ಅರಣ್ಯ ಪ್ರದೇಶದಲ್ಲಿ ಪ್ಲಾಸ್ಟಿಕ್ ಬಾಟಲಿ ಸೇರಿದಂತೆ ಏಕಬಳಕೆ ಪ್ಲಾಸ್ಟಿಕ್ ಹಾಗೂ ತರಾವರಿ ತ್ಯಾಜ್ಯ ಎಲ್ಲೆಂದರಲ್ಲಿ ಬಿದ್ದಿರುವ ಸಂಬಂಧ 'ಮೈಸೂರು ಮಿತ್ರ'ನ ಸಹೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಇತ್ತೀಚೆಗೆ ಬಿತ್ತರಿಸಿದ್ದ ವೀಡಿಯೊ ಸಹಿತ ವರದಿ ರಾಜ್ಯ ಸರ್ಕಾರದ ಗಮನ ಸೆಳೆದಿದೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸ್ವಚ್ಛತೆಗೆ ಕ್ರಮ ವಹಿಸಿರುವ ಬಗ್ಗೆ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಅವರಿಗೆ ಬುಧವಾರ ಸದರಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ, ಪತ್ರ ಮುಖೇನ ತಿಳಿಸಿದ್ದಲ್ಲದೆ, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರುವುದಾಗಿ ಸಹ ಪತ್ರದಲ್ಲಿ ತಿಳಿಸಿದ್ದಾರೆ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಆಗಮಿಸುವ ಭಕ್ತರು ತರುವ ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಿ ದೇವಾಲಯದ ಹಿಂಭಾಗದಲ್ಲಿರುವ ಕಸದ ತೊಟ್ಟಿಗೆ ಹಾಕಿ ಸಂಗ್ರಹಣೆ ಹೆಚ್ಚಾದ ನಂತರ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಲಾಗುತ್ತದೆ. ಉಲ್ಲೇಖದ ದೂರಿನ ದಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಕಾರಣ ಕಸದ ಪ್ರಮಾಣ ಸಹ ಹೆಚ್ಚಾಗಿತ್ತು. ಮಾರನೆ ದಿನ ಸದರಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದ್ದಲ್ಲದೆ, ಪತ್ರದೊಂದಿಗೆ ಕಸದ ತೊಟ್ಟಿಯ ಛಾಯಾಚಿತ್ರ ಸಹ ಲಗತ್ತಿಸಿದ್ದಾರೆ.

ಜೊತೆಗೆ ಪ್ರಾಧಿಕಾರಕ್ಕೆ ಸೇರಿದ ಎಲ್ಲಾ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಪ್ರತಿನಿತ್ಯ ಮಾಡಲಾಗುತ್ತಿದೆ. ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು ಹೊಸದಾಗಿ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ಸಹ ಅಳವಡಿಸಿಕೊಳ್ಳಲಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರುವುದಾಗಿ ಕಾರ್ಯದರ್ಶಿಗಳು ಪತ್ರದಲ್ಲಿ ವಿನಂತಿಸಿದ್ದಾರೆ. ಈ ಸಕಾರಾತ್ಮಕ ಬೆಳವಣಿಗೆಯ ಪತ್ರ ವ್ಯವಹಾರವನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ.ಸುಧೀಂದ್ರ ಅವರು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.



ಚಾಮುಂಡಿಬೆಟ್ಟದಲ್ಲಿ ದೇವಾಲಯದ ಹಿಂಭಾಗದಲ್ಲಿರುವ ಕಸದ ತೊಟ್ಟಿಯ ಛಾಯಾಚಿತ್ರ.

ಜ್ಯೋತಿನಗರ ಉಪವಿಭಾಗದ ಜನಸಂಪರ್ಕ ಸಭೆ ಮುಂದೂಡಿಕೆ

ಮೈಸೂರು: ಜ್ಯೋತಿನಗರ ಉಪವಿಭಾಗ ಕಚೇರಿಯಲ್ಲಿ ಜೂನ್ 24 ರಂದು ನಡೆಸಲು ಉದ್ದೇಶಿಸಲಾಗಿದ್ದ 1ನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಆಡಳಿತಾತ್ಮಕ ಕಾರಣಗಳಿಂದ ಜೂ.29 ರಂದು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಗಿದೆ. ಆದುದರಿಂದ ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ, ಜ್ಯೋತಿನಗರ ಉಪವಿಭಾಗದಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂದು ಚಾ.ವಿ.ಸ.ನಿ.ನಿ. ನ.ರಾ. ಮೊಹಲ್ಲಾದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ

ಮೈಸೂರು: ಮೈಸೂರಿನ ಆಲನಹಳ್ಳಿಯಲ್ಲಿರುವ ಶ್ರೀ ಕುದೇರು ಶಾಖ ಮಠದಲ್ಲಿ ಶ್ರೀ ವೀರಶೈವ ಲಿಂಗಾಯತ ಸಮಾನಮನಸ್ಕರ ಸ್ನೇಹ ಬಳಗದ ಸಂಘದಿಂದ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಇದೇ ಸಂದರ್ಭದಲ್ಲಿ ಕುದೇರು ಮಠದ ಕಿರಿಯ ಶ್ರೀ ಗುರುಲಿಂಗ ಮಹಾಸ್ವಾಮೀಜಿ, ಮತ್ತು ಸೋಮೇಶ್ವರಪುರದ ಶ್ರೀ ಗುರುಸ್ವಾಮೀಜಿ ಮತ್ತು ಮುಖ್ಯ ಭಾಷಣಕಾರರಾಗಿ ಸಂಸ್ಕೃತಿ ಚಿಂತಕರು ಹಾಲಹಳ್ಳಿಯ ಪೃಥ್ವಿರಾಜ್, ಬಳಗದ ಅಧ್ಯಕ್ಷ ಎಂಡಿ ಶಿವರಾಜು, ಉಪಾಧ್ಯಕ್ಷರಾದ ಮಾದಪ್ಪ ಮತ್ತು ರಾಜಪ್ಪ, ಪ್ರಧಾನ ಕಾರ್ಯದರ್ಶಿ ಸಿ.ಎಸ್.ಗುರುಸ್ವಾಮಿ, ಸಂಘಟನಾ ಕಾರ್ಯದರ್ಶಿ ಬಿ ದೊರೆಸ್ವಾಮಿ, ಖಜಾಂಚಿ ರೇವಣ್ಣ, ಬಸವಣ್ಣ, ಬಸವ ಬಳಗ ಪೂರ್ವ ವಲಯ ಟ್ರಸ್ಟ್‌ನವರು ಉಪಸ್ಥಿತರಿದ್ದರು.

ಮಾಲ್ ಆಫ್ ಮೈಸೂರ್‌ನಲ್ಲಿ ಜು.2ರಿಂದ ಮೂರು ದಿನ ಶಾಪ್ ಮೋರ್, ವಿನ್ ಮೋರ್ ಅಭಿಯಾನ

ರಿಯಾಯಿತಿಯೊಂದಿಗೆ ಖಚಿತ ಉಡುಗೊರೆಯ ಸದಾವಕಾಶ



ಮೈಸೂರು, ಜೂ.24– ಮೈಸೂರಿನ ಪ್ರಮುಖ ಶಾಪಿಂಗ್ ಹಾಗೂ ಮನರಂಜನಾ ತಾಣವಾದ 'ಮಾಲ್ ಆಫ್ ಮೈಸೂರ್' ಜುಲೈ 2 ರಿಂದ 5 ರವರೆಗೆ 'ಶಾಪ್ ಮೋರ್, ವಿನ್ ಮೋರ್' ಅಭಿಯಾನವನ್ನು ಆಯೋಜಿಸುತ್ತಿದೆ.

ಈ ವಿಶೇಷ ಉತ್ಸವದಲ್ಲಿ ಭಾಗವಹಿಸುವ ಬ್ರ್ಯಾಂಡ್‌ಗಳಲ್ಲಿ ಗ್ರಾಹಕರು ಫ್ಲಾಟ್ ಶೇ.50ರಷ್ಟು ರಿಯಾಯಿತಿ ಜೊತೆಗೆ ಖಚಿತ ಉಡುಗೊರೆ ಗೆಲ್ಲುವ ಅವಕಾಶವಿದೆ. ಈ ಮೂರು ದಿನಗಳಲ್ಲಿ ಮಧ್ಯಾಹ್ನ 12ರಿಂದ ರಾತ್ರಿ 8 ರವರೆಗೆ ಅಭಿಯಾನದಲ್ಲಿ ಪಾಲ್ಗೊಂಡು, 5 ಸಾವಿರ ಮೌಲ್ಯದ ವಸ್ತುಗಳ ಖರೀದಿಗೆ ಚಾರ್ಜ್ ಮಾಡಬಹುದಾದ ಪೋರ್ಟಬಲ್ ಮಿನಿ ಹ್ಯಾಂಡ್ ಫ್ಯಾನ್, 15 ಸಾವಿರ ಮೌಲ್ಯದ ಖರೀದಿಗೆ ಇಯರ್‌ಪಾಡ್ಸ್ ಹಾಗೂ 30 ಸಾವಿರ ಮೌಲ್ಯದ ಖರೀದಿಗೆ ಸೌಂಡ್‌ಬಾರ್ ಅನ್ನು ಉಡುಗೊರೆಯಾಗಿ ಪಡೆಯಬಹುದಾಗಿದೆ. ಈ ಕುರಿತು ಮಾಹಿತಿ ನೀಡಿರುವ ಮಾಲ್ ಆಫ್ ಮೈಸೂರ್‌ನ ಉಪಾಧ್ಯಕ್ಷ ಸಂದೀಪ್ ಕುಮಾರ್ ಎಂಡ್ ಆಫ್ ಸೀಸನ್ ಸೇಲ್, ಗ್ರಾಹಕರು ಅತ್ಯಂತ ನಿರೀಕ್ಷಿಸುವ ಶಾಪಿಂಗ್ ಅವಧಿಯಾಗಿದೆ. ಈ ಬಾರಿ ಫ್ಲಾಟ್ ಶೇ.50ರಷ್ಟು ರಿಯಾಯಿತಿಯೊಂದಿಗೆ ಖಚಿತ ಉಡುಗೊರೆ ನೀಡುವ ಮೂಲಕ ಗ್ರಾಹಕರಿಗೆ ಇನ್ನಷ್ಟು ಮೌಲ್ಯಯುತ ಹಾಗೂ ಆನಂದದಾಯಕ ಶಾಪಿಂಗ್ ಅನುಭವವನ್ನು ಕಲ್ಪಿಸಲು ನಾವು ಬದ್ಧರಾಗಿದ್ದೇವೆ ಎಂದಿದ್ದಾರೆ.

ಇಂದು ಎನ್‌ಟಿಎಂ ಶಾಲೆ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ

ಮೈಸೂರು, ಜೂ.24– ಮೈಸೂರಿನ ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ವತಿಯಿಂದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಎನ್‌ಟಿಎಂ ಶಾಲೆ ವಿದ್ಯಾರ್ಥಿಗಳಿಗೆ ಗುರುವಾರ(ಜೂ.25) ಬೆಳಗ್ಗೆ 11ಕ್ಕೆ ಕಲಿಕಾ ಸಾಮಗ್ರಿಗಳ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಶಾಸಕ ಕೆ.ಹರೀಶ್‌ಗೌಡ, ಸಮಾಜ ಸೇವಕ ರಘುರಾಮ್ ವಾಜಪೇಯಿ, ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಯುವಕನ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಶಿವಣ್ಣ ಕುಟುಂಬದವರ ಜಮೀನಿಗೆ ದಾಖಲೆ ಮಾಡಿ

ಮಾಜಿ ಸಚಿವ ಎನ್.ಮಹೇಶ್ ಆಗ್ರಹ

ಮೂರ್‍ನಾಲ್ಕು ದಶಕಗಳಿಂದ ಉಳುಮೆ ಮಾಡುತ್ತಿದ್ದರೂ ಈಗಲೂ ಭೂಮಿ ಆರೋಪಿ ತಾತನ ಹೆಸರಲ್ಲಿದೆ; ಈ ಬಗ್ಗೆ ಕಂದಾಯ ಅಧಿಕಾರಿಗಳು ಶೀಘ್ರ ಕ್ರಮ ವಹಿಸಬೇಕಿದೆ

ಮೈಸೂರು,ಜೂ.24(ಎಂಟಿವೈ)– ಸ್ವಗ್ರಾಮದ ಯುವಕನೊಬ್ಬನ ಕುಚೇಷ್ಟೆ, ಕಿರುಕುಳದಿಂದ ಬೇಸತ್ತು ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಅವರ ಕುಟುಂಬಸ್ಥರನ್ನು ಮಾಜಿ ಸಚಿವ ಎನ್.ಮಹೇಶ್ ಭೇಟಿ ಮಾಡಿ, ಸಾಂತ್ವನ ಹೇಳಿದರು.

ತಿ.ನರಸೀಪುರ ತಾಲೂಕಿನ ಹಳೆಕೆಂಪಯ್ಯನಹುಂಡಿ ಗ್ರಾಮದ ಮೃತ ಶಿವಣ್ಣ ಅವರ ನಿವಾಸಕ್ಕೆ ತೆರಳಿ, ಶಿವಣ್ಣ ಅವರ ತಾಯಿ ಮಲ್ಲಮ್ಮ, ಹಿರಿಯ ಪುತ್ರಿ ಬೃಂದಾ ಹಾಗೂ ಅಳಿಯ ಶಿವಕುಮಾರ್‌ಗೆ ಸಾಂತ್ವನ ಹೇಳಿದರಲ್ಲದೆ, ಕುಟುಂಬದ ಜಮೀನಿಗೆ ಸಂಬಂಧಿಸಿದ ದಾಖಲೆ ಪತ್ರ ವಿಚಾರವಾಗಿ ಗ್ರಾಮದ ಮುಖಂಡರೊಂದಿಗೆ ಚರ್ಚಿಸಿದರು.

ಈ ವೇಳೆ ಮಾತನಾಡಿದ ಎನ್.ಮಹೇಶ್, ಹಸಮಣೆ ಏರಬೇಕಿದ್ದ ಯುವತಿ ಹಾಗೂ ಆಕೆಯ ತಂದೆ–ತಾಯಿ ಆತ್ಮಹತ್ಯೆ ಮಾಡಿಕೊಂಡಿರುವುದು ಅತ್ಯಂತ ನೋವಿನ ಸಂಗತಿ. ಹಳೆ ಕೆಂಪಯ್ಯನಹುಂಡಿ ಗ್ರಾಮದ ಅಂದಾನಿಗೌಡನ ಮಗ ಉಲ್ಲಾಸ್‌ಗೌಡನ ಹುಚ್ಚಾಟ, ಕುಚೇಷ್ಟೆಯಿಂದಾಗಿ ಅಮಾಯಕ ಕುಟುಂಬ ಬಲಿಯಾಗಿದೆ ಎಂದರು.



ಪತ್ನಿ, ಪುತ್ರಿಯೊಂದಿಗೆ ಆತ್ಮಹತ್ಯೆಗೆ ಶರಣಾದ ತಿ.ನರಸೀಪುರ ತಾಲೂಕಿನ ಹಳೆಕೆಂಪಯ್ಯನಹುಂಡಿ ಗ್ರಾಮದ ಮೃತ ಶಿವಣ್ಣ ಅವರ ನಿವಾಸಕ್ಕೆ ಮಾಜಿ ಸಚಿವ ಎನ್.ಮಹೇಶ್ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು.

ಉಪ್ಪಾರ ಸಮುದಾಯದ ಶಿವಣ್ಣ ನಾಗರತ್ನ, ರಕ್ಷಿತಾ ಸಾವಿಗೆ ಉಲ್ಲಾಸ್‌ಗೌಡನೇ ಕಾರಣ ಎಂದು ಡೆತ್‌ನೋಟ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಇದರಿಂದ ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು. ಆತ ಜೈಲಿನಿಂದ ಹೊರಗೆ ಬಾರದಂತೆ ನೋಡಿಕೊಳ್ಳಬೇಕು. ಎಫ್‌ಐಆರ್‌ನಲ್ಲಿ ಅದಕ್ಕೆ ಪೂರಕವಾದ ಸೆಕ್ಷನ್ ಹಾಕಬೇಕು. ಚಾರ್ಜ್‌ಶೀಟ್‌ನಲ್ಲೂ ಕೃತ್ಯದ ಬಗ್ಗೆ ಕಠಿಣವಾಗಿ ನಮೂದಿಸಬೇಕು ಎಂದು ಆಗ್ರಹಿಸಿದರು.

ಜಮೀನಿಗೆ ದಾಖಲೆ ಮಾಡಿಕೊಡಬೇಕು: ಗ್ರಾಮದ ಸರ್ವೆ ನಂ.153ರಲ್ಲಿ 3.18 ಗುಂಟೆ ಜಮೀನಿದ್ದು, ಅದನ್ನು 30–40 ವರ್ಷಗಳಿಂದ ಮೃತ ಶಿವಣ್ಣ ಅವರ ಕುಟುಂಬ ಉಳುಮೆ ಮಾಡುತ್ತಿದೆ ಆದರೆ, ಅಗತ್ಯ ದಾಖಲೆ ಮಾಡಿಸಿಕೊಂಡಿಲ್ಲ. ಸದರಿ ಜಮೀನು ಆರೋಪಿ ಉಲ್ಲಾಸಗೌಡನ ತಾತನ ಹೆಸರಿನಲ್ಲಿದೆ. ಕಂದಾಯ ಇಲಾಖೆ ಅವರು ಭೂಮಿಗೆ ಸಂಬಂಧಿಸಿದ ದಾಖಲೆ ಮಾಡಿಕೊಡಬೇಕು. ಶಿವಣ್ಣ ಕುಟುಂಬ ನಡೆಸುವ ಹೋರಾಟದಲ್ಲಿ ನಾನು ಭಾಗಿಯಾಗುತ್ತೇನೆ. ಶಿವಣ್ಣ ಅವರ ತಾಯಿ ಮಲ್ಲಮ್ಮ, ಹಿರಿಯ ಪುತ್ರಿ ಬೃಂದಾ, ಅಳಿಯ ಶಿವಕುಮಾರ್ ಅವರಿಗೆ ಭದ್ರತೆ ಒದಗಿಸಬೇಕಾಗಿದೆ. ಸದನದಲ್ಲಿ ಈ ಪ್ರಕರಣ ಚರ್ಚಿಸುವಂತೆ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುತ್ತೇನೆ ಎಂದರು.

ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಉಪ್ಪಾರ ಸಮುದಾಯದ 42 ಕುಟುಂಬ, ಆರೋಪಿ ಉಲ್ಲಾಸ್‌ಗೌಡ ಸೇರಿರುವ ಒಕ್ಕಲಿಗ ಸಮುದಾಯದ 300 ಕುಟುಂಬಗಳಿವೆ. ಹಾಗಾಗಿ ಮೃತ ಶಿವಣ್ಣ ಕುಟುಂಬಕ್ಕೆ ಭದ್ರತೆ ಒದಗಿಸಬೇಕಾಗಿದೆ. ವಿವಾಹ ನಿಶ್ಚಯ, ಲಗ್ನ ಪತ್ರಿಕೆ ಹಂಚುವಾಗಲೂ ಆರೋಪಿ ಜೊತೆಯಲ್ಲೇ ಓಡಾಡಿದ್ದಾನೆ. ಈ ಹಿಂದೆ ತೆಗೆದುಕೊಂಡಿದ್ದ ಸೆಲ್ಫಿ ಮುಂದಿಟ್ಟುಕೊಂಡು ಕುಚೇಷ್ಟೆ ಮಾಡಿ ಕುಟುಂಬವನ್ನೇ ನಾಶ ಮಾಡಿರುವುದು ಕ್ಷಮಿಸಲಾಗದ ಅಪರಾಧ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಜೈಕುಮಾರ್, ಅಂದಾನಿಗೌಡ, ಕುಪ್ಪೆಗಾಲ ಶಿವಬಸಪ್ಪ, ಚನ್ನೇಗೌಡ, ನಿರಂಜನ್ ಮತ್ತಿತರರು ಉಪಸ್ಥಿತರಿದ್ದರು.

ಬದುಕಿರುವ ವ್ಯಕ್ತಿಗೆ ಪಾಲಿಕೆಯಿಂದ ಮರಣ ಪ್ರಮಾಣ ಪತ್ರ ; ಸರಿಪಡಿಸಲು ಒತ್ತಾಯಿಸಿ ಪ್ರತಿಭಟನೆ

ಮೈಸೂರು,ಜೂ.24(ಪಿಎಂ)– ತಂದೆಯ ಮರಣ ಪ್ರಮಾಣ ಪತ್ರ ಕೋರಿ ಅವರ ಪುತ್ರ ಅರ್ಜಿ ಸಲ್ಲಿಸಿದರೆ, ತಂದೆಯ ಜೊತೆಗೆ ಬದುಕಿರುವ ಅವರ ಪುತ್ರ ಗುರುಸ್ವಾಮಿ ಎಂಬುವವರಿಗೂ ಮರಣ ಪ್ರಮಾಣ ಪತ್ರ ನೀಡಲಾಗಿದೆ. ಇದರಿಂದ ಅವರು ಸರ್ಕಾರಿ ಸೌಲಭ್ಯ ಪಡೆಯಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘ–ಹಸಿರು ಸೇನೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ನೇತೃತ್ವದಲ್ಲಿ ಗುರುಸ್ವಾಮಿ ಜೊತೆಗೆ ಜಮಾಯಿಸಿದ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು, ಪಾಲಿಕೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹೊನಕಣಪುರ ಗ್ರಾಮದ ಶಿವಣ್ಣಚಾರಿ ಎಂಬುವವರು 2021ರ ಏ.14 ರಂದು ಮೈಸೂರಿನ ಕೆಆರ್ ಆಸ್ಪತ್ರೆಗೆ ಕರೆತರುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದು, ಕೆಲ ದಿನಗಳ ನಂತರ ಮೃತರ ಪುತ್ರ ಗುರುಸ್ವಾಮಿ ಅವರು ತಮ್ಮ ತಂದೆಯ ಮರಣ ಪ್ರಮಾಣ ಪತ್ರ ಕೋರಿ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 6ಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ಶಿವಣ್ಣಚಾರಿ ಸಾವನ್ನಪ್ಪಿರುವ ಸಂಬಂಧ ಮರಣ ಪ್ರಮಾಣ ಪತ್ರ ನೀಡುವ ಜೊತೆಗೆ ಗುರುಸ್ವಾಮಿ ಅವರ ಮರಣ ಪ್ರಮಾಣ ಪತ್ರವನ್ನೂ ನೀಡಲಾಗಿದೆ. ಇದರಿಂದ ಗುರುಸ್ವಾಮಿಯವರು ಯಾವುದೇ ಸೌಲಭ್ಯ ಪಡೆಯಲಾಗದ ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಸಂಘದ ರಾಜ್ಯ ಉಪಾಧ್ಯಕ್ಷ ಹಿಮ್ಮಾವು ರಘು ಮಾತನಾಡಿ, ಪಾಲಿಕೆ ಅಧಿಕಾರಿಗಳು ಕೋರ್ಟ್‌ಗೆ ಹೋಗಿ ಎಂದು ಸರಿಪಡಿಸದೇ ಗುರುಸ್ವಾಮಿಯವರನ್ನು ಸತಾಯಿಸಿದ್ದಾರೆ. ಹಾಗಾಗಿ ಗುರುಸ್ವಾಮಿಯವರು ರೈತ ಸಂಘಕ್ಕೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು. ಸರಿಪಡಿಸಬೇಕೆಂದು ಕೇಳಲು ಹೋದೆವು. ಆದರೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಹಿನ್ನೆಲೆಯಲ್ಲಿ ದಿಢೀರ್ ಪ್ರತಿಭಟನೆ ನಡೆಸಬೇಕಾಯಿತು. ಕೊನೆಗೆ ಜು.10ರೊಳಗೆ ಸರಿಪಡಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಲಾಯಿತು ಎಂದು ತಿಳಿಸಿದರು.

ಸಂಘದ ನಗರಾಧ್ಯಕ್ಷ ಬಸಪ್ಪ, ಜಿಲ್ಲಾಧ್ಯಕ್ಷ ಸತೀಶ್, ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ, ಉಪಾಧ್ಯಕ್ಷೆ ರತ್ನಮ್ಮ, ಜಿಲ್ಲಾ ಉಪಾಧ್ಯಕ್ಷ ನಂಜುಂಡ, ಪದಾಧಿಕಾರಿ ಮಾದೇವ ನಾಯಕ, ಮುಖಂಡ ಅಹಿಂದ ಜವರಪ್ಪ, ಮರಣ ಪ್ರಮಾಣ ಪತ್ರದಿಂದ ಸಮಸ್ಯೆ ಅನುಭವಿಸುತ್ತಿರುವ ಗುರುಸ್ವಾಮಿ, ಅವರ ಪತ್ನಿ ಪ್ರೇಮ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಬುಧವಾರ ಪ್ರತಿಭಟನೆ ವೇಳೆ ಗುರುಸ್ವಾಮಿ ಅಂಗಾತ ಮಲಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ

ಕೋಸ್ಟಲ್ ಕಿಂಗ್ಸ್ ಮಂಗಳೂರು ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್‌ಗೆ ಭರ್ಜರಿ ಜಯ

ಮೈಸೂರು, ಜೂ.24(ವಿವಿಹೆಚ್)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಬುಧವಾರದ ಮೊದಲ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಕೋಸ್ಟಲ್ ಕಿಂಗ್ಸ್ ಮಂಗಳೂರು ವಿರುದ್ಧ 20 ರನ್‌ಗಳ ರೋಚಕ ಗೆಲುವು ಸಾಧಿಸಿದೆ.

ಈ ಗೆಲುವಿನೊಂದಿಗೆ ಬ್ಲಾಸ್ಟರ್ಸ್ ತಂಡ ನಾಲ್ಕು ಪಂದ್ಯಗಳಿಂದ ಆರು ಅಂಕಗಳನ್ನು ಕಲೆ ಹಾಕಿ ಅಂಕಪಟ್ಟಿಯ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಇತ್ತ ಕೋಸ್ಟಲ್ ಕಿಂಗ್ಸ್ ಮೂರು ಪಂದ್ಯಗಳಲ್ಲಿ ಮೊದಲ ಸೋಲು ಕಂಡು ಮೂರು ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ಕುಸಿದಿದೆ.

ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 226 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಬಹುತೇಕ ಅಗ್ರ ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಉಪಯುಕ್ತ ಕೊಡುಗೆ ನೀಡಿದರು.

ಬೃಹತ್ ಗುರಿ ಬೆನ್ನತ್ತಿದ ಕೋಸ್ಟಲ್ ಕಿಂಗ್ಸ್‌ಗೆ ಆರಂಭದಲ್ಲೇ ಆಘಾತ ಎದುರಾಯಿತು. ಮೊದಲ ಓವರ್‌ನಲ್ಲೇ ಆರಂಭಿಕ ಆಟಗಾರ ನಿಕಿನ್ ಜೋಸ್ ವಿಕೆಟ್ ಕಳೆದುಕೊಂಡರು. ನಂತರ ನಾಯಕ ಕರುಣ್ ನಾಯರ್ ಕೂಡ ಕೇವಲ 10 ರನ್‌ಗೆ ಔಟಾಗಿದ್ದು ತಂಡವನ್ನು ಸಂಕಷ್ಟಕ್ಕೆ ಸಿಲುಕಿಸಿತು. 12ನೇ ಓವರ್ ವೇಳೆಗೆ 97 ರನ್‌ಗೆ 5 ವಿಕೆಟ್ ಕಳೆದುಕೊಂಡು ಸೋಲಿನ ಅಂಚಿಗೆ ತಲುಪಿತ್ತು.

ಆದರೆ, ಈ ಸಂದರ್ಭದಲ್ಲಿ ಸೂರಜ್ ಅಹುಜಾ



ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ಸೂರಜ್ ಅಹುಜಾ.

ಏಕಾಂಗಿ ಹೋರಾಟ ನಡೆಸಿ ಪಂದ್ಯಕ್ಕೆ ರೋಚಕ ತಿರುವು ನೀಡಿದರು. ಅಹುಜಾ ಕೇವಲ 38 ಎಸೆತಗಳಲ್ಲಿ ಅಜೇಯ 96 ರನ್ ಸಿಡಿಸಿದರು. ಅವರ ಸ್ಫೋಟಕ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಹಾಗೂ 8 ಸಿಕ್ಸರ್‌ಗಳು ಸೇರಿದ್ದವು. ಶತಕದ ಅಂಚಿನಲ್ಲಿ ನಿಂತಿದ್ದ ಅವರು ಅದೃಷ್ಟವಶಾತ್ ಶತಕದಿಂದ ವಂಚಿತರಾದರು.

ಅವರಿಗೆ ಉತ್ತಮ ಬೆಂಬಲ ನೀಡಿದ ಸಿ.ಎ.ಕಾರ್ತಿಕ್ 27 ಎಸೆತಗಳಲ್ಲಿ ಅಜೇಯ 49 ರನ್ (3 ಬೌಂಡರಿ, 3 ಸಿಕ್ಸರ್) ಗಳಿಸಿದರು. ಈ ಜೋಡಿ ಆರನೇ ವಿಕೆಟ್‌ಗೆ ಕೇವಲ 51 ಎಸೆತಗಳಲ್ಲಿ ಮುರಿಯದ 109 ರನ್‌ಗಳ ಜೊತೆಯಾಟವಾಡಿತು. ಆದರೆ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಬೆಂಗಳೂರು ಬ್ಲಾಸ್ಟರ್ಸ್ ಪರ ಶುಭಾಂಗ್ ಹೆಗ್ಡೆ 31 ರನ್ ನೀಡಿ 2 ವಿಕೆಟ್ ಕಬಳಿಸಿ ಮಿಂಚಿದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ಪರ ವಿಕೆಟ್ ಕೀಪರ್ ಬ್ಯಾಟರ್ ಕೆ.ಎಲ್. ಶ್ರೀಜಿತ್ ಅಬ್ಬರದ ಆಟವಾಡಿ 33 ಎಸೆತಗಳಲ್ಲಿ 59 ರನ್ ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 7 ಬೌಂಡರಿ ಹಾಗೂ 2 ಸಿಕ್ಸರ್‌ಗಳು ಸೇರಿದ್ದವು.

ಆರಂಭಿಕ ರೋಹನ್ ಪಾಟೀಲ್ (14 ಎಸೆತಗಳಲ್ಲಿ 30 ರನ್) ಅವರೊಂದಿಗೆ ಶ್ರೀಜಿತ್ ಎರಡನೇ ವಿಕೆಟ್‌ಗೆ 26 ಎಸೆತಗಳಲ್ಲಿ 55 ರನ್‌ಗಳ ಜೊತೆಯಾಟವಾಡಿದರು. ಬಳಿಕ ಸಮಿತ್ ದ್ರಾವಿಡ್ ಅವರೊಂದಿಗೆ ಮೂರನೇ ವಿಕೆಟ್‌ಗೆ 33 ಎಸೆತಗಳಲ್ಲಿ 49 ರನ್ ಸೇರಿಸಿದರು. ರೋಹನ್ ಪಾಟೀಲ್ 5 ಬೌಂಡರಿ ಹಾಗೂ 1 ಸಿಕ್ಸರ್‌ನೊಂದಿಗೆ 30 ರನ್ ಗಳಿಸಿದರೆ, ಸಮಿತ್ ದ್ರಾವಿಡ್ 21 ಎಸೆತಗಳಲ್ಲಿ 39 ರನ್ (3 ಬೌಂಡರಿ, 2 ಸಿಕ್ಸರ್) ಸಿಡಿಸಿದರು.

ನಂತರ ನಾಯಕ ಶುಭಾಂಗ್ ಹೆಗ್ಡೆ (18 ಎಸೆತಗಳಲ್ಲಿ 34 ರನ್, 4 ಸಿಕ್ಸರ್) ಹಾಗೂ ಪ್ರವೀಣ್ ದುಬೆ (21 ಎಸೆತಗಳಲ್ಲಿ ಅಜೇಯ 45 ರನ್, 6 ಬೌಂಡರಿ, 2 ಸಿಕ್ಸರ್) ಐದನೇ ವಿಕೆಟ್‌ಗೆ 24 ಎಸೆತಗಳಲ್ಲಿ 47 ರನ್ ಸೇರಿಸಿ ತಂಡದ ಮೊತ್ತವನ್ನು 226ಕ್ಕೆ ಏರಿಸಿದರು.

ಕೋಸ್ಟಲ್ ಕಿಂಗ್ಸ್ ಪರ ಸಿ.ಎ. ಕಾರ್ತಿಕ್ 49 ರನ್ ನೀಡಿ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.

ಹುಬ್ಬಳ್ಳಿ ಟೈಗರ್ಸ್ ಮಣಿಸಿದ ಶಿವಮೊಗ್ಗ ಯೋಧಾಸ್

ಮೈಸೂರು, ಜೂ.24(ವಿವಿಹೆಚ್)– ಅಭಿಲಾಷ್ ಶೆಟ್ಟಿ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಹುಬ್ಬಳ್ಳಿ ಟೈಗರ್ಸ್ ತಂಡವು, ಶಿವಮೊಗ್ಗ ಯೋಧಾಸ್ ತಂಡದ ವಿರುದ್ಧ 42ರನ್ ಗಳಿಂದ ಸೋಲನನುಭವಿಸಿತು.

ಇತ್ತ ಹುಬ್ಬಳ್ಳಿ ವಿರುದ್ಧ ಗೆಲುವು ದಾಖಲಿಸಿದ ಶಿವಮೊಗ್ಗ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಜಿಗಿತ ಕಂಡಿತು.

ಮಾನಸ ಗಂಗೋತ್ರಿಯ ಗ್ಲೇಡ್ಸ್‌ನಲ್ಲಿ ನಡೆದ ಬುಧವಾರದ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದ ಶಿವಮೊಗ್ಗ ಮೊದಲು ಬ್ಯಾಟಿಂಗ್ ಆರಿಸಿಕೊಂಡಿತು. ಆರಂಭಿಕರಾಗಿ ಕಣಕ್ಕಿಳಿದ ಲವ್ನಿತ್ ಸಿಸೋಡಿಯಾ ಹಾಗೂ ಎಂ.ಜಿ. ನವೀನ್ ಬ್ಯಾಟಿಂಗ್ ನಲ್ಲಿ ಮೋಡಿ ಮಾಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 61 ಎಸೆತ ಗಳಲ್ಲಿ 118ರನ್ ಕಲೆಹಾಕಿತು. 33 ಎಸೆತ ಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಸಹಿತ 57 ರನ್ ಗಳಿಸಿದ್ದ ಸಿಸೋಡಿಯಾ ಹಾರ್ದಿಕ್ ರಾಜ್‌ಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಮತ್ತೊಂದೆಡೆ ಸುಭದ್ರವಾಗಿ ನಿಂತು ಬ್ಯಾಟ್ ಬೀಸುತ್ತಿದ್ದ ಎಂ.ಜಿ.ನವೀನ್‌ಗೆ ನಾಯಕ ಸಮರ್ ರವಿಚಂದ್ರನ್ ಸಾಥ್ ನೀಡಿದರು. ಈ ಜೋಡಿ 36 ಎಸೆತಗಳಲ್ಲಿ 65ರನ್ ಕೂಡಿಸಿತು. ಈ ವೇಳೆ 43 ಎಸೆತಗಳಲ್ಲಿ 5 ಬೌಂಡರಿ, 6 ಸಿಕ್ಸರ್ ಒಳಗೊಂಡಂತೆ 75ರನ್ ಗಳಿಸಿದ್ದ ಎಂ.ಜಿ.ನವೀನ್ ಎಲ್.ಆರ್. ಕುಮಾರ್ ಬಲೆಗೆ ಬಿದ್ದರು.

ನಾಯಕ ಸಮರ್ ರವಿಚಂದ್ರನ್ 37(25) ವಿಕೆಟ್ ಬೀಳುತ್ತಿದ್ದಂತೆ ತಂಡದ ದಿಢೀರ್ ಕುಸಿತ ಕಂಡಿತು. ಹರ್ಷಿಲ್ ಧರ್ಮಾನಿ ಗೋಲ್ಡನ್ ಡಕ್ ಆದರೆ, ಯಶೋವರ್ಧನ್ ಪರಂತಾಪ್ 2(5)



ಔಟಾದರು. ಕೊನೆಯಲ್ಲಿ ಅಬ್ಬರಿಸಿದ ತುಷಾರ್ ಸಿಂಗ್ 12 ಎಸೆತಗಳಲ್ಲಿ ಅಜೇಯ 22 ಹಾಗೂ ಭೀಮ್ ರಾವ್ ನವಲೆ ಅಜೇಯ 6(3) ರನ್ ಗಳಿಸುವ ಮೂಲಕ ಶಿವಮೊಗ್ಗ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 220 ರನ್ ಪೇರಿಸಿ, ಎದುರಾಳಿ ತಂಡಕ್ಕೆ 221 ರನ್‌ಗಳ ಬೃಹತ್ ಗುರಿ ನೀಡಿತು.

ಈ ಗುರಿ ಬೆನ್ನತ್ತಿದ ಹುಬ್ಬಳ್ಳಿಗೆ ಅಭಿಲಾಷ್ ಶೆಟ್ಟಿ ಆಘಾತ ನೀಡಿದರು. ಪ್ರಿತೇಶ್ ಇಂಗ್ಲೆ ಅವರನ್ನು ಎರಡನೇ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಪೆವಿಲಿಯನ್‌ಗಟ್ಟಿದರು. ಹೊಡಿಬಡಿ ದಾಂಡಿಗ ಮೊಹಮ್ಮದ್ ತಾಹ 44(33) ಅವರನ್ನು ಕ್ಲೀನ್ ಬೌಲ್ಡ್ ಮಾಡುವ ಮೂಲಕ ಆರಂಭಿಕ ಮುನ್ನಡೆ ತಂದುಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಆಕ್ರಮಣಕಾರಿ ಬ್ಯಾಟಿಂಗ್‌ಗೆ ಹೆಸರಾಗಿರುವ ಅಭಿನವ್ ಮನೋಹರ್ ಅವರನ್ನು ಡಕ್‌ಔಟ್ ಮಾಡಿದರೆ, 21 ಎಸೆತಗಳಲ್ಲಿ 28 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದ ಮಯಾಂಕ್ ಅಗರ್ವಾಲ್ ಅವರನ್ನು ಔಟ್ ಮಾಡುವ ಮೂಲಕ ತಂಡಕ್ಕೆ ಗೆಲುವನ್ನು ಖಚಿತಪಡಿಸಿದರು.

ಈ ಪಂದ್ಯದಲ್ಲಿ 4 ಓವರ್ ಬೌಲಿಂಗ್ ಮಾಡಿದ ಅಭಿಲಾಷ್ ಶೆಟ್ಟಿ 25 ರನ್ ಬಿಟ್ಟುಕೊಟ್ಟು ಪ್ರಮುಖ 4 ವಿಕೆಟ್ ಕಬಳಿಸಿ, ಮ್ಯಾಚ್ ವಿನ್ನಿಂಗ್ ಕ್ಯಾಮಿಯೋ ಆಡಿದರು.

ಉಳಿದಂತೆ ಹುಬ್ಬಳ್ಳಿ ಪರ ಹಾರ್ದಿಕ್ ರಾಜ್ 43(25), ಮನ್ವಂತ್ ಕುಮಾರ್ 18(8), ಎಸ್.ರಕ್ಷಿತ್ 13(10) ಹೊರತುಪಡಿಸಿ ಉಳಿದವರು ಒಂದಂಕಿ ಮೊತ್ತಕ್ಕೆ ಸುಸ್ತಾಗಿ ತಂಡದ ಸೋಲಿಗೆ ಕಾರಣರಾದರು. ಅಂತಿಮವಾಗಿ ಹುಬ್ಬಳ್ಳಿ 19.3 ಓವರ್‌ಗಳಲ್ಲಿ ಸರ್ವಪತನ ಕಂಡು 178 ರನ್ ಗಳಿಸಲಷ್ಟೆ ಶಕ್ತವಾಯಿತು. ಶಿವಮೊಗ್ಗ ಪರ ಮೊಹ್ಸಿನ್ ಖಾನ್ 2, ಜ್ಞಾನೇಶ್ವರ್ ನವೀನ್, ಯಶೋವರ್ಧನ್, ಶ್ರೀಶಾ ಆಚಾರ್ ತಲಾ ಒಂದೊಂದು ವಿಕೆಟ್ ಪಡೆದರು.

ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಸಂಖ್ಯೆ:ಚಾರಾನಅಪ್ರಾ/ನಾ.ಸೌ.ನಿ/ಹಂಚಿಕೆ–08/2026–27 ದಿನಾಂಕ: 23–06–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991ರ ಅನುಗುಣವಾಗಿ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಾಮರಾಜನಗರ ಹಾಗೂ ವಿವಿಧ ಗ್ರಾಮಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆಗೊಂಡ ಬಡಾವಣೆಯಲ್ಲಿರುವ 22 ನಾಗರೀಕ ಸೌಲಭ್ಯ ನಿವೇಶಗಳನ್ನು ಹಂಚಿಕೆ ಮಾಡಲು ಕ್ರಮವಹಿಸಲಾಗಿದ್ದು, ಸರ್ಕಾರಿ ಕಛೇರಿ/ನೋಂದಾಯಿತ ಸಂಘ ಸಂಸ್ಥೆಗಳು ದಿನಾಂಕ:30–07–2026ರೊಳಗೆ ಈ ಕಛೇರಿಯಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಮಹಮ್ಮದ್ ಅಸ್ಗರ್ (ಮುನ್ನ)
ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಸಹಿ/– ಸೀಮಾ ಹೆಚ್ ವಿ
ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:201:2026–27

ವೈಕುಂಠ ಸಮಾರಾಧನೆ



ಶ್ರೀಮತಿ ಎಸ್ ಆರ್ ಪ್ರಭಾಮಣಿ

ಮೈಸೂರಿನ ಹೆಸರಾಂತ ವ್ಯಕ್ತಿಯಾದ ದಿವಾನ್ ರಂಗಾಚಾರ್ಲುರವರ ಕುಟುಂಬಕ್ಕೆ ಸೇರಿದ ಮತ್ತು ಆಸ್ಥಾನ್ ವಿದ್ವಾನ್ ಬೆಳಕವಾಡಿ ವರದರಾಜ ಅಯ್ಯಂಗಾರ್‌ರವರ ಮೊದಲ ಪುತ್ರಿಯಾದ ಶ್ರೀಮತಿ ಎಸ್ ಆರ್ ಪ್ರಭಾಮಣಿಯವರು (ದಿವಂಗತ ಎಸ್ ಕೆ ರಾಜಾ ಅಯ್ಯಂಗಾರ್‌ರವರ ಧರ್ಮಪತ್ನಿ) ಮನೆ ನಂ. 36, 2ನೇ ಹಂತ, ಬೋಗಾದಿಯಲ್ಲಿ ವಾಸವಾಗಿದ್ದು ದಿನಾಂಕ 14–06–2026 ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧವಾಗಿ ಇವರ ವೈಕುಂಠ ಸಮಾರಾಧನೆ ಕಾರ್ಯಕ್ರಮವನ್ನು ದಿನಾಂಕ 26–06–2026 ರಂದು (ಶುಕ್ರವಾರ) ಬೆಳಿಗ್ಗೆ 10.00 ಗಂಟೆಗೆ ಶ್ರೀ ರಾಮಮಂದಿರ, 2ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, ಜಯನಗರ, ಮೈಸೂರು ಇಲ್ಲಿ ನೆರವೇರಿಸಲಾಗುವುದು

ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು

ಮಕ್ಕಳಾದ ಶ್ರೀಮತಿ ಎಸ್ ಆರ್ ಸುಮತಿ ವೆಂಕಟೇಶ್,
ಶ್ರೀಮತಿ ಎಸ್ ಆರ್ ಮಾಲಿನಿ ಶಿವಕುಮಾರ್,
ಶ್ರೀಮತಿ ಎಸ್ ಆರ್ ವೀಣಾ (ದಿವಂಗತ ಸುರೇಶ್‌ರವರ ಧರ್ಮಪತ್ನಿ) ಹಾಗೂ
ಶ್ರೀಮತಿ ಜೆ ಮಾಲಾ (ದಿವಂಗತ ಪ್ರಭಾಮಣಿಯವರ ಸೊಸೆ
ಹಾಗೂ ದಿವಂಗತ ಜಯರಾಮ್‌ರವರ ಧರ್ಮಪತ್ನಿ)
ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

9ನೇ ವರ್ಷದ ಸವಿನೆನಪು



ವಿ.ಚಿಕ್ಕತಾಯಮ್ಮ
ಆರೋಗ್ಯ ಇಲಾಖೆ (ನಿವೃತ್ತಿ)
ಮರಣ: 25.06.2017

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ತಂಗಿ ಸುಭದ್ರ, ಮೊಮ್ಮಗಳು ರಚನಾ ಹಾಗೂ ಕುಟುಂಬ ವರ್ಗದವರು ನೀಲಕಂಠನಗರ ನಂಜನಗೂಡು

